# ಕೃಷಿ ವಿಧಾನ ಮತ್ತು ವ್ಯವಸ್ಥೆಯಲ್ಲಿ ಕೃಷಿ ಸಹಕಾರಿ ಬ್ಯಾಂಕುಗಳ ಪಾತ್ರ-
# ಮಂಗಳೂರಿನ ಆಯ್ದ ಬ್ಯಾಂಕುಗಳ ಒಂದು ಅಧ್ಯಯನ

ಕನ್ನಡ ವಿಶ್ವವಿದ್ಯಾಲಯ ಹಂಪಿಗೆ ಎಂ.ಫಿಲ್ ಪದವಿಗಾಗಿ

(ಅಭಿವೃದ್ಧಿ ಅಧ್ಯಯನ)

ಸಾದರ ಪಡಿಸಿದ ಸಂಪ್ರಬಂಧ



ಸಂಶೋಧಕರು

ಪುಷ್ಪಲತಾ. ಡಿ.

ನೋಂದಣಿ ಸಂಖ್ಯೆ

KTSMDS/೦೦೪೪೪

ಮಾರ್ಗದರ್ಶಕರು

ಡಾ. ಸುರೇಶ ರಮಣ ಮಯ್ಯ

೨೦೧೨



ಕರ್ನಾಟಕ ತಿಯೋಲಾಜಿಕಲ್ ಸಂಶೋಧನ ಕೇಂದ್ರ

ಬಲ್ಮಠ, ಮಂಗಳೂರು-೫೭೫೦೦೧

# ಕೃಷಿ ವಿಧಾನ ಮತ್ತು ವ್ಯವಸ್ಥೆಯಲ್ಲಿ ಕೃಷಿ ಸಹಕಾರಿ ಬ್ಯಾಂಕುಗಳ ಪಾತ್ರ- ಮಂಗಳೂರಿನ ಆಯ್ದ ಬ್ಯಾಂಕುಗಳ ಒಂದು ಅಧ್ಯಯನ

ಕನ್ನಡ ವಿಶ್ವವಿದ್ಯಾಲಯ ಹಂಪಿಗೆ ಎಂ.ಫಿಲ್ ಪದವಿಗಾಗಿ
(ಅಭಿವೃದ್ಧಿ ಅಧ್ಯಯನ)
ಸಾದರ ಪಡಿಸಿದ ಸಂಪ್ರಬಂಧ

ಸಂಶೋಧಕರು
ಪುಷ್ಪಲತಾ. ಡಿ.

ನೋಂದಣಿ ಸಂಖ್ಯೆ
KTSMDS/೦೦೪೯೪

ಮಾರ್ಗದರ್ಶಕರು
ಡಾ. ಸುರೇಶ ರಮಣ ಮಯ್ಯ

೨೦೧೨

ಕರ್ನಾಟಕ ತಿಯೋಲಾಜಿಕಲ್ ಸಂಶೋಧನ ಕೇಂದ್ರ
ಬಲ್ಮಠ, ಮಂಗಳೂರು-೫೭೫೦೦೧

# ಯೋಗ್ಯಾತಾ ಪತ್ರ

**ಪುಷ್ಪಲತಾ.ಡಿ.** ಅವರು ನನ್ನ ಸಲಹೆ ಮತ್ತು ಮಾರ್ಗದರ್ಶನದಲ್ಲಿ **ಕೃಷಿ ವಿಧಾನ ಮತ್ತು ವ್ಯವಸ್ಥೆಯಲ್ಲಿ ಕೃಷಿ ಸಹಕಾರಿ ಬ್ಯಾಂಕುಗಳ ಪಾತ್ರ–ಮಂಗಳೂರಿನ ಆಯ್ದ ಬ್ಯಾಂಕುಗಳ ಒಂದು ಅಧ್ಯಯನ–** ಎಂಬ ಶೀರ್ಷಿಕೆಯ ಈ ಸಂಪ್ರಬಂಧವನ್ನು ಎಂ.ಫಿಲ್ ಪದವಿ ಪ್ರಾಪ್ತಿಗಾಗಿ ಹಂಪಿ ಕನ್ನಡ ವಿಶ್ವ ವಿದ್ಯಾಲಯಕ್ಕೆ ಸಲ್ಲಿಸಬೇಕೆಂದು ಸಿದ್ಧಪಡಿಸಿದ್ದಾರೆ. ಈ ಸಂಪ್ರಬಂಧವು ಸಂಶೋಧಕರ ಸ್ವಂತ ಪರಿಶ್ರಮ, ವಿಶ್ಲೇಷಣೆ, ಅಭಿಪ್ರಾಯ ಸಂಗ್ರಹ ಮತ್ತು ಸಂಶೋಧನೆಯ ಫಲಸ್ವರೂಪವಾಗಿದೆ. ಇವರು ಸಂಪ್ರಬಂಧವನ್ನು ಅಥವಾ ಇದರ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಿ ಅಥವಾ ಇನ್ನಿತರ ಉದ್ದೇಶಗಳಿಗಾಗಿಯಾಗಲಿ ಬಳಸಿಕೊಂಡಿಲ್ಲ.

**ಡಾ. ಸುರೇಶ ರಮಣ ಮಯ್ಯ**

ಸಂಶೋಧನಾ ಮಾರ್ಗದರ್ಶಕರು

**ಕರ್ನಾಟಕ ತಿಯೋಲಾಜಿಕಲ್ ಸಂಶೋಧನ ಕೇಂದ್ರ**

ಬಲ್ಮಠ, ಮಂಗಳೂರು.

# ಪ್ರಮಾಣ ಪತ್ರ

ಕನ್ನಡ ವಿಶ್ವವಿದ್ಯಾಲಯ ಹಂಪಿಗೆ ಎಂ.ಫಿಲ್ ಪದವಿಗಾಗಿ ಸಾದರ ಪಡಿಸಿದ **ಕೃಷಿ ವಿಧಾನ ಮತ್ತು ವ್ಯವಸ್ಥೆಯಲ್ಲಿ ಕೃಷಿ ಸಹಕಾರಿ ಬ್ಯಾಂಕುಗಳ ಪಾತ್ರ- ಮಂಗಳೂರಿನ ಆಯ್ದ ಬ್ಯಾಂಕುಗಳ ಒಂದು ಅಧ್ಯಯನ-** ಈ ಸಂಪ್ರಬಂಧವು ನನ್ನ ಸ್ವತಂತ್ರ ಕೃತಿಯಾಗಿದ್ದು ವಿಶ್ಲೇಷಣೆ ಮತ್ತು ಅಧ್ಯಯನದ ಫಲಶ್ರುತಿಯಾಗಿದೆ. ಕರ್ನಾಟಕ ತಿಯೋಲಾಜಿಕಲ್ ಸಂಶೋಧನಾ ಕೇಂದ್ರದಲ್ಲಿ ಡಾ. ಸುರೇಶ ರಮಣ ಮಯ್ಯ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ ಈ ಸಂಪ್ರಬಂಧವನ್ನು ಬೇರಾವುದೇ ಪದವಿ, ಡಿಪ್ಲೋಮಾ ಆಥವಾ ತತ್ಸಮಾನ ಉಪಾಧಿಗಳ ಪ್ರಾಪ್ತಿಗಾಗಿ ಅಥವಾ ಆರ್ಥಿಕ ಲಾಭಕ್ಕಾಗಿ ಇಡಿಯಾಗಿ ಅಥವಾ ಬಿಡಿಯಾಗಿ ಬಳಸಿಕೊಂಡಿಲ್ಲವೆಂದು ನಾನು ಈ ಮೂಲಕ ದೃಢಪಡಿಸುತ್ತೇನೆ.

**ಪುಷ್ಪಲತಾ.ಡಿ.**

ಸಂಶೋಧಕರು

**ಕರ್ನಾಟಕ ತಿಯೋಲಾಜಿಕಲ್ ಸಂಶೋಧನ ಕೇಂದ್ರ**

ಬಲ್ಮಠ, ಮಂಗಳೂರು.

# ಕೃಷಿ ವಿಧಾನ ಮತ್ತು ವ್ಯವಸ್ಥೆಯಲ್ಲಿ ಕೃಷಿ ಸಹಕಾರಿ ಬ್ಯಾಂಕುಗಳ ಪಾತ್ರ- ಮಂಗಳೂರಿನ ಆಯ್ದ ಬ್ಯಾಂಕುಗಳ ಒಂದು ಅಧ್ಯಯನ.

## ಅಧ್ಯಯನದ ವಿವರಗಳು


**ಅಧ್ಯಾಯ -೧ ಪೀಠಿಕೆ,ಅಧ್ಯಯನದ ಉದ್ದೇಶ,ಸ್ವರೂಪ ಮತ್ತು ವ್ಯಾಪ್ತಿ**

೧.೧ ಪೀಠಿಕೆ-ಭಾರತದ ಆರ್ಥಿಕ ವ್ಯವಸ್ಥೆಯಲ್ಲಿ ಕೃಷಿಯ ಪ್ರಾಮುಖ್ಯತೆ-ಸಹಕಾರ ಮತ್ತು ಅಭಿವೃದ್ಧಿ

೧.೨ ಅಧ್ಯಯನಕ್ಕೆ ಮೂಲವಾಗಿರುವ ಸಮಸ್ಯೆಗಳು

೧.೩ ಅಧ್ಯಯನದ ಉದ್ದೇಶಗಳು

೧.೪ ಅಧ್ಯಯನದ ವ್ಯಾಪ್ತಿ, ಅಧ್ಯಾಯಗಳು ಮತ್ತು ಇತಿಮಿತಿಗಳು

೧.೫ ಅಧ್ಯಯನ ವಿಧಾನಗಳು

೧.೬ ಕ್ಷೇತ್ರ ಪರಿಚಯ

**ಅಧ್ಯಾಯ-೨ ಸಹಕಾರ, ಕರ್ನಾಟಕದಲ್ಲಿ ಸಹಕಾರ ಚಳವಳಿಯ ಉಗಮ ಮತ್ತು ಬೆಳವಣಿಗೆ ಹಾಗೂ ಗ್ರಂಥ ಪರಾಮರ್ಶೆ**

೨.೧ ಸಹಕಾರ ಮತ್ತು ಐತಿಹಾಸಿಕ ಹಿನ್ನೆಲೆ

೨.೨ ಸಹಕಾರ ಸಂಘಗಳ ಪಾತ್ರ ಮತ್ತು ಉದ್ದೇಶ

೨.೩ ಪಂಚವಾರ್ಷಿಕ ಯೋಜನೆಗಳಲ್ಲಿ ಸಹಕಾರಿ ಚಳುವಳಿ

೨.೪ ಕರ್ನಾಟಕದಲ್ಲಿ ಸಹಕಾರಿ ಚಳುವಳಿಯ ಉಗಮ ಮತ್ತು ಬೆಳವಣಿಗೆ

೨.೫ ಗ್ರಂಥ ಪರಾಮರ್ಶೆ

**ಅಧ್ಯಾಯ-೩ ಮಂಗಳೂರಿನ ಆಯ್ದ ವ್ಯವಸಾಯ ಸಹಕಾರಿ ಬ್ಯಾಂಕುಗಳ ಕ್ಷೇತ್ರ ಕಾರ್ಯಾಧಾರಿತ ಅಧ್ಯಯನ**

೩.೧ ಬಜಪೆ ವ್ಯವಸಾಯ ಸಹಕಾರಿ ಬ್ಯಾಂಕ್‌ನ ಸಂಕ್ಷಿಪ್ತ ಇತಿಹಾಸ

೩.೨ ಕಿನ್ನಿಗೋಳಿ ವ್ಯವಸಾಯ ಸಹಕಾರಿ ಬ್ಯಾಂಕ್‌ನ ಸಂಕ್ಷಿಪ್ತ ಇತಿಹಾಸ

೩.೩ ಬ್ಯಾಂಕುಗಳ ಕಾರ್ಯ ನಿರ್ವಹಣೆಯ ವಿಶ್ಲೇಷಣೆ

**ಅಧ್ಯಾಯ-೪ ಮಂಗಳೂರಿನ ಆಯ್ದ ವ್ಯವಸಾಯ ಬ್ಯಾಂಕುಗಳ ಸದಸ್ಯರ ಕ್ಷೇತ್ರ ಕಾರ್ಯಾಧಾರಿತ ಮಾಹಿತಿ ವಿಶ್ಲೇಷಣೆ**

೪.೧ ಸದಸ್ಯರ/ಫಲಾನುಭವಿಗಳ ಪ್ರಾಥಮಿಕ ಮಾಹಿತಿಗಳು

೪.೨ ಸದಸ್ಯರ/ಫಲಾನುಭವಿಗಳ ಪೂರಕ ಮಾಹಿತಿಗಳು

೪.೩ ಕೃಷಿ ಸಹಕಾರಿ ಬ್ಯಾಂಕ್‌ನ ಚಟುವಟಿಕೆಗಳು

೪.೪ ಕೃಷಿ ಸಹಕಾರಿ ಬ್ಯಾಂಕ್‌ನ ಚಟುವಟಿಕೆಗಳು ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಯ ಮೇಲೆ ಬೀರುತ್ತಿರುವ ಪ್ರಭಾವ

೪.೫ ಕ್ಷೇತ್ರ ಕಾರ್ಯ- ಮಾಹಿತಿ ವಿಶ್ಲೇಷಣೆ

**ಅಧ್ಯಾಯ-೫ ಅಧ್ಯಯನದ ಫಲಿತಗಳು**

**ಅನುಬಂಧಗಳು**

**ಅನುಬಂಧ ೧ ಕೋಷ್ಟಕಗಳ ಪಟ್ಟಿ**

**ಅನುಬಂಧ ೨ ಪ್ರಶ್ನಾವಳಿ(ಬ್ಯಾಂಕಿಗೆ)**

**ಅನುಬಂಧ ೩ ಪ್ರಶ್ನಾವಳಿ(ಸದಸ್ಯರಿಗೆ)**

**ಅನುಬಂಧ ೪ ನಕ್ಷೆಗಳು**

**ಅನುಬಂಧ ೫ ಆಯ್ದ ಬ್ಯಾಂಕುಗಳ ಭಾವಚಿತ್ರಗಳು**

**ಪರಾಮರ್ಶನ ಗ್ರಂಥಗಳು**

# ಅಧ್ಯಾಯ –೧

## ಪೀಠಿಕೆ, ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ

# ಅಧ್ಯಾಯ –೧ ಪೀಠಿಕೆ,ಅಧ್ಯಯನದ ಉದ್ದೇಶ,ಸ್ವರೂಪ ಮತ್ತು ವ್ಯಾಪ್ತಿ

## ೧.೧ ಪೀಠಿಕೆ–ಭಾರತದ ಆರ್ಥಿಕ ವ್ಯವಸ್ಥೆಯಲ್ಲಿ ಕೃಷಿಯ ಪ್ರಾಮುಖ್ಯತೆ–ಸಹಕಾರ ಮತ್ತು ಅಭಿವೃದ್ಧಿ

ಕೃಷಿಯು ಭಾರತದ ಆರ್ಥಿಕ ವ್ಯವಸ್ಥೆಯ ಬೆನ್ನೆಲುಬಾಗಿದೆ. ಭಾರತದ ಆರ್ಥಿಕ ವ್ಯವಸ್ಥೆಯಲ್ಲಿ ಕೃಷಿಯು ಒಂದು ನಿರ್ಣಾಯಕವಾದ ಪಾತ್ರವನ್ನು ವಹಿಸಿದೆ. ಕಳೆದ ಐದು ದಶಕಗಳ ಅವಧಿಯಲ್ಲಿ ಕೈಗಾರೀಕರಣಕ್ಕಾಗಿ ನಡೆಸಿದ ಹಲವಾರು ಪ್ರಯತ್ನಗಳ ನಡುವೆಯೂ ಭಾರತವು ಇಂದಿಗೂ ಕೃಷಿ ಪ್ರಧಾನವಾದ ದೇಶವಾಗಿಯೇ ಉಳಿದಿದೆ. ಕೃಷಿ ಕ್ಷೇತ್ರವು ಇಂದು ದೇಶದ ರಾಷ್ಟ್ರಾದಾಯದಲ್ಲಿ ಸಾಕಷ್ಟು ದೊಡ್ಡ ಪಾಲನ್ನು ಹೊಂದಿದೆ. ಸ್ವಾತಂತ್ರ್ಯಾಪೂರ್ವದಲ್ಲಿ ಕೃಷಿ ರಾಷ್ಟ್ರಾದಾಯದಲ್ಲಿ ಮೂರನೇ ಎರಡು ಭಾಗದ ಪಾಲನ್ನು ಹೊಂದಿತ್ತು. ಸ್ವಾತಂತ್ರ್ಯಾ ನಂತರ ರಾಷ್ಟ್ರೀಯ ಆದಾಯಕ್ಕೆ ಇದರ ಪಾಲು ಕಡಿಮೆಯಾಗುತ್ತಾ ಬಂತಾದರೂ, ಕೃಷಿ ಇಂದಿಗೂ ತನ್ನ ಪ್ರಾಮುಖ್ಯತೆಯನ್ನು ಕಳೆದುಕೊಂಡಿಲ್ಲ. ಭಾರತದ ಒಟ್ಟು ದೇಶೀಯ ಉತ್ಪನ್ನದ ಶೇಕಡಾ ೧೯ ರಷ್ಟು ಕೃಷಿಯಿಂದಲೇ ದೊರಕಿದೆ. ಇಂದಿಗೂ ಭಾರತದಲ್ಲಿ ಕೃಷಿಯು ಒಟ್ಟು ಜನಸಂಖ್ಯೆಯ ⅔ ಭಾಗದಷ್ಟು ಜನರಿಗೆ ಗರಿಷ್ಟ ಉದ್ಯೋಗ ಒದಗಿಸುತ್ತಿರುವ ಕ್ಷೇತ್ರವಾಗಿದೆ. ಬೆಳೆಯುತ್ತಿರುವ ಜನಸಂಖ್ಯೆಗೆ ಕೃಷಿಯು ಆಹಾರ ಸಾಮಾಗ್ರಿಗಳನ್ನು ಪೂರೈಸುವ ಕೆಲಸ ಮಾಡುತ್ತಿದ್ದು ಭಾರತ ಇಂದು ಆಹಾರದಲ್ಲಿ ಸ್ವಾವಲಂಬನೆ ಸಾಧಿಸುವಲ್ಲಿ ಇದು ಸಹಕಾರಿಯಾಗಿದೆ. ಕೃಷಿಯು ಕೈಗಾರಿಕಾಭಿವೃದ್ಧಿಯಲ್ಲೂ ಪ್ರಮುಖ ಪಾತ್ರವಹಿಸುತ್ತಿದೆ. ಇವಲ್ಲದೆ ವಿದೇಶಿ ವ್ಯಾಪಾರಕ್ಕೆ ಅಪಾರ ಕೊಡುಗೆ ನೀಡುವುದರ ಮೂಲಕ, ಇದು ಸರಕಾರಕ್ಕೆ ಪ್ರಮುಖ ಆದಾಯ ತರುವ ಮೂಲವಾಗಿದೆ. ಭಾರತದಲ್ಲಿ ಕೃಷಿಯು ಪ್ರಧಾನ ಸ್ಥಾನ ಪಡೆದಿರುವುದರಿಂದ ಕೃಷಿ ಕ್ಷೇತ್ರವನ್ನು ಉಪೇಕ್ಷಿಸಿ ಸರ್ಕಾರದ ಆಯವ್ಯಯ ಪತ್ರಗಳು ಘೋಷಣೆಯಾಗುವಂತಿಲ್ಲ. ಭಾರತದಲ್ಲಿ ಕೃಷಿಯು ತೀರಾ ಹಿಂದುಳಿದಿದೆ. ಆದ್ದರಿಂದ ಕೃಷಿಯನ್ನು ಅಭಿವೃದ್ಧಿ ಪಡಿಸಲು ಸರ್ಕಾರ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕಾಗುತ್ತದೆ. ಈ ನಿಟ್ಟಿನಲ್ಲಿ ಸಹಕಾರಿ ಚಳುವಳಿಯು ಕೃಷಿಕ್ಷೇತ್ರದ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ.

ಸಹಕಾರ ಎನ್ನುವಂತಹದು ಆರ್ಥಿಕ ರಂಗಕ್ಕೆ ಸಂಬಂಧಿಸಿದ್ದುದಾಗಿದೆ. ನಾಲ್ಕಾರು ಜನರು ತಮ್ಮ ಹಿತಸಾಧನೆಗಾಗಿ ತಮ್ಮ ಶ್ರಮ, ಸಂಪನ್ಮೂಲಗಳನ್ನು ಒಂದುಗೂಡಿಸಿ ದುಡಿಯುವುದೇ ಸಹಕಾರ. ಇದಕ್ಕಾಗಿ ಸಹಕಾರ ಸಂಘವನ್ನು ರೂಪಿಸಲಾಗುತ್ತದೆ. ಸದಸ್ಯರು ಅದನ್ನು ನಿಷ್ಠೆ ಶ್ರದ್ಧೆ ಪ್ರಾಮಾಣಿಕತೆಗಳಿಂದ, ಸರಿ ಸಮಾನತೆಯ ಆಧಾರದ ಮೇಲೆ ನಡೆಸಿಕೊಂಡು ಹೋಗುತ್ತಿರುವ

ವ್ಯವಸ್ಥೆಗೆ ಸಹಕಾರ ಚಳುವಳಿ ಇಲ್ಲವೇ ಸಹಕಾರಿ ಆಂದೋಲನವೆಂದು ಹೇಳಲಾಗುತ್ತದೆ. ಸಹಬಾಳು–ಸಮಪಾಲು ಅದರ ಮೂಲತತ್ವ

"ಒಬ್ಬ ಎಲ್ಲರಿಗಾಗಿ, ಎಲ್ಲರೂ ಒಬ್ಬನಿಗಾಗಿ" ಇದು ಸಹಕಾರದ ತಿರುಳು. ಸಂಘದ ಸದಸ್ಯರಲ್ಲಿ ಮಿತವ್ಯಯ, ಉಳಿತಾಯ, ಸ್ವ–ಸಹಾಯ ಮತ್ತು ಸಹಕಾರಿ ಮನೋಭಾವನೆಯನ್ನು ಉಂಟು ಮಾಡುವುದೇ ಅದರ ಸಾಮಾನ್ಯ ಉದ್ದೇಶವಾಗಿದೆ.[೧]

ಆರ್ಥಿಕವಾಗಿ ದುರ್ಬಲರಾದವರು ಒಂಟಿಯಾಗಿ ಏನನ್ನು ಸಾಧಿಸಲು ಸಾಧ್ಯವಿಲ್ಲವೋ ಅದನ್ನು ಸಾಧಿಸುವಂತೆ ಒಂದು ನೆಲೆಯಿಂದ, ಸ್ವ–ಇಚ್ಛೆಯಿಂದ ತಮ್ಮ ಸಾಮಾನ್ಯ ಆರ್ಥಿಕ ಹಿತಾಸಕ್ತಿಯನ್ನು ಕಾಪಾಡುವುದಕ್ಕಾಗಿ ರಚಿತವಾಗುವ ಒಂದು ಸಂಘವೇ ಸಹಕಾರಿ ಸಂಘವಾಗಿದೆ. ಇಂತಹ ಸಂಘವು ಕೃಷಿ ಕ್ಷೇತ್ರದ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವಹಿಸಿದೆ.

ಹಿಂದೆ ಬ್ರಿಟೀಷ್ ಸಮ್ರಾಜ್ಯಶಾಹಿಗಳು ತಮ್ಮ ದೇಶದ ಉತ್ಪಾದನೆಗಳನ್ನು ಭಾರತೀಯರ ಮೇಲೆ ಹೇರುವ ಸಲುವಾಗಿ ಹಾಗೂ ಒಡೆದು ಆಳುವ ನೀತಿಯನ್ನು ಫಲಕಾರಿಯಾಗಿ ಮುಂದುವರಿಸಲು ಭಾರತದ ಅರ್ಥವ್ಯವಸ್ಥೆಯನ್ನು ಸಂಪೂರ್ಣವಾಗಿ ತಮ್ಮ ಹಿಡಿತದಲ್ಲಿಟ್ಟುಕೊಂಡು ಬಡತನ ತಲೆದೋರುವಂತೆ ಮಾಡಿದ ಸನ್ನಿವೇಶವನ್ನು ಇತಿಹಾಸದಿಂದ ಗುರುತಿಸಬಹುದು. ಮಳೆಗಾಲವನ್ನೇ ನಂಬಿದ್ದ ರೈತರ ವ್ಯವಸಾಯವೂ ಕೂಡ ಕೆಳಹಂತವನ್ನು ತಲುಪಿತ್ತು. ಆದ್ದರಿಂದ ರೈತರ ಸಾಲದ ಹೊರೆ ಹೆಚ್ಚುತ್ತಾ ಹೋಯಿತು.[೨] ಜನತೆ ತುಂಬಾ ಹತಾಶರಾಗಿದ್ದರು. ಆಗ ಸಾಮ್ರಾಜ್ಯಶಾಹಿ ಸರ್ಕಾರವು ಕೆಲವು ಕಾನೂನುಗಳನ್ನು ರಚಿಸಿತು. ಆಗ ಸಹಕಾರಿ ಸಂಘಗಳನ್ನು ರಚಿಸಿ ರೈತರಿಗೆ ಕಡಿಮೆ ಬಡ್ಡಿಯ ಅಥವಾ ಬಡ್ಡಿರಹಿತ ಸಾಲಗಳನ್ನು ಕೊಟ್ಟು ಸಹಾಯ ಮಾಡುವ ಯೋಚನೆಯು ಬಲಗೊಂಡಿತು.

ಕೃಷಿ ಮಾನವನ ಆರ್ಥಿಕ ಚಟುವಟಿಕೆಯಲ್ಲಿ ಬಹುಮುಖ್ಯವಾದ ಕಸುಬಾಗಿದೆ, ಬಹು ಜನರ ಜೀವನೋಪಾಯದ ಮಾರ್ಗವಾಗಿದೆ. ಮಾನವನಿಗೆ ಅಗತ್ಯವಿರುವ ಆಹಾರ ಪದಾರ್ಥಗಳನ್ನು ಪಡೆಯುವುದಕ್ಕೋಸ್ಕರ ಭೂಮಿಯನ್ನು ಉಳುಮೆ ಮಾಡುವುದೇ ಕೃಷಿಯಾಗಿದೆ. ಇಂತಹ ಕೃಷಿ ಚಟುವಟಿಕೆಗೆ ಹಣಕಾಸು ಬಹುಮುಖ್ಯವಾದುದು. ರೈತರು ಗಂಭೀರ ಬಡತನದಿಂದಾಗಿ ತಾವಾಗಿಯೇ ಹಣಕಾಸನ್ನು ಕ್ರೋಢೀಕರಿಸಲು ಶಕ್ತರಲ್ಲ. ಹಾಗಾಗಿ ತಮ್ಮ ಕೃಷಿ ಭೂ ಹಿಡುವಳಿಯಿಂದ ಉತ್ಪಾದನೆ ಹೆಚ್ಚಿಸಿಕೊಳ್ಳಲು, ಅಶಕ್ತರು, ದುರ್ಬಲರು ತಮಗೆ ಬೇಕಾದ ಹಣಕಾಸು, ಕೃಷಿ ಸಾಮಾಗ್ರಿಗಳು, ಬಿತ್ತನೆ ಬೀಜ ಮುಂತಾದುವನ್ನು ಕ್ರೋಢೀಕರಿಸಲು ಪರಸ್ಪರ

ಸಹಾಯಕ್ಕಾಗಿ ಒಂದುಗೂಡಬೇಕಾಗುತ್ತದೆ. ಶ್ರೀಮಂತರ ಶೋಷಣೆಯಿಂದ ಮುಕ್ತವಾಗಿ ತಮ್ಮ ಆರ್ಥಿಕ ಧ್ಯೇಯೋದ್ದೇಶ ಸಾಧನೆಗಾಗಿ ರಚಿಸಕೊಂಡಿರುವ ಸಂಘಗಳೇ ಕೃಷಿ ಸಹಕಾರಿ ಸಂಘಗಳಾಗಿವೆ. ಇವುಗಳು ಸಾಂಸ್ಥಿಕ ರೂಪವನ್ನು ಪಡೆದಿದ್ದು ಅಶಕ್ತರು ಸಾಧಿಸಲಾಗದ್ದನ್ನು ಸಾಧಿಸಲು ಬೇಕಾಗಿರುವ ಅನುಕೂಲತೆಗಳನ್ನು, ಶ್ರೀಮಂತರು ನಡೆಸುವ ಕೃಷಿ ಚಟುವಟಿಕೆಗಳಂತೆ ದುರ್ಬಲರೆಲ್ಲರ ಸಮತೋಲನದ ಆಧಾರದ ಮೇಲೆ ಸಬಲೀಕರಣಗೊಳಿಸಲು ರಚಿತವಾದ ಸಂಘಗಳೇ ಕೃಷಿ ಸಹಕಾರ ಸಂಘಗಳಾಗಿವೆ.

ಇಂತಹ ಸಹಕಾರ ಸಂಘಗಳು ಹೊಸ ಆರ್ಥಿಕ ವ್ಯವಸ್ಥೆಯ ಪರಿಣಾಮದಿಂದ ನಿರ್ಮಿತವಾದ ಜಾಗತೀಕರಣದ ಹಿನ್ನೆಲೆಯಲ್ಲಿ, ಮಾರುಕಟ್ಟೆ, ಆರ್ಥಿಕ, ತಾಂತ್ರಿಕ ಸಂಪನ್ಮೂಲ ಸಾಂಸ್ಥಿಕ ಸಾಮರ್ಥ್ಯ ಹಾಗೂ ದಕ್ಷತೆ ಆಧಾರದ ಮೇಲೆ ಅವುಗಳ ಪರಿಸ್ಥಿತಿಗಳನ್ನು ಗುರುತಿಸಬೇಕಾಗಿದೆ. ರಾಷ್ಟ್ರೀಯ ಆರ್ಥಿಕತೆಗಳನ್ನು ಜಾಗತೀಕರಣ ಆಶಯಗಳಿಗೆ ಹೊಂದಿಕೊಳ್ಳುವಂತೆ ಅವುಗಳನ್ನು ಜಾಗತೀಕರಣ, ಖಾಸಗೀಕರಣ ಮತ್ತು ಉದಾರೀಕರಣ ಕ್ರಿಯೆಗೆ ಒಳಪಡಿಸಲಾಗಿದೆ. ಸೇವಾವಲಯದ ಸಹಕಾರ ಕ್ಷೇತ್ರ ಸದಸ್ಯರ ಬೇಡಿಕೆಗಳು ಮತ್ತು ವಿತರಣಾ ಆಯಾಮ ಹಾಗೂ ಸಾಮಾಜಿಕ ನ್ಯಾಯದ ಕಡೆಗೆ ಮುಖ್ಯ ಗುರಿಯಾಗಿರಿಸಿಕೊಂಡಿರುತ್ತದೆ. ಹೊಸ ಆರ್ಥಿಕ ವ್ಯವಸ್ಥೆಯ ಸಂದರ್ಭದಲ್ಲಿ ರಾಷ್ಟ್ರದ ಆರ್ಥಿಕ ರಚನೆಯ ಮಲೆ ಬೀರುವ ಪ್ರಭಾವ, ಈ ಹಿನ್ನೆಲೆಯಲ್ಲಿ ಸಹಕಾರ ಕ್ಷೇತ್ರದ ಪಾತ್ರ, ಸಹಕಾರ ಕ್ಷೇತ್ರ ಎದುರಿಸುತ್ತಿರುವ ಸವಾಲುಗಳನ್ನು ಪತ್ತೆ ಹಚ್ಚಬೇಕಾಗಿದೆ. ರೈತಾಪಿ ವರ್ಗ ನಿತ್ಯವೂ ತಮ್ಮ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳಲು ಹರಸಾಹಸ ಮಾಡಬೇಕಾಗಿದೆ. ಕೇಂದ್ರ ಸರ್ಕಾರ ರಾಜ್ಯ ಸರ್ಕಾರಗಳು ತಮ್ಮ ಪಾತ್ರಗಳನ್ನು ಸಂಕುಚಿತಗೊಳಿಸುದುದರಿಂದ ಅನೇಕ ರಿಯಾಯಿತಿಗಳು ಕಣ್ಮರೆಯಾಗಿದೆ. ಇದರಿಂದ ದುರ್ಬಲ ವರ್ಗಗಳು ಆರ್ಥಿಕ ನಿರ್ವಹಣೆಯಲ್ಲಾದ ಬದಲಾವಣೆಗಳು ರೈತಾಪಿ ವರ್ಗದ ಮೇಲೆ ಬೀರಿರುವ ಪರಿಣಾಮಗಳನ್ನು ಗಮನಿಸಬೇಕಾಗಿದೆ. ವಿದೇಶಗಳ ಅಗ್ಗದ ಕೃಷಿ ಉತ್ಪನ್ನಗಳು ಮಾರುಕಟ್ಟೆಗಳನ್ನು ಪ್ರವೇಶಿಸಿ ಕೃಷಿಕರ ಜೀವನದ ಮೇಲೆ ತನ್ನದೇ ಆದ ಪ್ರಭಾವವನ್ನು ಬೀರಿದೆ. ಇನ್ನು ವಿತರಣಾ ಕ್ಷೇತ್ರದಲ್ಲಿ ಭಾರತ ಆಹಾರೋತ್ಪಾದನೆಯಲ್ಲಿ ಸ್ವಾವಲಂಬನೆ ಗಳಿಸಿದ್ದರೂ ಸಂಖ್ಯೆ ಕುಗ್ಗಿಲ್ಲ. ಉದಾರೀಕರಣ ಪ್ರಭಾವ ಹೆಚ್ಚಾಗತೊಡಗಿದಂತೆಲ್ಲ ಸರ್ಕಾರಗಳು ಪಡಿತರ ವ್ಯವಸ್ಥೆಯಲ್ಲಿ ನಿರ್ವಹಿಸುತ್ತಿದ್ದ ಪಾತ್ರವನ್ನು ಸಡಿಲಗೊಳಿಸುತ್ತಲೇ ಬಂದಿದೆ. ಉತ್ಪಾದಕ ವಿಕ್ರಯಿಸಿದ ವಸ್ತುವನ್ನು ಪುನಃ ಖರೀದಿಸಬೇಕಾದರೆ ಅದರ ದುಪ್ಪಟ್ಟು ಬೆಲೆ ತೆರಬೇಕಾಗುತ್ತದೆ. ದೈನಂದಿನ ದುಡಿಮೆಯಲ್ಲಿ ಕಡಿಮೆ ಆದಾಯಗೊಳಿಸುತ್ತಿರುವ ಕೃಷಿ ಕಾರ್ಮಿಕರ, ಅರೆ ನಿರುದ್ಯೋಗಿ ಕಾರ್ಮಿಕರ,

ಕಸುಬುದಾರರ ಕುಟುಂಬಗಳೆಲ್ಲವೂ ಸಾರ್ವಜನಿಕ ಪಡಿತರ ಆಹಾರ ಪದಾರ್ಥಗಳನ್ನು ಖರೀದಿಸಲು ಪರದಾಡುತ್ತಿದ್ದಾರೆ.

ಸಾಮಾಜಿಕ ಭದ್ರತೆಯನ್ನು ಪ್ರತಿಯೊಬ್ಬ ಮಾನವನು ತನ್ನ ಸಾಮಾಜಿಕ ಜೀವನದಲ್ಲಿ ಕಾಪಾಡಿಕೊಳ್ಳುವುದು ಸಹಜವಾಗಿದೆ. ಇಂತಹ ಸಂದರ್ಭಗಳಲ್ಲಿ ಅವನು ಇನ್ನೊಬ್ಬರನ್ನು ಅವಲಂಬಿಸುವುದು ಅನಿವಾರ್ಯ. ಇದನ್ನೇ ಸಹಕಾರ ಎನ್ನಲಾಗಿದೆ. ಮಾನವನ ಇಡೀ ಜೀವನವೇ ಸಹಕಾರ ತಳಹದಿಯ ಮೇಲೆ ನಿಂತಿದೆ. ಭಾರತದ ಒಟ್ಟು ದೇಶೀಯ ಉತ್ಪನ್ನದಲ್ಲಿ ತ್ವರಿತ ಬೆಳವಣಿಗೆ ಕಂಡುಬರುತ್ತಿರುವ ಈ ಸಂದರ್ಭದಲ್ಲಿ ಬಡವ-ಬಲ್ಲಿದರ ನಡುವೆ ಅಂತರವಿಲ್ಲದೆ ಸಮತೋಲನ ಅಭಿವೃದ್ಧಿ ಸಾಧಿಸುವುದು ಪ್ರಮುಖ ಚಿಂತನೆಯ ವಿಷಯವಾಗಿದೆ.

ಇಂತಹ ಸಂದರ್ಭಗಳಲ್ಲಿ ಬಡತನ ನಿರ್ಮೂಲನೆ, ಉದ್ಯೋಗ ಸೃಷ್ಟಿ, ಆರೋಗ್ಯ ಸುಧಾರಣೆ, ಮಹಿಳಾ ಸಶಕ್ತೀಕರಣ, ಮಾನವ ಸಂಪನ್ಮೂಲ ಅಭಿವೃದ್ಧಿ ಮೊದಲಾದ ಕ್ಷೇತ್ರಗಳಲ್ಲಿ ಸಾಮಾಜಿಕ ಸಂಘಟನೆಗಳು ಹಾಗೂ ಸರ್ಕಾರದ ಸಹಯೋಗದಿಂದ ಕಾರ್ಯ ನಿರ್ವಹಿಸುತ್ತಿರುವ ಸಹಕಾರಿ ಸಂಸ್ಥೆಗಳು ನೀಡುತ್ತಿರುವ ನೆರವಿನ ಬಗ್ಗೆ ಚಿಂತನೆ ನಡೆಸಬೇಕಾಗಿದೆ. ಕಡುಬಡವರು ಅದರಲ್ಲೂ ಯಾವುದೇ ಆಸ್ತಿ ಹೊಂದಿರದ ಅತಿ ಕಡಿಮೆ ಆದಾಯ ಹೊಂದಿರುವ ಕುಟುಂಬಗಳಿಗೆ ಈ ಸಂಸ್ಥೆಗಳು ಹಣಕಾಸು ಸೇವೆ ಲಭ್ಯ ಮಾಡಿವೆ. ಭಾರತದ ಶೇ. ೬೫ರಷ್ಟು ಕೃಷಿಕರು ಸಣ್ಣಹಿಡುವಳಿದಾರರು, ಕೃಷಿಯನ್ನೇ ಲಾಭದಾಯಕ ಮಾಡಿಕೊಳ್ಳಬಲ್ಲ ತಂತ್ರಜ್ಞಾನ, ಹಣಕಾಸಿನ ಶಕ್ತಿ ಇವರಲ್ಲಿಲ್ಲವಾದ್ದರಿಂದ ಅನೇಕರು ಬಡವರಾಗಿಯೇ ಉಳಿದಿದ್ದಾರೆ.[೩] ಹೆಚ್ಚಿನವರು ತಮ್ಮ ಭೂಮಿಯಲ್ಲಿ ವಾರ್ಷಿಕ ಒಂದು ಅಲ್ಪಾವಧಿ ಬೆಳೆಯನ್ನು ಮಾತ್ರ ಬೆಳೆಯುತ್ತಾರೆ. ಇಲ್ಲವೇ ಬೀಳು ಬಿಡುತ್ತಾರೆ. ಜೊತೆಗೆ ಸ್ವತಃ ಕೂಲಿ ಕಾರ್ಮಿಕರಾಗಿಯೇ ಉಳಿದಿದ್ದಾರೆ. ಸಣ್ಣ ಹಿಡುವಳಿದಾರರ ಇನ್ನೊಂದು ಸಮಸ್ಯೆ ಕೂಲಿಯಾಳುಗಳ ಕೊರತೆ ತಮ್ಮ ಭೂಮಿಯಿಂದ ಬರುವ ಅತ್ಯಲ್ಪ ಆದಾಯದಲ್ಲಿ ಕಾರ್ಮಿಕರಿಗೆ ವೇತನ ನೀಡಿ ಕೃಷಿ ಕೆಲಸ ಮಾಡಿಸುವ ಶಕ್ತಿಯೂ ಇಲ್ಲ. ಇಂತಹ ಸಂದರ್ಭಗಳಲ್ಲಿ ಕೃಷಿ ಚಟುವಟಿಕೆಗಳಿಗಾಗಿ ರೈತರು ಅನಿವಾರ್ಯವಾಗಿ ಹೊರಗಿನ ಮೂಲವನ್ನು ಅವಲಂಬಿಸಬೇಕಾಗುತ್ತದೆ. ಇವುಗಳಲ್ಲಿ ಸಹಕಾರಿ ಸಂಘಗಳ ಪಾತ್ರವು ಬಹು ಮುಖ್ಯವಾಗಿದೆ. ರೈತರಿಗೆ ಬೇಕಾಗಿರುವ ಸಾಲದ ವಿಧಗಳನ್ನು ಸಮಯದ ಹಾಗೂ ಉದ್ದೇಶದ ಆದಾರದ ಮೇಲಿನ ಸಾಲಗಳು ಎಂದು ಗುರುತಿಸ ಬಹುದು.[೪] ಈ ರೀತಿಯ ಸಾಲಗಳನ್ನು ರೈತ ಕಾರ್ಮಿಕರಿಗೆ ಮಾತ್ರವಲ್ಲದೇ ವಿವಿಧ ವರ್ಗದ ಜನರಿಗೆ ನೀಡಲು ವಿಭಿನ್ನ ಸಹಕಾರಿ ಸಂಘಗಳು ಸ್ಥಾಪನೆಯಾಗಿರುವುದು ಕಂಡು ಬರುತ್ತದೆ.

ದೀರ್ಘಾವಧಿಯಲ್ಲಿ ಬೆಳೆ ಬರುವಂತಹ ತೋಟಗಾರಿಕೆ ಬೆಳೆಗಳು, ಬಾವಿ ಪಂಪ್ಸೆಟ್, ಟ್ರಾಕ್ಟರ್, ಕೃಷಿ ಉಪಕರಣಗಳು ಮುಂತಾದುವುಗಳನ್ನು ಕೊಳ್ಳಲು ರೈತರಿಗೆ ದೀರ್ಘಾವಧಿ ಸಾಲದ ಅವಶ್ಯಕತೆಯಿದ್ದು ಅದನ್ನು ತಾಲೂಕು ಮಟ್ಟದಲ್ಲಿರುವ ಪ್ರಾಥಮಿಕ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳು ಪೂರೈಸಬೇಕಾಗಿದ್ದು ಇದಕ್ಕೆಂದೇ ಅವು ಸ್ಥಾಪಿತವಾದವು.[೫] ಇವುಗಳು ದೀರ್ಘಾವಧಿ ಸಾಲ ಮಾತ್ರವಲ್ಲದೆ ರೈತರಿಗೆ ಎಲ್ಲಾ ರೀತಿಯ ಸಾಲ ಸೌಲಭ್ಯಗಳನ್ನು ಒದಗಿಸುವಲ್ಲಿ ಸಹಕಾರಿಯಾಗಿದೆ.

ಆರ್ಥಿಕ ಬೆಳವಣಿಗೆಯ ವೇಗ ಸಾಮಾನ್ಯವಾಗಿ ಬಂಡವಾಳ ಹೂಡಿಕೆ, ತಂತ್ರಜ್ಞಾನ ಹಾಗೂ ಶ್ರಮಶಕ್ತಿ ಕೂಡಿದ ಉತ್ಪಾದನಾಂಗಗಳ ಪೂರೈಕೆಯ ಮೇಲೆ ಅವಲಂಬಿಸಿರುತ್ತದೆ. ರಾಜಶಾಸ್ತ್ರ ಪಿತಾಮಹ ಅರಿಸ್ಟಾಟಲ್ ಹೇಳಿರುವಂತೆ "ಮಾನವ ಸಮಾಜ ಜೀವಿ, ಸಂಘಜೀವಿ, ಅವನು ಒಬ್ಬನೇ ಜೀವಿಸಲಾರ ಒಂಟಿಯಾಗಿ ಜೀವಿಸುವುದು ಅತಿಕಷ್ಟ" ಇದಕ್ಕಾಗಿ ಮಾನವ ಸಹಜವಾಗಿಯೇ ಸಂಘಸಂಸ್ಥೆಗಳನ್ನು ಕಟ್ಟಿಕೊಂಡಿದ್ದಾನೆ.

ಈ ನಿಟ್ಟಿನಲ್ಲಿ ಪ್ರಸ್ತುತ ಅಧ್ಯಯನವು ಕೃಷಿ ಸಹಕಾರಿ ಬ್ಯಾಂಕುಗಳು ಕೃಷಿ ವ್ಯವಸ್ಥೆ ಮತ್ತು ವಿಧಾನದಲ್ಲಿ ಬೀರುವ ಪರಿಣಾಮಗಳ ಕುರಿತು ವಿಶ್ಲೇಷಣಾತ್ಮಕವಾಗಿ ವಿಷಯ ನಿರೂಪಣೆಯನ್ನು ಮಾಡಲು ಪ್ರಯತ್ನಿಸುತ್ತದೆ. ಈ ಅಧ್ಯಯನದ ಮೂಲಕ ಕೃಷಿಯ ವ್ಯವಸ್ಥೆಯ ಅಭಿವೃದ್ಧಿಗೆ ಪೂರಕವಾದ ಅಂಶಗಳನ್ನು ಗುರುತಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸಲಾಗಿದೆ. ಅಲ್ಲದೆ ಈ ಅಧ್ಯಯನಕ್ಕಾಗಿ ಮಂಗಳೂರು ತಾಲೂಕಿನ ಆಯ್ದ ಎರಡು ಕೃಷಿ ಸಹಕಾರಿ ಬ್ಯಾಂಕುಗಳ ಕಾರ್ಯ ಚಟುವಟಿಕೆಗಳನ್ನು ಕ್ಷೇತ್ರ ಕಾರ್ಯದ ಮೂಲಕ ಮಾಹಿತಿ ಸಂಗ್ರಹಿಸಿ ವಿಶ್ಲೇಷಿಸಲಾಗಿದೆ.

**೧.೨.ಅಧ್ಯಯನಕ್ಕೆ ಮೂಲವಾಗಿರುವ ಸಮಸ್ಯೆಗಳು**

ಹಳ್ಳಿಗಾಡು ದೇಶವಾಗಿರುವ ಭಾರತವು ಆರ್ಥಿಕ ಮತ್ತು ಸಾಮಾಜಿಕವಾಗಿ ಹಿಂದುಳಿದಿರುವ ಕಾರಣದಿಂದ ಆ ಕ್ಷೇತ್ರಗಳಲ್ಲಿ ಅಭಿವೃದ್ಧಿ ಸಾಧಿಸುವುದರ ಮೂಲಕ ರಾಷ್ಟ್ರ ನಿರ್ಮಾಣ ಕಾರ್ಯವಾಗಬೇಕಾಗಿದೆ. ಇದಕ್ಕೆ ಅಧಿಕ ಬಂಡವಾಳ ಮತ್ತು ಪಾಲ್ಗೊಳ್ಳುವಿಕೆಯ ಅಗತ್ಯವಿದೆ. ಆದರೆ ಇಲ್ಲಿ ಬಂಡವಾಳದ ಕೊರತೆಯನ್ನು ನಾವು ಸಾರ್ವಜನಿಕವಾಗಿ ಮತ್ತು ಖಾಸಗಿಯಾಗಿ ಎದುರಿಸುತ್ತಿದ್ದೇವೆ. ಇಂತಹ ಸಂದರ್ಭದಲ್ಲಿ ವ್ಯಕ್ತಿಯು ಒಂಟಿಯಾಗಿ ಸಾಧಿಸಲಾಗದ ಕಾರ್ಯವನ್ನು ಸಹಕಾರದ ಮೂಲಕವೇ ಸಾಧಿಸಲು ಪ್ರಯತ್ನ ಪಡುವುದು ಕ್ರಮ ಬದ್ಧವಾಗಿದೆ. ಅದರಲ್ಲೂ ಕರ್ನಾಟಕದ ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿರುವ ಜನರು ಬಹುತೇಕ

ಕೃಷಿಕರಾಗಿದ್ದು ಕೃಷಿ ಸಾಧನಗಳಾಗಿರುವ ನೇಗಿಲು, ಎತ್ತುಗಾಡಿ ಮುಂತಾದ ಮತ್ತು ಕೃಷಿ ಚಟುವಟಿಕೆಗಳಿಗೆ ಮುಖ್ಯವಾಗಿ ಬೇಕಾಗಿರುವ ಬಿತ್ತನೆ ಬೀಜ, ರಸಗೊಬ್ಬರ, ಕ್ರಿಮಿನಾಶಕ ಔಷಧಿಗಳನ್ನು ಕೊಳ್ಳಲು ಹಣದ ಕೊರತೆ ಇದ್ದು ಹಣಕ್ಕಾಗಿ ಖಾಸಗಿ ಲೇವಾದೇವಿದಾರರಿಂದ ಸಾಲ ಪಡೆಯಬೇಕಾಗಿದೆ. ಈ ಸಾಲವು ಅನೌಪಚಾರಿಕ, ಅನಧಿಕೃತ ರೀತಿಯಲ್ಲಿದ್ದು ಹೆಚ್ಚಿನ ಬಡ್ಡಿಯನ್ನು ತೆರಬೇಕಾಗಿದೆ. ಈ ರೀತಿ ಮಾಡುವುದರಿಂದ ಕೃಷಿಕನು ಸಾಲವನ್ನು ತೀರಿಸಲಾಗದೆ ಕೆಲವು ಆತ್ಮಹತ್ಯೆ ಪ್ರಕರಣಗಳು ಆಗಿರುವುದೂ ಉಂಟು. ಈ ಸಂದರ್ಭದಲ್ಲಿ ಅಂತಹ ಆರ್ಥಿಕ ದುರ್ಬಲ ವ್ಯಕ್ತಿಗಳಿಗೆ ಕೃಷಿ ಸಹಕಾರಿ ಸಂಘಗಳು ಹೆಚ್ಚು ಸಹಕಾರಿಯಾಗುತ್ತದೆ. ಒಂದು ನೂರು ವರ್ಷಗಳ ಇತಿಹಾಸವಿರುವ ಕೃಷಿ ಸಹಕಾರ ಸಂಘಗಳು ಈಗ ಕವಲುದಾರಿಯಲ್ಲಿವೆ. ಸಹಕಾರ ಕ್ಷೇತ್ರವು ೨೧ನೇ ಶತಮಾನದಲ್ಲಿ ಹೆಚ್ಚಿನ ಪೈಪೋಟಿ ಸವಾಲುಗಳನ್ನು ಎದುರಿಸಬೇಕಾಗಿದೆ. ಇಂತಹ ಪೈಪೋಟಿಗಳು ದಿನೇ ದಿನೇ ಹೆಚ್ಚುತ್ತಿದ್ದು ಸಹಕಾರ ರಂಗ ಉಳಿಯುವುದೇ ಕಷ್ಟಕರವಾಗಿದೆ. ಇದಕ್ಕೆ ಕಾರಣ ಬದಲಾದ ಆರ್ಥಿಕ ಸನ್ನಿವೇಶ. ೧೯೯೧ರಲ್ಲಿ ಹೊಸ ಆರ್ಥಿಕ ನೀತಿ ಜಾರಿಗೆ ಬಂದುದರಿಂದ ಸಹಕಾರ ಕ್ಷೇತ್ರ ಡೋಲಾಯಮಾನ ಸ್ಥಿತಿಯಲ್ಲಿದೆ. ಸ್ಪರ್ಧಾತ್ಮಕ ಮಾರುಕಟ್ಟೆಯಲ್ಲಿ ಖಾಸಗಿ ಸಂಸ್ಥೆಗಳ ಸ್ಪರ್ಧೆಯನ್ನು ಎದುರಿಸಿ ನಿಲ್ಲಬೇಕಾದ ಸ್ಥಿತಿ ಒದಗಿದೆ. ಈ ನಿಟ್ಟಿನಲ್ಲಿ ಆಯ್ದ ಕೃಷಿ ಸಹಕಾರಿ ಬ್ಯಾಂಕುಗಳ ಕಾರ್ಯವಿಧಾನಗಳ ವಿಸ್ತೃತವಾದ ಅಧ್ಯಯನವನ್ನು ಮಾಡುವುದು ಅಗತ್ಯವೆನಿಸುತ್ತದೆ.

ಭಾರತದ ಮೂಲ ಕಸುಬು ಕೃಷಿ. ಕೃಷಿಯು ಭಾರತದ ಅರ್ಥ ವ್ಯವಸ್ಥೆಯ ಬೆನ್ನೆಲುಬಾಗಿದೆ. ಈ ಆಧುನಿಕ ಪ್ರಪಂಚದಲ್ಲಿ ಕೃಷಿಯಲ್ಲಿ ನೂತನ ವೈಜ್ಞಾನಿಕ ವಿಧಾನಗಳ ಆವಿಷ್ಕಾರವಾಗಿದೆ. ಇದರ ಅಳವಡಿಕೆಗೆ ಹೆಚ್ಚಿನ ಹಣದ ಅವಶ್ಯಕತೆಯಿದೆ. ಆದರೆ ಹಣಕಾಸಿನ ಅಭಾವದಿಂದಾಗಿ ಇಂದಿಗೂ ಭಾರತದ ಹೆಚ್ಚಿನ ರೈತರು ಹಳೆಯ ಸಾಂಪ್ರದಾಯಿಕ ವಿಧಾನಗಳನ್ನು ಅಳವಡಿಸಿಕೊಂಡಿರುತ್ತಾರೆ. ಇದರಿಂದಾಗಿ ಹೆಚ್ಚಿನ ಇಳುವರಿ ಪಡೆಯಲು ಸಾಧ್ಯವಾಗುತ್ತಿಲ್ಲ. ಆದುದರಿಂದ ಕೃಷಿಯಲ್ಲಿ ಆಧುನಿಕ ವಿಧಾನಗಳನ್ನು ಅಳವಡಿಸುವುದು ಅನಿವಾರ್ಯವಾಗಿದೆ. ಇದಕ್ಕಾಗಿ ಹಣದ ಅವಶ್ಯಕತೆಯಿದ್ದು, ಈ ಸಂದರ್ಭದಲ್ಲಿ ಕೃಷಿ ಸಹಕಾರಿ ಬ್ಯಾಂಕುಗಳು ಪ್ರಮುಖ ಪಾತ್ರವಹಿಸುತ್ತದೆ. ಇಂತಹ ಕೃಷಿ ಸಹಕಾರಿ ಬ್ಯಾಂಕುಗಳು ಕೃಷಿ ಕ್ಷೇತ್ರದ ಮೇಲೆ ಉಂಟು ಮಾಡುವ ಪರಿಣಾಮಗಳ ಪರಾಮರ್ಶೆ ಮಾಡುವುದು ಅಗತ್ಯವೆನಿಸುತ್ತದೆ.

ಕೃಷಿ ಸಹಕಾರ ಬ್ಯಾಂಕುಗಳ ಸವಲತ್ತುಗಳು ಮತ್ತು ಅದರಿಂದಾಗುವ ಪ್ರಯೋಜನಗಳ ಬಗ್ಗೆ ಎಲ್ಲಾ ರೈತರಿಗೆ ಸರಿಯಾಗಿ ತಿಳಿದಿಲ್ಲ ಎಂಬುದು ಜನರ ಅಭಿಪ್ರಾಯ. ಈ ನಿಟ್ಟಿನಲ್ಲಿ ಬ್ಯಾಂಕುಗಳ ಕಾರ್ಯ

ಚಟುವಟಿಕೆಗಳನ್ನು ವಿಶ್ಲೇಷಿಸುತ್ತಾ ಅದರಿಂದ ಕೃಷಿಗೆ ಆಗುವ ನೆರವಿನ ಬಗ್ಗೆ ತಿಳಿಸುವ ಪ್ರಾಮಾಣಿಕ ಪ್ರಯತ್ನ ಮಾಡಲು ಈ ವಿಷಯವನ್ನು ಅಧ್ಯಯನ ವಿಷಯವನ್ನಾಗಿ ಆರಿಸಲಾಗಿದೆ.

ಭಾರತದಲ್ಲಿ ಕೃಷಿಗೆ ಸಂಬಂಧಿಸಿದಂತೆ ಹಲವು ಅಧ್ಯಯನಗಳು ನಡೆದಿದೆ. ಈ ಅಧ್ಯಯನಗಳು ಕೃಷಿ ಬೆಳವಣಿಗೆಯಲ್ಲಿ ತನ್ನದೇ ಆದ ಕೊಡುಗೆಯನ್ನು ಸಲ್ಲಿಸಿದೆ. ಆದರೆ ತಾಲೂಕು ಮಟ್ಟದಲ್ಲಿ ಕೃಷಿ ಸಹಕಾರಿ ಬ್ಯಾಂಕುಗಳ ಕಾರ್ಯ ಚಟುವಟಿಕೆಗಳು ಮತ್ತು ಅವುಗಳು ಕೃಷಿ ವಿಧಾನ ಮತ್ತು ವ್ಯವಸ್ಥೆಯಲ್ಲಿ ಬೀರುವ ಪರಿಣಾಮಗಳ ಬಗ್ಗೆ ಅಧ್ಯಯನ ನಡೆದಿರುವುದು ಕಡಿಮೆ. ಆದ್ದರಿಂದ ಈ ವಿಷಯವನ್ನು ಅಧ್ಯಯನ ವಿಷಯವನ್ನಾಗಿ ಆರಿಸಲಾಗಿದೆ. ಅಲ್ಲದೇ ಇಂತಹ ಕೃಷಿ ಸಹಕಾರಿ ಬ್ಯಾಂಕುಗಳು ಕ್ಷೇತ್ರೀಯ ಅಭಿವೃದ್ಧಿ ಮತ್ತು ಅವುಗಳಿಗೆ ಸಂಬಂಧಿಸಿದ ಚಟುವಟಿಕೆಗಳಲ್ಲಿ ತೋರ್ಪಡಿಸಬಹುದಾದ ಇನ್ನಷ್ಟು ಸಾಧ್ಯತೆಗಳನ್ನು ಗುರುತಿಸುವ ಸಲುವಾಗಿ ಮತ್ತು ಕ್ಷೇತ್ರ ಪ್ರಗತಿಗೆ ಪೂರಕವಾಗುವ ಸಲಹೆ ಸೂಚನೆಗಳನ್ನೊದಗಿಸಲು ಈ ವಿಷಯದಲ್ಲಿ ಅಧ್ಯಯನ ನಡೆಸುವುದು ಅಗತ್ಯವೆನಿಸುತ್ತದೆ.

ಕೃಷಿ ಸಹಕಾರಿ ಬ್ಯಾಂಕುಗಳು ಕೃಷಿ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಅಲ್ಲದೇ ಕೃಷಿ ಕ್ಷೇತ್ರ ಪ್ರಗತಿಗೆ ವಿಶೇಷ ಕೊಡುಗೆಗಳನ್ನು ಸಲ್ಲಿಸುತ್ತದೆ. ಇಂತಹ ಕೃಷಿ ಸಹಕಾರಿ ಬ್ಯಾಂಕುಗಳು ಮತ್ತು ಕೃಷಿ ಕ್ಷೇತ್ರ ಪ್ರಗತಿಗೆ ಪಾರಸ್ಪರಿಕ ಸಂಬಂಧಗಳನ್ನು ತಿಳಿಯಲು ಈ ವಿಷಯದಲ್ಲಿ ಅಧ್ಯಯನ ನಡೆಸುವುದು ಅವಶ್ಯವೆನಿಸುತ್ತದೆ.

**೧.೩.ಅಧ್ಯಯನದ ಉದ್ದೇಶಗಳು**

೧. ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲೂಕಿನ ಆಯ್ದ ಕೃಷಿ ಸಹಕಾರಿ ಬ್ಯಾಂಕುಗಳ ಕಾರ್ಯ ಚಟುವಟಿಕೆಗಳ ಸ್ಥೂಲವಾದ ನಿರೂಪಣೆಯನ್ನು ಮಾಡುವುದು.

೨. ಮಂಗಳೂರು ತಾಲೂಕಿನ ಆಯ್ದ ಕೃಷಿ ಸಹಾರಿ ಬ್ಯಾಂಕುಗಳ ಕಾರ್ಯ ವಿಧಾನಗಳ ವಿಸ್ತೃತವಾದ ಅಧ್ಯಯನವನ್ನು ಮಾಡುವುದು.

೩. ಕೃಷಿ ಸಹಕಾರಿ ಬ್ಯಾಂಕುಗಳ ಕಾರ್ಯ ಚಟುವಟಿಕೆಗಳು ಕೃಷಿ ಕ್ಷೇತ್ರದ ಮೇಲೆ ಉಂಟು ಮಾಡುವ ಪರಿಣಾಮಗಳ ಪರಾಮರ್ಶೆ ಮಾಡುವುದು.

೪. ಕೃಷಿ ಸಹಕಾರಿ ಬ್ಯಾಂಕು ಮತ್ತು ಕೃಷಿ ಕ್ಷೇತ್ರದ ಪ್ರಗತಿಗೆ ಸಂಬಂದಿಸಿರುವ ಪಾರಸ್ಪರಿಕ ಸಂಬಂಧಗಳ ಅಧ್ಯಯನ ನಡೆಸುವುದು.

೫. ಕೃಷಿ ಸಹಕಾರಿ ಬ್ಯಾಂಕುಗಳು ಕ್ಷೇತ್ರಿಯ ಕೃಷಿ ಅಭಿವೃದ್ಧಿಯಲ್ಲಿ ಮತ್ತು ತತ್ಸಂಬಂಧಿ ಚಟುವಟಿಕೆಗಳಲ್ಲಿ ತೋರ್ಪಡಿಸಬಹುದಾದ ಇನ್ನಷ್ಟು ಸಾಧ್ಯತೆಗಳನ್ನು ಗುರುತಿಸುವುದು, ಕ್ಷೇತ್ರ ಪ್ರಗತಿಗೆ ಪೂರಕವಾಗಬಹುದಾದ ಸಲಹೆ ಸೂಚನೆಗಳನ್ನೊದಗಿಸುವುದು.

## ೧.೪. ಅಧ್ಯಯನ ವ್ಯಾಪ್ತಿ,ಅಧ್ಯಾಯಗಳು ಮತ್ತು ಇತಿಮಿತಿಗಳು

ಈ ಸಂಶೋಧನಾ ಅಧ್ಯಯನದ ವ್ಯಾಪ್ತಿಯನ್ನು ಭೌಗೋಳಿಕವಾಗಿ ಕರ್ನಾಟಕ ರಾಜ್ಯದಲ್ಲಿನ ದಕ್ಷಿಣಕನ್ನಡ ಜಿಲ್ಲೆಯ ಮಂಗಳೂರು ತಾಲೂಕಿಗೆ ಸೀಮಿತಗೊಳಿಸಲಾಗಿದೆ. ಸಹಕಾರಿ ವಲಯವು ಕರ್ನಾಟಕ ಗ್ರಾಮೀಣ ಅರ್ಥವ್ಯವಸ್ಥೆಯಲ್ಲಿ ಮಹತ್ವ ಪೂರ್ಣ ಪಾತ್ರವನ್ನು ನಿರ್ವಹಿಸುತ್ತದೆ. ಹಾಗೂ ಹೆಚ್ಚಾಗಿ ಅದು ಕೃಷಿಯುನ್ನು ಅವಲಂಬಿಸಿರುತ್ತದೆ. ಕಳೆದ ಕೆಲವು ವರ್ಷಗಳಲ್ಲಿ ರಾಜ್ಯದಲ್ಲಿ ಸಹಕಾರ ಆಂದೋಲನ ಅತ್ಯುನ್ನತ ಹಾಗೂ ಪ್ರಾಥಮಿಕ ಮಟ್ಟಗಳೆರಡರಲ್ಲೂ ಸಬಲೀಕರಣಗೊಂಡಿದೆ. ರಾಷ್ಟ್ರೀಯ ಹಾಗೂ ರಾಜ್ಯ ನೀತಿಗನುಸಾರವಾಗಿ ಜನರ ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಲು ಅಂದರೆ ಕೃಷಿ ಉತ್ಪಾದನೆಯನ್ನು ಹೆಚ್ಚಿಸಲು ಹಾಗೂ ಸಹಕಾರಿ ವಾತಾವರಣವನ್ನು ರೂಪಿಸಲು ರೈತರಿಗೆ ಸಾಕಷ್ಟು ಕೃಷಿ ಸಾಲ ನೀಡಿಕೆಗೆ ಅವಕಾಶ ಕಲ್ಪಿಸುವ ಮೂಲಕ ಸಹಕಾರ ಸಂಸ್ಥೆಗಳನ್ನು ಸಂವರ್ಧಿಸಿ ಸಂಘಟಿಸಲಾಗಿದೆ. ಪ್ರಸ್ತುತ ಅಧ್ಯಯನದಲ್ಲಿ ಮಂಗಳೂರು ತಾಲೂಕಿನ ಆಯ್ದ ಬ್ಯಾಂಕುಗಳ ಸಂಘಟನಾತ್ಮಕ ವಿಷಯಗಳನ್ನು ತಿಳಿಯಲು ಹಾಗೂ ಸ್ಪರ್ಧಾತ್ಮಕತೆಯನ್ನು ಹೆಚ್ಚಿಸುವ ಸಾಧ್ಯತೆಗಳ ಬಗ್ಗೆ ಪರಾಮರ್ಶೆ ನಡೆಸಲು ಪ್ರಯತ್ನಿಸಲಾಗಿದೆ. ಈ ನಿಟ್ಟಿನಲ್ಲಿ ಸಂಶೋಧನಾ ಅಧ್ಯಯನವನ್ನು ಐದು ಮುಖ್ಯ ಅಧ್ಯಾಯಗಳಾಗಿ ವಿಂಗಡಿಸಲಾಗಿದೆ.

ಮೊದಲ ಅಧ್ಯಾಯವು ಪೀಠಿಕೆ-ಭಾರತದ ಆರ್ಥಿಕ ವ್ಯವಸ್ಥೆಯಲ್ಲಿ ಕೃಷಿಯ ಪ್ರಾಮುಖ್ಯತೆ, ಸಹಕಾರ ಮತ್ತು ಅಭಿವೃದ್ಧಿ, ಅಧ್ಯಯನಕ್ಕೆ ಮೂಲವಾಗಿರುವ ಸಮಸ್ಯೆಗಳು,ಅಧ್ಯಯನದ ಉದ್ದೇಶಗಳು,ಅಧ್ಯಯನ ವ್ಯಾಪ್ತಿ, ಅಧ್ಯಾಯಗಳು ಮತ್ತು ಇತಿಮಿತಿಗಳು, ಅಧ್ಯಯನದ ವಿಧಾನಗಳು, ಕ್ಷೇತ್ರ ಪರಿಚಯಕ್ಕೆ ಸಂಬಂಧಿಸಿದಂತೆ ಸಂಕ್ಷಿಪ್ತ ವಿವರಗಳನ್ನೊಳಗೊಂಡಿದೆ.

ಎರಡನೆಯ ಅಧ್ಯಾಯದಲ್ಲಿ ಸಹಕಾರದ ಅರ್ಥ ಮತ್ತು ಐತಿಹಾಸಿಕ ಹಿನ್ನಲೆ, ಸಹಕಾರ ಸಂಘಗಳ ಪಾತ್ರ ಮತ್ತು ಉದ್ದೇಶ, ಪಂಚವಾರ್ಷಿಕ ಯೋಜನೆಗಳಲ್ಲಿ ಸಹಕಾರಿ ಚಳುವಳಿ, ಕರ್ನಾಟಕದಲ್ಲಿ ಸಹಕಾರಿ ಚಳುವಳಿಯ ಉಗಮ ಮತ್ತು ಬೆಳವಣಿಗೆ, ಗ್ರಂಥಪರಾಮರ್ಶೆ ಇತ್ಯಾದಿಗಳ ಕುರಿತು ಸಂಕ್ಷಿಪ್ತ ಮಾಹಿತಿಯನ್ನು ನೀಡಲಾಗಿದೆ.

ಮೂರನೇ ಅಧ್ಯಾಯವು ಮಂಗಳೂರಿನ ಆಯ್ದ ವ್ಯವಸಾಯ ಸಹಕಾರಿ ಬ್ಯಾಂಕುಗಳ ಪರಿಚಯ, ಕ್ಷೇತ್ರಕಾರ್ಯದ ಮೂಲಕ ಪಡೆದುಕೊಂಡ ಮಾಹಿತಿ ವಿಶ್ಲೇಷಣೆಗಳನ್ನೊಳಗೊಂಡಿದೆ. ಇಲ್ಲಿ ಬ್ಯಾಂಕಿನ ವಿವಿಧ ಚಟುವಟಿಕೆಗಳು, ಕೃಷಿ ಪ್ರಗತಿಯಲ್ಲಿ ಈ ಸಹಕಾರಿ ಬ್ಯಾಂಕುಗಳ ಪಾತ್ರಗಳ ಬಗ್ಗೆ ಪರಾಮರ್ಶೆಯನ್ನು ವಿವರಿಸಲಾಗಿದೆ.

ನಾಲ್ಕನೆಯ ಅಧ್ಯಾಯವು ನೇರವಾಗಿ ಸದಸ್ಯರ ಪಾಲ್ಗೊಳ್ಳುವಿಕೆಯ ಕುರಿತಾಗಿದೆ. ಇಲ್ಲಿ ಆಯ್ದ ಕೃಷಿ ಸಹಕಾರಿ ಬ್ಯಾಂಕುಗಳ ಸದಸ್ಯರ ಮಾಹಿತಿಯನ್ನು ಕ್ಷೇತ್ರ ಕಾರ್ಯದ ಮೂಲಕ ಸಂಗ್ರಹಿಸಿ ವಿಶ್ಲೇಷಣೆಯನ್ನು ಮಾಡಲಾಗಿದೆ. ಇದು ಕೃಷಿ ಬ್ಯಾಂಕಿನ ಸದಸ್ಯರಾದ ವರ್ಷ, ಸದಸ್ಯರ ಉದ್ದೇಶ, ಅನುಭವ, ಭಾಗವಹಿಸುವಿಕೆ ಮತ್ತು ಸದಸ್ಯರು ಹೆಚ್ಚು ಮಹತ್ವ ನೀಡುವ ವಿಷಯ ಮುಂತಾದ ಪ್ರಾಥಮಿಕ ಮಾಹಿತಿಗಳನ್ನೊಳಗೊಂಡಿದೆ. ಅಲ್ಲದೆ ಆಯ್ದ ಕೃಷಿ ಸಹಕಾರಿ ಬ್ಯಾಂಕುಗಳ ಕಾರ್ಯ ಚಟುವಟಿಕೆಗಳು ಕೃಷಿ ಮತ್ತು ಗ್ರಾಮೀಣಾಭಿವೃದ್ಧಿಯಲ್ಲಿ ಬೀರುವ ಪರಿಣಾಮಗಳ ಕುರಿತು ವಿಶ್ಲೇಷಿಸಲಾಗಿದೆ.

ಐದನೇ ಅಧ್ಯಾಯವು ಅಧ್ಯಯನದ ಫಲಿತಗಳನ್ನೊಳಗೊಂಡಿದೆ. ಅಧ್ಯಯನದ ಫಲಿತಾಂಶ, ಸಲಹೆ ಸೂಚನೆಗಳು, ನೀತಿ ನಿರೂಪಣೆಯ ಮಹತ್ವ, ಇನಷ್ಟು ಸಂಶೋಧನಾ ಸಾಧ್ಯತೆಗಳು ಮತ್ತು ಸಂಕ್ಷಿಪ್ತ ಉಪಸಂಹಾರವನ್ನು ನೀಡಲಾಗಿದೆ.

**ಅಧ್ಯಯನದ ಇತಿಮಿತಿಗಳು**

ಸಂಶೋಧಕನು ಗುರುತಿಸುವಂತೆ ಪ್ರಸ್ತುತ ಅಧ್ಯಯನದ ಪ್ರಮುಖ ಮಿತಿಗಳು ವಸ್ತು–ವಿಷಯ ನಿರ್ದಿಷ್ಟತೆ ಹಾಗೂ ಪ್ರಾದೇಶಿಕ ನಿರ್ದಿಷ್ಟತೆ ಅಥವಾ ಮಿತಿಗಳಿಗೊಳಪಟ್ಟಂತೆ ಈ ಕೆಳಗಿನಂತೆ ಮಾಡಲಾಗಿದೆ.

೧. ಕೃಷಿ ವಿಧಾನ ಮತ್ತು ವ್ಯವಸ್ಥೆಯಲ್ಲಿ ಕೃಷಿ ಸಹಕಾರಿ ಸಂಘಗಳ ಪಾತ್ರ–ಮಂಗಳೂರಿನ ಆಯ್ದ ಬ್ಯಾಂಕುಗಳ ಒಂದು ಅಧ್ಯಯನ–ಎಂಬ ಈ ಅಧ್ಯಯನವನ್ನು ಮಂಗಳೂರು ತಾಲೂಕಿಗೆ ಸೀಮಿತಗೊಳಿಸಲಾಗಿದೆ.

೨. ಈ ಅಧ್ಯಯನದಲ್ಲಿ ಬಜಪೆ ವ್ಯವಸಾಯ ಸಹಕಾರಿ ಬ್ಯಾಂಕು ಮತ್ತು ಕಿನ್ನಿಗೋಳಿ ವ್ಯವಸಾಯ ಸಹಕಾರಿ ಬ್ಯಾಂಕ್ ಎಂಬ ಎರಡು ಬ್ಯಾಂಕುಗಳನ್ನು ಆಯ್ದುಕೊಂಡು ಅವುಗಳ ಕಾರ್ಯ ವೈಖರಿ ಸಂಘಟನಾತ್ಮಕ ಬೆಳವಣಿಗೆ ಮತ್ತು ಕೃಷಿ ಅಭಿವೃದ್ಧಿ ಮೇಲೆ ಬೀರುವ ಪರಿಣಾಮಗಳನ್ನು ಪರಾಮರ್ಶಿಸಲಾಗಿದೆ.

೩. ನಮ್ಮ ಅಧ್ಯಯನವು ಬ್ಯಾಂಕುಗಳ ೫ ವರ್ಷಗಳ ಚಟುವಟಿಕೆಗಳಿಗೆ ಮಾತ್ರ ಸೀಮಿತವಾಗಿದ್ದು ಬ್ಯಾಂಕುಗಳ ಪ್ರಾರಂಭದಿಂದ ಈ ವರೆಗಿನ ಚಟುವಟಿಕೆಗಳನ್ನು ಒಳಗೊಂಡಿರುವುದಿಲ್ಲ.

೪. ಕ್ಷೇತ್ರಾಕಾರ್ಯಾಧಾರಿತ ಅಧ್ಯಯನದ ಸವಾಲುಗಳು ಮತ್ತು ಸಾಮಾನ್ಯ ಇತಿಮಿತಿಗಳು ಈ ಅಧ್ಯಯನಕ್ಕೂ ಅನ್ವಯವಾಗುತ್ತದೆ.

**೧.೫. ಅಧ್ಯಯನದ ವಿಧಾನಗಳು**

ಸಂಶೋಧನೆಗೆ ಸಂಬಂಧಿಸಿದಂತೆ ಮಾಹಿತಿಯನ್ನು ಪ್ರಾಥಮಿಕ ಮೂಲ ಮತ್ತು ಅನುಷಂಗಿಕ ಮೂಲಗಳಿಂದ ಪಡೆಯಲಾಗುವುದು. ಪ್ರಸ್ತುತ ಅಧ್ಯಯನವು ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲೂಕಿನ ಆಯ್ದ ಕೃಷಿ ಸಹಕಾರಿ ಬ್ಯಾಂಕುಗಳ ಕಾರ್ಯ ಚಟುವಟಿಕೆಗಳು ಮತ್ತು ಕೃಷಿ ವಿಧಾನ ಮತ್ತು ವ್ಯವಸ್ಥೆಯಲ್ಲಿ ಅವುಗಳು ಬೀರುವ ಪರಿಣಾಮಗಳ ಪರಾಮರ್ಶೆ ಮಾಡುವುದಾಗಿದೆ.

**ಉದ್ದೇಶಿತ ಪ್ರಾಥಮಿಕ ಮೂಲಗಳು**

೧. ಪ್ರಶ್ನಾವಳಿಗಳ ಮೂಲಕ ಆಯ್ದ ಬ್ಯಾಂಕುಗನ್ನು ಸಂಪರ್ಕಿಸಿ ಬ್ಯಾಂಕುಗಳ ಕಾರ್ಯ ಚಟುವಟಿಕೆಗಳ ಮಾಹಿತಿ ಪಡೆಯುವುದು.

೨. ಪ್ರಶ್ನಾವಳಿಗಳ ಮೂಲಕ ನಿರ್ದಿಷ್ಟ ಸಂಖ್ಯೆ ಬ್ಯಾಂಕು ಗ್ರಾಹಕರ/ಫಲಾನುಭವಿಗಳ ಕೃಷಿ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ವಿವರ ಪಡೆಯುವುದು.

೩. ಸಂವಾದದ ಮೂಲಕ ಬ್ಯಾಂಕು ಅಧಿಕಾರಿ ವರ್ಗ ಮತ್ತು ಆಯ್ದ ಗ್ರಾಹಕರ ಅಭಿಪ್ರಾಯ / ಧೋರಣೆಗಳನ್ನು ಪಡೆದು ಪರಾಮರ್ಶಿಸುವುದು.

ಈ ರೀತಿಯಾಗಿ ಅಧ್ಯಯನಕ್ಕೆ ಸಂಬಂಧಿಸಿದಂತೆ ಮಾಹಿತಿಗಳನ್ನು ಪ್ರಶ್ನಾವಳಿ, ಸಂದರ್ಶನ ಮತ್ತು ಸಂವಾದಗಳ ಮೂಲಕ ಪಡೆಯಲು ಉದ್ದೇಶಿಸಲಾಗಿದೆ. ಇವೆಲ್ಲವೂ ಪ್ರಾಥಮಿಕ ಮೂಲಗಳ ಆಕರವಾಗಿದೆ.

**ಅನುಷಂಗಿಕ ಮೂಲಗಳು:**

ಅಧ್ಯಯನಕ್ಕೆ ಸಂಬಂಧಿಸಿದ ಮಾಹಿತಿಗಳನ್ನು ಈಗಾಗಲೇ ಪ್ರಕಟಿತ ಇಲ್ಲವೇ ಅಪ್ರಕಟಿತ, ಖಾಸಗಿಯಾದ ಇಲ್ಲವೇ ಸಾರ್ವಜನಿಕ ಸ್ವರೂಪದ ದಸ್ತಾವೇಜುಗಳಿಂದ ಇಲ್ಲವೇ ದಾಖಲೆಗಳಿಂದ

ಪಡೆಯಬಹುದಾಗಿದೆ. ಇದನ್ನು ಅನುಷಂಗಿಕ ಮಾಹಿತಿ ಸಂಗ್ರಹಣ ವಿಧಾನ ಎಂದು ಕರೆಯಲಾಗಿದೆ.

**ಉದ್ದೇಶಿತ ಅನುಷಂಗಿಕ ಮೂಲಗಳು**

೧. ಸಂಶೋಧನಾ ವಿಷಯಕ್ಕೆ ಸಂಬಂಧಿಸಿದ ಪ್ರಕಟಿತ ಗ್ರಂಥಗಳ ಹಾಗೂ ವರದಿಗಳ ಅಧ್ಯಯನದ ಮೂಲಕ ವಿಷಯ ಸಂಗ್ರಹ ಮಾಡುವುದು.
೨. ಪತ್ರಿಕೆ, ನಿಯತಕಾಲಿಕ ಮತ್ತಿತರ ಆಕರ ಗ್ರಂಥಗಳಿಂದ ಮಾಹಿತಿ ಸಂಗ್ರಹ ಮಾಡುವುದು.
೩. ಇಲಾಖಾ ಮೂಲಗಳಿಂದ ಪ್ರಕಟಿತ ಮತ್ತು ಅಪ್ರಕಟಿತ ವಿವರಗಳ ಸಂಗ್ರಹ ಮತ್ತು ಕ್ರೋಢೀಕರಣ.

**೧.೬. ಕ್ಷೇತ್ರ ಪರಿಚಯ**

ದಕ್ಷಿಣ ಕನ್ನಡ ಜಿಲ್ಲೆಯ ಕರ್ನಾಟಕ ರಾಜ್ಯದ ಕರಾವಳಿ ಪ್ರದೇಶದಲ್ಲಿರುವ ದಕ್ಷಿಣ ಕನ್ನಡ ಜಿಲ್ಲೆಯ ಉತ್ತರದಲ್ಲಿ ಉಡುಪಿ ಜಿಲ್ಲೆಯನ್ನು, ಈಶಾನ್ಯದಲ್ಲಿ ಚಿಕ್ಕಮಗಳೂರು ಜಿಲ್ಲೆಯನ್ನು ಪೂರ್ವದಲ್ಲಿ ಹಾಸನ ಜಿಲ್ಲೆಯನ್ನು ಆಗ್ನೇಯದಲ್ಲಿ ಕೊಡಗು ಜಿಲ್ಲೆ ಹಾಗೂ ದಕ್ಷಿಣಕ್ಕೆ ಕೇರಳದ ಕಾಸರಗೋಡು ಜಿಲ್ಲೆಗಳಿಂದ ಸುತ್ತುವರಿದಿದೆ. ಪಶ್ಚಿಮದಲ್ಲಿ ಅರಬ್ಬೀ ಸಮುದ್ರವನ್ನು ಹೊಂದಿರುವ ದ.ಕ.ಜಿಲ್ಲೆಯ ಮುಖ್ಯ ಪಟ್ಟಣ ಮಂಗಳೂರಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ೪೭೭೦ ವ್ಯಾಪ್ತಿಯ ಚದರ ಕಿ.ಮೀ ವಿಸ್ತೀರ್ಣವನ್ನು ಹೊಂದಿವೆ. ಪ್ರತೀ ೧ ಚದರ ಕಿಲೋ ಮೀ ೩೯೦ ಮಂದಿ ಜನರನ್ನು ಒಳಗೊಂಡಿದೆ. ದಕ್ಷಿಣ ಕನ್ನಡ ಜಲ್ಲೆಯಲ್ಲಿ ಒಟ್ಟು ೨೫೪ ಗ್ರಾಮಗಳಿವೆ.

ಪ್ರಾಕೃತಿಕ ಸಂಪತ್ತುಗಳಿಂದ ನಳನಳಿಸುತ್ತಿರುವ ದಕ್ಷಿಣ ಕನ್ನಡ ಜಿಲ್ಲೆಯು ೫ ತಾಲೂಕುಗಳಾಗಿ ವಿಂಗಡಿಸಲ್ಪಟ್ಟಿದೆ. ಅವುಗಳೆಂದರೆ ಮಂಗಳೂರು, ಬಂಟ್ವಾಳ, ಬೆಳ್ತಂಗಡಿ, ಪುತ್ತೂರು ಮತ್ತು ಸುಳ್ಯ. ೧೯೯೭ರಲ್ಲಿ ಅಂದರೆ ದಕ್ಷಿಣ ಕನ್ನಡ ಜಿಲ್ಲೆ ವಿಭಜನೆಗೊಳ್ಳುವುದಕ್ಕಿಂತ ಮೊದಲು ಉಡುಪಿ, ಕುಂದಾಪುರ ಹಾಗೂ ಕಾರ್ಕಳ ತಾಲೂಕುಗಳನ್ನು ಒಳಗೊಂಡಿತ್ತು. ದ.ಕ, ಉಡುಪಿ ಮತ್ತು ಕಾಸರಗೋಡಿನ ಪ್ರದೇಶಗಳಲ್ಲಿ ತುಳು ಬಹುಜನರ ಆಡುವ ಭಾಷೆಯಾದ ಕಾರಣ ತುಳುನಾಡು ಎಂದು ಈಗಲೂ ಕರೆಯುವುದಿದೆ. ೮ ಹಾಗೂ ೧೪ನೇ ಶತಮಾನದಲ್ಲಿ ಅಲೂಪ ಅರಸರು ಈ ಪ್ರದೇಶವನ್ನು ಆಳಿದ್ದರೆಂದೂ ಈ ಕಾರಣದಿಂದ ತುಳು ಮಾತಾನಾಡುವ ಜನರಿರುವ ಜಿಲ್ಲೆಗಳನ್ನು ಕರ್ನಾಟಕ ರಾಜ್ಯವು ಒಳಗೊಂಡಿದೆ ಎನ್ನಲಾಗಿದೆ. (ವಿಕಿ ಪೀಡಿಯ).

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಂಗಳೂರು, ಬಂಟ್ವಾಳ, ಪುತ್ತೂರು, ಸುಳ್ಯ, ಮೂಡಬಿದ್ರೆ, ಕಡಬ, ಸುರತ್ಕಲ್, ಮುಲ್ಕಿ ಹಾಗೂ ಧರ್ಮಸ್ಥಳ ಪ್ರಮುಖ ಪಟ್ಟಣಗಳಾಗಿದ್ದು ಕೈಗಾರಿಕೆ, ಶಿಕ್ಷಣ, ಉದ್ಯೋಗ, ವ್ಯಾಪಾರದ ದೃಷ್ಟಿಯಿಂದ ವಿದೇಶಿಯರನ್ನು ತನ್ನತ್ತ ಸೆಳೆಯುತ್ತಿದೆ. ಮಾತ್ರವಲ್ಲ ಈ ಜಿಲ್ಲೆ ಕೆಂಪು ಮಣ್ಣಿನ ಹೆಂಚು / ಮಂಗಳೂರು ಹೆಂಚು, ಗೋಡಂಬಿ, ಬ್ಯಾಂಕು ವ್ಯವಹಾರ, ಶಿಕ್ಷಣ, ಕೈಗಾರಿಕೆಗಳಿಗೆ ಹೆಸರಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯು ಪುರಾಣ ಪ್ರಸಿದ್ಧ ಐತಿಹಾಸಿಕ ಹಿನ್ನೆಲೆಯುಳ್ಳ ಊರುಗಳನ್ನು ಹೊಂದಿದೆ. ಪ್ರಮುಖವಾದ ಊರುಗಳೆಂದರೆ ಮೂಡಬಿದ್ರೆ, ಕೃಷ್ಣಾಪುರ ಮಠ, ಧರ್ಮಸ್ಥಳ, ಕದ್ರಿ, ಉಳ್ಳಾಲ, ಕಾರಿಂಜ, ಕುಕ್ಕೆ ಸುಬ್ರಹ್ಮಣ್ಯ, ಮಗಳೂರು, ಸುಲ್ತಾನ್ ಬತ್ತೇರಿ, ಪುತ್ತೂರು, ವಿಟ್ಲ, ಉಪ್ಪಿನಂಗಡಿ, ಕೇಪು, ಅನಂತಾಡಿ, ಬಲ್ನಾಡು, ಜಮಾಲಾಬಾದ್ ಕೋಟೆ ಇತ್ಯಾದಿ.

ಸಂಪ್ರದಾಯ, ಪದ್ಧತಿ, ಆಚರಣೆ ಹೀಗೆ ಸಾಂಸ್ಕೃತಿಕ ನೆಲೆವೀಡಾದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಾಗದೇವತೆಯ ಆರಾಧನೆ, ಭೂತಾರಾಧನೆ, ಕಂಬಳ, ಕೋಳಿ ಅಂಕ ಮೊದಲಾದವುಗಳು ಹೆಚ್ಚು ಪ್ರಾಮುಖ್ಯತೆಯನ್ನು ಪಡೆದಿದೆ. ದಕ್ಷಿಣ ಕನ್ನಡ ಜಿಲ್ಲೆಯು ಉತ್ತಮ ರಸ್ತೆಗಳ ಜಾಲವನ್ನು ಹೊಂದಿದ್ದು, ಎನ್.ಎಚ್ ೧೭ ಉಡುಪಿ, ಕಾರಾವಾರ, ಮುಂಬೈ, ಗೋವಾ, ಕೊಚ್ಚಿನ್ ಸಂಪರ್ಕ ಹೊಂದಿದ್ದರೆ. ಎನ್. ಎಚ್೧೩ ಶಿವಮೊಗ್ಗ ಹಾಗೂ ಸೋಲಾಪುರಕ್ಕೆ ಹಾಗು ಎನ್. ಎಚ್೪೮ ಬೆಂಗಳೂರು, ಹಾಸನ, ಸಕಲೇಶಪುರಕ್ಕೆ ಸಂಪರ್ಕವನ್ನುಂಟು ಮಾಡುತ್ತದೆ. ಇಷ್ಟು ಮಾತ್ರವಲ್ಲದೆ ದಕ್ಷಿಣ ಕನ್ನಡ ಜಿಲ್ಲೆಯ ವ್ಯಾಪ್ತಿಯಲ್ಲಿ ಅಂತರಾಷ್ಟ್ರೀಯ ವಿಮಾನ ನಿಲ್ದಾಣ, ರೈಲು ನಿಲ್ದಾಣಗಳು, ಬಂದರುಗಳದ್ದು ದೂರ ಸಂಪರ್ಕವನ್ನು ಹೊಂದಿದೆ.

ಈ ಜಿಲ್ಲೆಯ ಪ್ರಮುಖ ವೃತ್ತಿ ಕೃಷಿಯಾಗಿದ್ದು ಭತ್ತ, ಅಡಿಕೆ, ಕರಿಮೆಣಸು, ಕೋಕೋಗಳು ಪ್ರಮುಖ ಬೆಳೆಯುವ ಬೆಳೆಗಳಾಗಿವೆ. ಅಲ್ಲದೆ ಎ.ಪಿ.ಎಂ.ಸಿ ಮಾರುಕಟ್ಟೆ ಹಾಲು ಶೀತಲೀಕರಣ ಘಟಕವನ್ನು ಹೊಂದಿರುವ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೈಗಾರಿಕಾ ಘಟಕಗಳೂ ಇದ್ದು ವಾಣಿಜ್ಯ ವ್ಯವಹಾರದ ಅಭಿವೃದ್ಧಿಗೆ ಕಾರಣವಾಗಿದೆ. ಬುದ್ಧಿವಂತ ಜಿಲ್ಲೆಯೆನಿಸಿರುವ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶೈಕ್ಷಣಿಕ ಹಾಗೂ ಸಂಶೋಧನಾ ಸಂಸ್ಥೆಗಳೇನು ಕಮ್ಮಿಯಿಲ್ಲ.

ಪ್ರೊ. ಜೋಶಿ ಮತ್ತು ಲೋಬೋ ರವರು (೨೦೦೯) ಅಭಿಪ್ರಾಯ ಪಡುವಂತೆ ಕರಾವಳಿ ಕರ್ನಾಟಕ ಅಭಿವೃದ್ಧಿಯ ಸಾಧ್ಯತೆಗಳನ್ನು ಗುರುತಿಸುವ ಆಳವಾದ ಅಧ್ಯಯನಗಳು ಈಗ ಅವಶ್ಯವಾಗಿದೆ. ಅಭಿವೃದ್ಧಿಯ ವೇಗ ಮತ್ತು ಮಟ್ಟಗಳನ್ನು ಗಮನಿಸಿದರೆ ಈ ಪ್ರದೇಶ ಉಡುಪಿ

ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳು ಮುಂದುವರಿದಿವೆ. ಕರ್ನಾಟಕ ಸರ್ಕಾರವು ಈಗಾಗಲೇ 'ಕರಾವಳಿ ಅಭಿವೃದ್ಧಿ ಪ್ರಾಧಿಕಾರ' ದ ಸ್ಥಾಪನೆ ಮಾಡಿದ್ದು ಮಾಹಿತಿ ಸಂಶೋದನೆಗಳು ಒಳಗೊಂಡಿದ್ದು ಅಭಿವೃದ್ಧಿಯ ಹೆಚ್ಚಿನ ಅವಶ್ಯಕತೆಗಳನ್ನು ಇದು ಪೂರೈಸಬಲ್ಲದು. ಜೊತೆಗೆ ಕರಾವಳಿ ಕರ್ನಾಟಕದ ಅಭಿವೃದ್ಧಿ ಅಧ್ಯಯನ ಸಂಸ್ಥೆಯ ಅವಶ್ಯಕತೆಯೂ ಇದೆ ಎಂದು ಜೋಶಿ ಮತ್ತು ಲೋಬೋ ರವರು ತಿಳಿಸಿದ್ದಾರೆ.[೬]

ಪ್ರಸ್ತುತ ಅಧ್ಯಯನವು ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲೂಕಿಗೆ ಸೀಮಿತವಾಗಿದ್ದು, ಇಲ್ಲಿ ಎರಡು ಕೃಷಿ ಸಹಕಾರಿ ಬ್ಯಾಂಕುಗಳನ್ನು ಆಯ್ದುಕೊಳ್ಳಲಾಗಿದೆ. ದ.ಕ ಜಿಲ್ಲೆಯ ಮಂಗಳೂರು ತಾಲೂಕು ೮೩೪ ಚ.ಕಿ.ಮೀ. ವಿಸ್ತೀರ್ಣವನ್ನು ಹೊಂದಿದ್ದು ೨೦೧೧ ಜನಗಣತಿಯ ಪ್ರಕಾರ ೯,೨೧,೭೦೭ ಜನಸಂಖ್ಯೆಯನ್ನೊಳಗೊಂಡಿದೆ.

## ಉಲ್ಲೇಖಗಳು


೧. ಹಗ್ ಇ.ಎಂ.(೧೯೯೧), ದಿ ಕೋ–ಆಪರೇಟಿವ್ ಮೂವೆಂಟ್ ಇನ್ ಇಂಡಿಯಾ ಆಕ್ಸ್ಫರ್ಡ್ ಯೂನಿವರ್ಸಿಟಿ ಪ್ರೆಸ್, ಡೆಲ್ಲಿ.

೨. ಸ್ಯಾಂಡರ್ಸ್.ಹೆಚ್.ಸಿ.(೧೯೮೭), ಸಹಕಾರ ವಿಸ್ತರಣಾ ಸೇವೆ(ಅನುವಾದ:ರಾಮ ಮೂರ್ತಿ,ಹೆಚ್.ಎಸ್.), ಕೃಷಿ ವಿಶ್ವ ವಿದ್ಯಾಲಯ, ಬೆಂಗಳೂರು, ಪು.೧೮.

೩. ಅನುರಾಗ್ ಮಿಶ್ರ (೨೦೦೮), ಹಣಕಾಸು ಮತ್ತು ಸಾಮಾಜಿಕ ಭದ್ರತೆ, ಯೋಜನಾ ಸಮಾಚಾರ ಮತ್ತು ಪ್ರಚಾರ ಸಚಿವಾಲಯ, ಬೆಂಗಳೂರು, ಪು.೫

೪. ಅನಂತರಾಮಯ್ಯ ಎನ್.(೧೯೯೩),'ಭಾರತದ ಗ್ರಾಮೀಣಾಭಿವೃದ್ಧಿ ಒಂದು ವಿಮರ್ಶೆ', ಅಂಬುಜ ಪ್ರಕಾಶನ, ಬೆಂಗಳೂರು, ಪು.೧೮೫–೧೯೬.

೫. ಬಣಕಾರ್, ಬ.ಜಿ (೨೦೦೩),ಸಮಗ್ರ ನೋಟ ಸತ್ಯಾಶ್ರೀ ಪ್ರಿಂಟರ್ಸ್ ಪ್ರೈ.ಲಿ.,ಬೆಂಗಳೂರು,ಪು.೩೨೦.

೬. ಜಿ.ವಿ ಜೋಶಿ ಮತ್ತು ನೋಬರ್ಟ್ ಲೋಬೋ (೨೦೦೯) "ಕರಾವಳಿ ಕರ್ನಾಟಕದ ಅರ್ಥವ್ಯವಸ್ಥೆ ಹಿಂದಿನಿಂದ ಇಂದಿನವರೆಗೆ", ಮಂಗಳ ಪ್ರಕಾಶನ ಮಂಗಳೂರು.

# ಅಧ್ಯಾಯ-೨

# ಸಹಕಾರ, ಕರ್ನಾಟಕದಲ್ಲಿ ಸಹಕಾರ ಚಳವಳಿಯ ಉಗಮ ಮತ್ತು ಬೆಳವಣಿಗೆ ಹಾಗೂ ಗ್ರಂಥ ಪರಾಮರ್ಶೆ

# ಅಧ್ಯಾಯ – ೨

# ಸಹಕಾರ, ಕರ್ನಾಟಕದಲ್ಲಿ ಸಹಕಾರ ಚಳವಳಿಯ ಉಗಮ ಮತ್ತು ಬೆಳವಣಿಗೆ ಗ್ರಂಥ ಪರಾಮರ್ಶೆ

**" ಆರ್ಥಿಕ ಸ್ವಾತಂತ್ರ್ಯಕ್ಕೆ ಸಹಕಾರವೇ ಹೆಬ್ಬಾಗಿಲು"**

**–ಮಹಾತ್ಮ ಗಾಂಧಿ**

## ೨.೧.ಸಹಕಾರ ಮತ್ತು ಐತಿಹಾಸಿಕ ಹಿನ್ನೆಲೆ

ಸಹಕಾರವು ಪ್ರಜಾಪ್ರಭುತ್ವದ ತಳಹದಿಯ ಮೇಲೆ ಪರಸ್ಪರ ನೆರವಿಗಾಗಿ ಮತ್ತು ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಹಿತ ಸಾಧನೆಗಾಗಿ ಒಗ್ಗೂಡುವ ಜನತೆಯ ಒಂದು ಸಂಘಟನೆಯಾಗಿದ್ದು ಅದು ಬೇಡಿಕೆಗಳನ್ನು ಸಮಾನವಾಗಿ ಈಡೇರಿಸುವ ಗುರಿಯನ್ನು ಹೊಂದಿದ್ದು ಅದರ ಉತ್ಪಾದನೆ ಮತ್ತು ವಿತರಣೆಗಳು ಲಾಭದೃಷ್ಟಿಗೆ ಬದಲಾಗಿ ಸದಸ್ಯರ ಸೇವಾದೃಷ್ಟಿಯಿಂದ ಕೂಡಿರುತ್ತದೆ. ಇದನ್ನು ಸಹಕಾರ ಎನ್ನಲಾಗಿದೆ. 'ಸಹಕಾರ' ಎಂದರೆ ಜನರು ತಮ್ಮ ಸ್ವಾರ್ಥವನ್ನು ಮರೆತು ಒಗ್ಗೂಡಿ ಪರಸ್ಪರ ಹಿತಾಸಕ್ತಿಗಳನ್ನು ಕಾಪಾಡಲು ಸಾಂಘಿಕವಾಗಿ ಪ್ರಯತ್ನಿಸುವ ಒಂದು ವ್ಯವಸ್ಥೆಯಾಗಿದೆ. " ತಮ್ಮ ಆರ್ಥಿಕ ಹಿತಾಸಕ್ತಿಗಳನ್ನು ಕಾಪಾಡಲು ಜನರು ಸಮಾನತೆಯ ಆಧಾರದ ಮೇಲೆ ಸ್ವ ಇಚ್ಛೆಯಿಂದ ಸಂಘಟಿತರಾಗುವುದೇ ಸಹಕಾರಿ ಸಂಘ". " ತಾನು ಎಲ್ಲರಿಗಾಗಿ ಎಲ್ಲರೂ ತನಗಾಗಿ" ಎಂಬುದು ಸಹಕಾರದ ಮೂಲ ತತ್ವವಾಗಿದೆ.[೧] ಭಾರತದಂತಹ ವಿಶಾಲವಾದ ದೇಶಕ್ಕೆ ಸಹಕಾರ ಚಳುವಳಿಯು ಒಂದು ವರದಾನವಾಗಿದೆ. ಸಹಕಾರದ ಮುಖ್ಯ ಉದ್ದೇಶ ಸದಸ್ಯರ ಆರ್ಥಿಕ ಅಭಿವೃದ್ಧಿ ಸಾಧಿಸುವುದಾಗಿದೆ.

### ಐತಿಹಾಸಿಕ ಹಿನ್ನೆಲೆ

ಪ್ರಾರಂಭದ ದಿನಗಳಲ್ಲಿ ಸಹಕಾರವು ಕೇಂದ್ರ ಸರ್ಕಾರದ ವಿಷಯವಾಗಿತ್ತು. ಈ ಸಂಬಂಧವಾಗಿ ಹೊರಡಿಸಲಾದ ಶಾಸನವೆಂದರೆ ೧೯೦೪ರಲ್ಲಿ ಸರ್. ಫೆರ್ನಾಂಡಿಸ್ ನಿಕೋಲ್ಸನ್ ರವರ ಸಮಿತಿಯು ನೀಡಿದ ವರದಿಯನ್ನಾಧರಿಸಿ ಜಾರಿಗೆ ಬಂದಂತಹ ಕೋ–ಆಪರೇಟಿವ್ ಕ್ರೆಡಿಟ್ ಸೊಸೈಟೀಸ್ ಆಕ್ಟ್ (ಸಹಕಾರ ಪತ್ತಿನ ಸಂಘಗಳ ಕಾನೂನು) ಈ ಕಾಯ್ದೆ ಕೇವಲ ಪ್ರಾಥಮಿಕ ಪತ್ತಿನ ಸಹಕಾರ ಸಂಘಗಳಿಗೆ ಮಾತ್ರ ಸೀಮಿತವಾಗಿತ್ತು. ಆದರೆ ಪತ್ತೇತರ ಸಹಕಾರ ಸಂಘಗಳನ್ನು ಕೂಡ ಈ ಕಾಯ್ದೆ ವ್ಯಾಪ್ತಿಗೆ ತರಬೇಕೆಂಬ ಉದ್ದೇಶದಿಂದ ಸಹಕಾರ ಸಂಘಗಳ ಕಾಯ್ದೆ ೧೯೧೨ ನ್ನು ಜಾರಿಗೆ ತರಲಾಯಿತು. ೧೯೧೨ರ ಈ ಕಾಯ್ದೆಯು ಕೃಷಿಕರು, ಕರಕುಶಲಗಾರರು ಮುಂತಾದವರಲ್ಲಿ ಸ್ವಸಹಾಯವನ್ನು ಉತ್ತೇಜಿಸುವ ಉದ್ದೇಶವನ್ನು ಹೊಂದಿತ್ತು. ೧೯೧೫ ರಲ್ಲಿ ಮೆಕ್ಲಾಗಾನ್ ಸಮಿತಿಯ ವರದಿಯ ಶಿಫಾರಸ್ಸಿನನ್ವಯ ಸಹಕಾರವನ್ನು ರಾಜ್ಯಗಳಿಗೆ ಸಂಬಂಧಿಸಿದ

ವಿಷಯವೆಂದು ರಾಜ್ಯಪಟ್ಟಿಗೆ ೧೯೧೯ರಲ್ಲಿ ವರ್ಗಾಯಿಸಲಾದ ನಂತರ ಪ್ರತಿಯೊಂದು ರಾಜ್ಯವೂ ತಮ್ಮದೇ ಆದ ಕಾಯ್ದೆಗಳನ್ನು ರೂಪಿಸಲು ಪ್ರಾರಂಭಿಸಿದವು.

ಸಹಕಾರ ಚಳುವಳಿಯು ಉಗಮವಾದದ್ದು ಬ್ರಿಟನ್ ದೇಶದಲ್ಲಿ ಹದಿನೆಂಟನೇ ಶತಮಾನದ ಉತ್ತರಾರ್ಧದಲ್ಲಿ ಆ ದೇಶದಲ್ಲಿ ಉಂಟಾದ ಕೈಗಾರಿಕಾ ಕ್ರಾಂತಿಯಿಂದಾಗಿ ಅಲ್ಲಿನ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಗತಿಗಳಲ್ಲಿ ಮಹತ್ತರ ಬದಲಾವಣೆಗಳಾದವು. ಈ ಸಹಕಾರ ಚಳವಳಿಯ ಉಗಮಕ್ಕೆ ಕಾರಣಕರ್ತರಾದ ಬ್ರಿಟನ್‌ನ 'ರಾಬರ್ಟ್ ಓವನ್ ರವರನ್ನು ಸಹಕಾರ ಚಳುವಳಿ ಅಥವಾ ಸಹಕಾರ ಆಂದೋಲನದ ಪಿತಾಮಹ ಎಂಬುದಾಗಿ ಕರೆಯುತ್ತೇವೆ.[೨]

೧೯೫೪ರಲ್ಲಿ ಆಲ್ ಇಂಡಿಯಾ ರೂರಲ್ ಕ್ರೆಡಿಟ್ ಸರ್ವೆ ಸಮಿತಿಯ ಶಿಫಾರಸ್ಸಿನನ್ವಯ ರಾಷ್ಟ್ರೀಯ ಯೋಜನೆಗಳಿಗೆ ಸಂಬಂಧಿಸಿದಂತೆ ಸಹಕಾರ ಚಳುವಳಿಗೂ ಕೂಡ ವಿಶೇಷ ಪಾತ್ರ ವಹಿಸಲು ಅವಕಾಶ ಮಾಡಿತು. ಸಹಕಾರ ಸಂಘಗಳ ಪ್ರಾಥಮಿಕ ಉದ್ದೇಶ ತನ್ನ ಸದಸ್ಯರ ಏಳಿಗೆಗಾಗಿ ಶ್ರಮಿಸುವುದು ಅದರ ಜೊತೆಗೆ ರಾಷ್ಟ್ರದ ಆರ್ಥಿಕ ಅಭ್ಯುದಯವನ್ನು ಹಾಗೂ ಭಾರತ ಸಂವಿಧಾನದ ಮೂಲ ತತ್ವಗಳನ್ನು ಅಭಿವೃದ್ಧಿ ಪಡಿಸುವ ಜವಾಬ್ದಾರಿಯನ್ನು ಕೂಡ ನಿಗದಿಪಡಿಸಲಾಯಿತು. ಈ ಉದ್ದೇಶದಿಂದಾಗಿ ಸರ್ಕಾರವು ಅವಶ್ಯವಿರುವ ಸಹಕಾರ ಸಂಘಗಳಿಗೆ ತನ್ನ ನೆರವು ನೀಡುವ ಮೂಲಕ ಅವುಗಳನ್ನು ಬಲಪಡಿಸಲು ಸಜ್ಜಾಯಿತು. ೧೯೫೯ರಲ್ಲಿ ಕರ್ನಾಟಕ ಸರ್ಕಾರವು ತನ್ನದೇ ಆದ ಪ್ರತ್ಯೇಕ ಕರ್ನಾಟಕ ಕೋ–ಆಪರೇಟಿವ್ ಸೊಸೈಟೀಸ್ ಆಕ್ಟ್, ೧೯೫೯ ನ್ನು ಪಾಸು ಮಾಡಿತು. ಈ ಕಾಯ್ದೆಯ ಮುಖ್ಯಾಂಶಗಳು ಈಗಾಗಲೇ ಕೇಂದ್ರ ಸರ್ಕಾರವು ಪಾಸು ಮಾಡಿದ್ದ ೨ ಕಾಯ್ದೆಗಳ ಮೂಲಾಂಶವನ್ನು ಹೊಂದಿರುವ ಜೊತೆಗೆ ಫ್ರೆಂಡ್ಲಿ ಸೊಸೈಟೀಸ್ ಆಕ್ಟ್ ೧೭೯೩ ಎಂಬ ಇಂಗ್ಲೆಂಡಿನ ಕಾಯ್ದೆಯನ್ನು ಮಾದರಿಯನ್ನಾಗಿಸಿಕೊಂಡಿತ್ತು. ೧೯೫೯ ರ ನಂತರ ಈ ಸಹಕಾರಿ ಕಾಯ್ದೆಯು ಜನರ ಅವಶ್ಯಕತೆಗನುಗುಣವಾಗಿ ಕಾಲಕಾಲಕ್ಕೆ ತಿದ್ದುಪಡಿಗೊಂಡಿದೆ.

**೨.೨.ಸಹಕಾರ ಸಂಘಗಳ ಪಾತ್ರ ಮತ್ತು ಉದ್ದೇಶ**

ಇಂದಿನ ನಮ್ಮ ಆರ್ಥಿಕ ವ್ಯವಸ್ಥೆಯಲ್ಲಿ ಸಹಕಾರ ಸಂಘಗಳು ಪ್ರಧಾನ ಪಾತ್ರವಹಿಸುತ್ತಿವೆ. ಕಳೆದ ಶತಮಾನದ ಪ್ರಾರಂಭದಲ್ಲಿ ಸಣ್ಣ ಪ್ರಮಾಣದಲ್ಲಿ ಪ್ರಾರಂಭಗೊಂಡು ಬೃಹತ್ ಪ್ರಮಾಣದ ಸಂಸ್ಥೆಗಳಾಗಿ ದೇಶಾದ್ಯಂತ ನಮ್ಮ ನಿತ್ಯ ಜೀವನದ ಎಲ್ಲಾ ಕ್ಷೇತ್ರಗಳಲ್ಲೂ ಸಹಕಾರ ಸಂಘಗಳು ಹಾಸು ಹೊಕ್ಕಾಗಿದೆ. ಸಹಕಾರ ಚಳುವಳಿ ಒಟ್ಟಾರೆ ಸಾರ್ವಜನಿಕರ ಸ್ವಯಂ ಪ್ರೇರಿತ ಚಳುವಳಿಯಾಗಿದ್ದಾಗ್ಯೂ, ಸ್ವಾತಂತ್ರ್ಯ ನಂತರದ ಸಹಕಾರ ಚಳುವಳಿಯ ಬೆಳವಣಿಗೆಯಲ್ಲಿ

ರಾಜ್ಯಗಳೂ ಕೂಡ ಗಮನಾರ್ಹ ಪಾತ್ರವಹಿಸುತ್ತಿದೆ. ಸಹಕಾರ ಸಂಘಗಳು ಇಂದು ರಾಷ್ಟ್ರಿಯ ಯೋಜನೆಗಳಲ್ಲಿ ಪಾಲ್ಗೊಳ್ಳುವುದರ ಹೊರತಾಗಿಯೂ ಹೊಸ ೨೦ ಅಂಶಗಳ ಯೋಜನೆಯನ್ನು ಹಾಗೂ ದೇಶದ ಪರಿಶಿಷ್ಟಜಾತಿ, ಪರಿಶಿಷ್ಟ ವರ್ಗ ಮತ್ತು ದುರ್ಬಲ ವರ್ಗದವರ ಏಳಿಗೆಗಾಗಿ ಸಹಕಾರ ಸಂಘಗಳು ಕ್ರಿಯಾಶೀಲ ಮತ್ತು ರಚನಾತ್ಮಕ ಪಾತ್ರವಹಿಸುತ್ತಿದೆ. ಕೃಷಿ, ಪತ್ತು, ಮಾರುಕಟ್ಟೆ, ಸಂಸ್ಕರಣ ಹಾಗೂ ಕೃಷಿಉತ್ಪನ್ನಗಳ ಶೇಖರಣೆ ಇತ್ಯಾದಿಗಳಂತಹ ನಾನಾ ವಿಧವಾದ ಕ್ಷೇತ್ರಗಳನ್ನು ಕೂಡ ಇದು ಆವರಿಸಿಕೊಂಡಿದೆ. ವಿವಿಧ ಕ್ಷೇತ್ರಗಳಲ್ಲಿ ಸ್ಥಾಪಿತವಾಗಿರುವ ಸಹಕಾರ ಸಂಘಗಳೆಂದರೆ ಕೃಷಿ ಪತ್ತಿನ ಸಹಕಾರ ಸಂಘಗಳು, ಭೂ ಅಭಿವೃದ್ಧಿ ಬ್ಯಾಂಕುಗಳು, ಪಟ್ಟಣ ಸಹಕಾರ ಬ್ಯಾಂಕುಗಳು, ಮಾರುಕಟ್ಟೆ ಹಾಗೂ ಸಂಸ್ಕರಣ ಸಂಘಗಳು, ಸಕ್ಕರೆ ಕಾರ್ಖಾನೆಗಳು, ನೂಲಿನ ಗಿರಣಿ, ಹಾಲು ಉತ್ಪಾದಕ ಸಂಘಗಳು, ನೀರಾವರಿ ಸಂಘಗಳು, ನೇಕಾರರ ಸಂಘಗಳು, ಕೈಗಾರಿಕಾ ಸಂಘಗಳು, ಬಳಕೆದಾರರ ಸಂಘಗಳು, ಕಾರ್ಮಿಕರ ಹಾಗೂ ಸಾಗಾಣಿಕೆ ಸಂಘಗಳು, ವಿದ್ಯುತ್ ಸಹಕಾರ ಸಂಘಗಳು, ಗೃಹ ನಿರ್ಮಾಣ, ಕೋಳಿ ಸಾಕಾಣಿಕೆ ಮತ್ತು ಮುದ್ರಣ ಸಹಕಾರ ಸಂಘಗಳು ಇತ್ಯಾದಿ. ಹೀಗೆ ನೂರಾರು ಬಗೆಯ ಸಹಕಾರ ಸಂಘಗಳು ಸ್ಥಾಪಿತಗೊಂಡು ಕಾರ್ಯ ನಿರ್ವಹಿಸುತ್ತಿವೆ.

**ಸಹಕಾರ ಸಂಘಗಳ ಉದ್ದೇಶ**

ಪ್ರಸ್ತುತ ಭಾರತದ ಅನೇಕ ರಾಜ್ಯಗಳಲ್ಲಿರುವಂತೆ ಕರ್ನಾಟಕ ರಾಜ್ಯದಲ್ಲಿಯೂ ಸಹಕಾರಿ ಚಳುವಳಿ ರಾಜ್ಯ ಸರ್ಕಾರದಿಂದ ಪ್ರೇರೇಪಿಸಲ್ಪಟ್ಟ ಮತ್ತು ಘೋಷಿಸಲ್ಪಟ್ಟ ಚಳುವಳಿಯಾಗಿದೆ. ರೈತರ, ಸದಸ್ಯರ ಮತ್ತು ಸಾರ್ವಜನಿಕ ಆರ್ಥಿಕ ಹಾಗೂ ಸಾಮಾಜಿಕ ಏಳಿಗೆಗಾಗಿ ಹಲವಾರು ಸೌಲಭ್ಯಗಳನ್ನು ಒದಗಿಸಲು ಹಲವಾರು ಸಹಕಾರ ಸಂಘಗಳನ್ನು ಸ್ಥಾಪಿಸಲಾಗಿದೆ. ಬಡವರ, ದೀನದಲಿತರ ಹಾಗೂ ಶೋಷಿತರ ಸ್ವಾವಲಂಬನೆಗಾಗಿ, ರೈತಾಪಿ ಜನಾಂಗದ ಬದುಕಿನ ಆರ್ಥಿಕ ಪರಿಸ್ಥಿತಿಯನ್ನು ಅಭಿವೃದ್ಧಿ ಪಡಿಸುವ ಸಲುವಾಗಿ ಈ ಸಹಕಾರಿ ಸಂಘಗಳ ಮೂಲಕ ಸಹಾಯಧನ, ಅನುದಾನ ಹಾಗೂ ಸಾಲಗಳನ್ನು ನೀಡುವ ಮೂಲಕ ರಾಜ್ಯದ ಅಭಿವೃದ್ಧಿಯು ಸಮಾಜದ ಎಲ್ಲಾ ಸ್ಥರಗಳಲ್ಲಿ ಸಮಾನವಾಗಿ ಹಂಚಿಹೋಗುವಂತೆ ಮಾಡಲು ಈ ಸಹಕಾರ ಸಂಘಗಳನ್ನು ವಾಹಕಗಳನ್ನಾಗಿ ಬಳಸಿಕೊಳ್ಳುತ್ತಿದೆ. ಇದರೊಂದಿಗೆ ಸಾರ್ವಜನಿಕರೂ ಸಹ ಈ ಸಹಕಾರ ಸಂಘಗಳಲ್ಲಿ ತಮ್ಮ ಹಣ ತೊಡಗಿಸಿದ್ದು, ಅವುಗಳ ವ್ಯವಹಾರದಲ್ಲಿ ನೇರವಾಗಿ ಭಾಗವಹಿಸಿರುತ್ತಾರೆ. ಈ ರೀತಿಯಾಗಿ ಸದಸ್ಯರ, ರೈತರ ಮತ್ತು ಸಾರ್ವಜನಿಕರ ಆರ್ಥಿಕ ಸ್ವಾವಲಂಬನೆಗಾಗಿ ಸಹಕಾರಿ ಸಂಘವು ಸ್ಥಾಪಿತವಾಗಿದೆ.

### ೨.೩.ಪಂಚವಾರ್ಷಿಕ ಯೋಜನೆಗಳಲ್ಲಿ ಸಹಕಾರ ಚಳುವಳಿ

ಪಂಚವಾರ್ಷಿಕ ಯೋಜನೆಗಳ ಜಾರಿಯ ನಂತರ ರಾಷ್ಟ್ರದ ಯೋಜನೆಗಳಲ್ಲಿ ಸಹಕಾರವು ಪ್ರಮುಖ ಪಾತ್ರವಹಿಸುವಂತೆ ಪರಿಸ್ಥಿತಿ ನಿರ್ಮಾಣವಾಗತೊಡಗಿತು. ಸಹಕಾರದ ವಿವಿಧ ಶಾಖೆಗಳ ಬೆಳವಣಿಗೆಗೆ ಈ ಪಂಚವಾರ್ಷಿಕ ಯೋಜನೆಗಳು ಅತೀ ಮುಖ್ಯ ಸ್ಥಾನ ನೀಡಿದ್ದವು. ಭಾರತದ ಸಹಕಾರವು ಹಿಂದೆಂದೂ ಸಾಧಿಸಲಾಗದ ಪ್ರಗತಿಯನ್ನು ೧೯೫೧-೭೧ ರ ಅವಧಿಯಲ್ಲಿ ಸಾಧಿಸಿದೆ. ಈ ಅವಧಿಯಲ್ಲಿ ಎಲ್ಲಾ ವಿಧದ ಪ್ರಾಥಮಿಕ ಸಹಕಾರ ಸಂಘಗಳ ಸದಸ್ಯರ ಒಟ್ಟು ಸಂಖ್ಯೆ ೧.೩೭ ಕೋಟಿಯಿಂದ ೫.೯೧ಕೋಟಿಗೂ, ಇವುಗಳ ಷೇರು ಧನದ ಮೊತ್ತ ಕೇವಲ ೪೫ ಕೋಟಿ ರೂ. ಗಳಿಗೂ, ಅವುಗಳ ಕ್ರಿಯಾ ಬಂಡವಾಳ ಕೇವಲ ೨೭೬ ಕೋಟಿ ರೂ ಗಳಿಂದ ೬೮೧೦ ಕೋಟಿ ರೂ ಗಳಿಗೂ ಹೆಚ್ಚಿದವು. ಈ ಹೆಚ್ಚುವರಿಗಳು ಭಾರತದ ಸಹಕಾರದ ಗಮನಾರ್ಹ ಪ್ರಗತಿಯನ್ನು ಸೂಚಿಸುತ್ತದೆ.[೩]

೧೯೫೧-೫೬ರಲ್ಲಿ ಪಂಚವಾರ್ಷಿಕ ಯೋಜನೆಯಲ್ಲಿ ಸಮುದಾಯ ಅಭಿವೃದ್ಧಿಯನ್ನು ಸಾಧಿಸಲು ಗರಿಷ್ಠಮಟ್ಟದವರೆಗೆ ಸಹಕಾರ ವ್ಯವಸ್ಥೆಯನ್ನು ಬಳಸಿಕೊಳ್ಳುವುದಕ್ಕೆ ಒತ್ತು ನೀಡಲಾಯಿತು. ೧೯೫೬-೬೧ರ ಎರಡನೇ ಪಂಚವಾರ್ಷಿಕ ರಾಷ್ಟ್ರೀಯ ನೀತಿಯ ಮುಖ್ಯ ಉದ್ದೇಶಗಳಲ್ಲಿ ಸಹಕಾರ ಕ್ಷೇತ್ರವನ್ನು ಯೋಜನಾಭಿವೃದ್ಧಿಯ ಯೋಜನಾ ಭಾಗವಾಗಿ ಅಭಿವೃದ್ಧಿಪಡಿಸುವ ಗುರಿಯನ್ನು ಹೊಂದಲಾಯಿತು. ರಾಷ್ಟ್ರೀಯ ಆರ್ಥಿಕ ಚಟುವಟಿಕೆಗಳಲ್ಲಿ ಸಹಕಾರ ವ್ಯವಸ್ಥೆಯೂ ಪ್ರಭಾವಿಯುತ ಪಾತ್ರ ನಿರ್ವಹಿಸಲು ಅನುಕೂಲವಾಗುವಂತೆ ಸಹಕಾರ ಸಂಸ್ಥೆಗಳಲ್ಲಿ ರಾಜ್ಯದ ಪಾಲುದಾರಿಕೆಗೆ, ನ್ಯಾಷನಲ್ ಅಗ್ರಿಕಲ್ಚರ್ ಕ್ರೆಡಿಟ್ (ಲಾಂಗ್‌ಟರ್ಮ್ ಆಪರೇಷನ್ಸ್) ಫಂಡ್ ಆಂಡ್ ನ್ಯಾಷನಲ್ ಕೋ-ಆಪರೇಟಿವ್ ಡೆವಲಪ್‌ಮೆಂಟ್ ಫಂಡ್‌ನ್ನು ಸರ್ಕಾರ ಸ್ಥಾಪಿಸಿತು. ೧೯೬೧-೬೬ರ ಪಂಚವಾರ್ಷಿಕ ಯೋಜನೆಯಲ್ಲಿ ಆರ್ಥಿಕ ಕ್ಷೇತ್ರದ ವಿವಿಧ ವಿಭಾಗಗಳಲ್ಲಿ ಸಹಕಾರ ಆಧಾರ ಸ್ತಂಭವಾಗುವಂತೆ ಪ್ರೋತ್ಸಾಹ ನೀಡಲಾಯಿತು. ಗ್ರಾಮೀಣ ಜನರ ಅಭಿವೃದ್ಧಿಗೆ ಹೆಚ್ಚಿನ ಗಮನ ನೀಡಲಾಯಿತು. ೧೯೬೯-೭೪ರ ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ ಕೃಷಿ ಮತ್ತು ಗ್ರಾಹಕರ ಸಹಕಾರ ಸಂಘಗಳು ಕೇಂದ್ರ ಸ್ಥಾನ ಪಡೆದವು. ಇದೇ ರೀತಿಯಲ್ಲಿ ೧೯೭೪-೭೯ರ ಐದನೇ ಮತ್ತು ೧೯೮೦-೮೫ರ ಆರನೇ ಹಾಗೂ ೧೯೮೫-೯೦ರ ಏಳನೇ ಪಂಚವಾರ್ಷಿಕ ಯೋಜನೆಗಳು ರಾಷ್ಟ್ರದ ಅಭಿವೃದ್ಧಿಯಲ್ಲಿ ಸಹಕಾರ ಕ್ಷೇತ್ರದ ಮಹತ್ವವನ್ನು ಗುರುತಿಸಿ ಹೆಚ್ಚಿನ ಪ್ರೋತ್ಸಾಹ ನೀಡಿದವು.[೪] ಗ್ರಾಮೀಣಾಭಿವೃದ್ಧಿ, ಕೃಷಿ, ಮತ್ತು ಗ್ರಾಹಕ, ಹೈನುಗಾರಿಕೆ, ಕೈಗಾರಿಕೆ, ಸಂಸ್ಕರಣ, ಮಾರಾಟ ಇತ್ಯಾದಿ ಎಲ್ಲಾ ಕ್ಷೇತ್ರಗಳಲ್ಲೂ ಸಹಕಾರ ಸಂಸ್ಥೆಗಳು ವಿವಿಧ ಹಂತಗಳಲ್ಲಿ ಸ್ಥಾಪನೆಯಾಗಿ, ಜನರ ಆರ್ಥಿಕ ಸುಧಾರಣೆಗೆ ಅನುಕೂಲವಾಗುವಂತೆ ಯೋಜನೆಗಳನ್ನು

ಅಳವಡಿಸಿಕೊಳ್ಳಲಾಯಿತು. ಸಹಕಾರ ಕ್ಷೇತ್ರದ ಬೆಳವಣಿಗೆಯಲ್ಲಿ ಪಂಚವಾರ್ಷಿಕ ಯೋಜನೆಗಳ ಕೊಡುಗೆ ಅಪಾರವಾದದ್ದು. ಬಡತನದಿಂದ ಬಳಲುತ್ತಿದ್ದ ಭಾರತದ ಗ್ರಾಮೀಣ ಆರ್ಥಿಕ ವ್ಯವಸ್ಥೆಯನ್ನು ಸುಧಾರಿಸಲು ಕೇಂದ್ರ, ರಾಜ್ಯ, ಸರ್ಕಾರಗಳೆರಡೂ ಸಹಕಾರ ಕ್ಷೇತ್ರವನ್ನು ಒಂದು ಪರಿಣಾಮಕಾರಿ ಸಾಧನವನ್ನಾಗಿ ಬಳಸಿಕೊಂಡವು.

ಹಿಂದಿನ ಯೋಜನೆಗಳಂತೆ ೧೯೯೨–೯೭ರ ಎಂಟನೇ ಪಂಚವಾರ್ಷಿಕ ಯೋಜನೆಯಲ್ಲಿ ಸಹಕಾರ ಅಭಿವೃದ್ಧಿಗೆ ಹೆಚ್ಚಿನ ಶಿಫಾರಸ್ಸುಗಳು ಒತ್ತು ಇಲ್ಲವೆನ್ನುವ ಅಭಿಪ್ರಾಯವಿರುತ್ತದೆ. ಇದಕ್ಕೆ ೧೯೯೧ರಸರ್ಕಾರದ ಆರ್ಥಿಕ ನೀತಿಯಲ್ಲಿನ ಬದಲಾವಣೆ ಕಾರಣವಿರಬಹುದು. ಹೊಸ ಆರ್ಥಿಕ ನೀತಿಯಲ್ಲಿ ಉದಾರೀಕರಣ, ಖಾಸಗೀಕರಣ, ಮತ್ತು ಜಾಗತೀಕರಣ ಕೇಂದ್ರ ಸ್ಥಾನ ಪಡೆದುಕೊಂಡವು. ಗುಣ ಮಟ್ಟದ ಆರ್ಥಿಕ ಅಭಿವೃದ್ಧಿಯನ್ನು ಮಾರುಕಟ್ಟೆ ಶಕ್ತಿಗಳು ಸಾಧಿಸಬಲ್ಲವು ಎಂಬುದೇ ಆಗಿರುತ್ತದೆ. ಸಹಕಾರ ಕ್ಷೇತ್ರ ಸ್ವಾವಲಂಬಿಯಾಗಿ ಬೆಳೆಯಲು, ಸಕ್ರಿಯ ಸದಸ್ಯರ ಪಾಲ್ಗೊಳ್ಳುವಿಕೆಯಿಂದ ಸ್ವಾಯತ್ತ ಹಾಗೂ ರಾಜಕೀಯ ರಹಿತ ವ್ಯವಸ್ಥೆ ನಿರ್ಮಾಣವಾಗಿ ಪ್ರಜಾಪ್ರಭುತ್ವದ ಚೌಕಟ್ಟಿನಲ್ಲಿ ಸರ್ಕಾರದ ಕನಿಷ್ಟ ನಿಯಂತ್ರಣವನ್ನು ಒಳಗೊಂಡ, ಸ್ಪರ್ಧಾತ್ಮಕವಾಗಿ ಪ್ರಗತಿ ಹೊಂದಬೇಕೆಂಬುದಕ್ಕೆ ೧೯೯೭ –೨೦೦೨ರ ಒಂಭತ್ತನೇ ಪಂಚವಾರ್ಷಿಕ ಯೋಜನೆಯಲ್ಲಿ ಒತ್ತು ನೀಡಲಾಗಿದೆ. ೨೦೦೨–೦೭ರ ಹತ್ತನೇ ಪಂಚವಾರ್ಷಿಕ ಯೋಜನೆಯಲ್ಲಿ ಸಹಕಾರ ಸಂಘಗಳ ಮೂಲಕ ಸಾಲದ ಸೌಲಭ್ಯಗಳನ್ನು ಹೆಚ್ಚಿಸಲು ಅವಕಾಶ ನೀಡಿ ಸ್ವ–ಸಹಾಯ ಸಂಘಗಳು, ಮಹಿಳಾ ಗುಂಪುಗಳನ್ನು ರಚಿಸಿ ಆಂಶಿಕ ಹಣಕಾಸು (ಮೈಕ್ರೋ ಫೈನಾನ್ಸಿಂಗ್) ವ್ಯವಸ್ಥೆಯನ್ನು ಉತ್ತಮಗೊಳಿಸಲಾಗಿತ್ತು.

**೨.೪.ಕರ್ನಾಟಕದಲ್ಲಿ ಸಹಕಾರಿ ಚಳುವಳಿಯ ಉಗಮ ಮತ್ತು ಬೆಳವಣಿಗೆ**

ಭಾರತದಲ್ಲಿ ಹಲವಾರು ರಾಜ್ಯಗಳಲ್ಲಿ ಆರಂಭವಾದಂತೆ ಕರ್ನಾಟಕದಲ್ಲಿಯೂ ಕೂಡ ಸಹಕಾರ ಆಂದೋಲನವು ಆರಂಭವಾಯಿತು. ಕರ್ನಾಟಕದಲ್ಲಿ ಸಹಕಾರಿ ಚಳುವಳಿಯು ಗ್ರಾಮೀಣ ಮತ್ತು ನಗರ ಜನತೆಯ ವ್ಯವಹಾರ ಚಟುವಟಿಕೆಗಳೊಂದಿಗೆ ನಿಕಟವಾದ ಸಂಬಂಧವನ್ನು ಹೊಂದಿದೆ. ಜನರ ಸಾಮಾಜಿಕ ಆರ್ಥಿಕ ಪ್ರಗತಿಯಲ್ಲಿ ಇದು ಪ್ರಮುಖ ಪಾತ್ರ ವಹಿಸಿದೆ. ಅಲ್ಲದೆ ಸಮಾಜದಲ್ಲಿ ಆರ್ಥಿಕವಾಗಿ ಅಶಕ್ತರಾದವರ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ, ಅಲ್ಪಸಂಖ್ಯಾತರ, ಹಿಂದುಳಿದವರ ಮತ್ತು ಮಹಿಳೆಯರ ಬಗ್ಗೆ ವಿಶೇಷ ಆದ್ಯತೆಯನ್ನು ನೀಡುತ್ತಾ ಬಂದಿದೆ.

ಕರ್ನಾಟಕವು ಭಾರತದ ಸಹಕಾರಿ ಆಂದೋಲನದ ಜನ್ಮ ಭೂಮಿಯಾಗಿದೆ. ಭಾರತದಲ್ಲಿ ಇಂದು ಇರುವ ಅನೇಕ ಸಹಕಾರಿ ಸಂಘಗಳನ್ನು ಕರ್ನಾಟಕದಲ್ಲಿ ಮೊಟ್ಟ ಮೊದಲು ಪ್ರಾಯೋಗಿಕವಾಗಿ

ನೆಡಲಾಯಿತು. ಆದ್ದರಿಂದಲೇ ಕರ್ನಾಟಕಕ್ಕೆ 'ಭಾರತ ಸಹಕಾರಿ ಆಂದೋಲನದ ತೊಟ್ಟಿಲು' ಎಂದು ಕರೆಯಲಾಗುತ್ತಿದೆ. ಪತ್ತು, ಮಾರಾಟ, ಸಂಸ್ಕರಣ, ಗೃಹ ನಿರ್ಮಾಣ, ಸಾಹಿತ್ಯ-ಕಲೆ, ಆರೋಗ್ಯಧಾಮ ಮುಂತಾದ ಅನೇಕ ಆರ್ಥಿಕ ಸಾಮಾಜಿಕ ಮತ್ತು ಶೈಕ್ಷಣಿಕ ಕ್ಷೇತ್ರದ ಸಹಕಾರಿ ಸಂಘಗಳು ಮೊಟ್ಟಮೊದಲು ಕರ್ನಾಟಕದಲ್ಲಿ ಹುಟ್ಟಿ ಬೆಳಗಿದವು.

೧೯೦೪ರಲ್ಲಿ ಮೊದಲನೆಯ ಸಹಕಾರಿ ಕಾಯಿದೆ ಜಾರಿಗೆ ಬಂದ ಮೇಲೆ ಆಗಿನ ಮುಂಬೈ ಸರ್ಕಾರ ನೇಮಿಸಲ್ಪಟ್ಟ ಮೊದಲನೆಯ ಕೋ-ಆಪರೇಟಿವ್ ರಿಜಿಸ್ಟ್ರಾರ್ ಆದ ಸರ್.ಜೆ. ಮೆಖೆನೆಲ್ ರವರಿಂದ ಇಡೀ ಮುಂಬೈ ಪ್ರಾಂತ್ಯದಲ್ಲಿ ನೋಂದಾಣಿಯಾದ ಮೊಟ್ಟಮೊದಲನೆಯ ಸಹಕಾರಿ ಸಂಘವೆಂದರೆ ಧಾರವಾಡ ಜಿಲ್ಲೆಯ ಗದಗ ತಾಲೂಕಿನ ಕಣಗಿನಹಾಳ ಗ್ರಾಮೀಣ ಸಹಕಾರಿ ಪತ್ತಿನ ಸಂಘವಾಗಿದೆ. ಈ ಸಂಘ ಶ್ರೀ ಸಿದ್ದನ ಗೌಡ ಸಣ್ಣರಾಮನ ಗೌಡ ಪಾಟೀಲರ ಅಧ್ಯಕ್ಷತೆಯಲ್ಲಿ ಸ್ಥಾಪಿಸಲ್ಪಟ್ಟಿತು. ಇವರು ಇಡೀ ಮುಂಬೈ ಪ್ರಾಂತ್ಯ ಅಲ್ಲದೆ ಭಾರತದ ಹಾಗೂ ಇಡೀ ಏಷ್ಯಾ ಖಂಡದ ಪ್ರಥಮ ಸಹಕಾರಿ ಸಂಘದ ಅಧ್ಯಕ್ಷರು ಆದ್ದರಿಂದ ಇವರನ್ನು ಭಾರತದ ಪ್ರಥಮ 'ಸಹಕಾರಿ ಧುರೀಣ' ಅಥವಾ 'ಸಹಕಾರಿ ಪಿತಾಮಹ' ಎಂದು ಕರೆಯಲಾಗಿದೆ.[೨]

ಇಪ್ಪತ್ತನೆಯ ಶತಮಾನದ ಆರಂಭದಲ್ಲಿ ಪಾಥಮಿಕವಾಗಿ ಕೃಷಿಗೆ ಸಾಲ ಸರಬರಾಜನ್ನು ಮಾಡಲು ಸಹಕಾರವನ್ನು ಭಾರತದಲ್ಲಿ ಪರಿಚಯಿಸಲಾಗಿತ್ತು. ಸ್ಥಳೀಯ ಲೇವಾ ದೇವಿದಾರರು ರೈತರಿಗೆ ಹೆಚ್ಚಿನದರದಲ್ಲಿ ಸಾಲವನ್ನು ನೀಡಿ ಶೋಷಿಸುತ್ತಿದ್ದರು. ಇದನ್ನು ನಿರ್ಮೂಲನ ಗೊಳಿಸುವುದೇ ಈ ಸಹಕಾರ ಚಳುವಳಿಯ ಉದ್ದೇಶವಾಗಿದೆ. ಕೃಷಿ ಸಹಕಾರಿ ಸಂಘಗಳನ್ನು ಸಹಕಾರಿ ಕಾಯ್ದೆ ೧೯೦೪ರ ಜೊತೆಯಲ್ಲಿಯೇ ಸ್ಥಾಪಿಸಲಾಯಿತು. ರಾಷ್ಟ್ರದಲ್ಲಿ ಪ್ರಪ್ರಥಮ ಕೃಷಿ ಪತ್ತಿನ ಸಹಕಾರ ಸಂಘವು ಶ್ರೀ ಸಿದ್ಧನಗೌಡ ಸಣ್ಣ ರಾಮಣ್ಣಗೌಡ ಪಾಟೀಲ ಇವರ ಅಧ್ಯಕ್ಷತೆಯಲ್ಲಿ ಧಾರವಾಡ ಜಿಲ್ಲೆಯ ಕಣಗಿನಹಾಳ ತಾಲೂಕಿನಲ್ಲಿ ಸ್ಥಾಪನೆಯಾಯಿತು.

ಸಹಕಾರ ಕ್ಷೇತ್ರದಲ್ಲಿ ಕರ್ನಾಟಕ ರಾಜ್ಯವು ೧೯೦೫ರಿಂದ ಅದ್ಭುತ ಬೆಳವಣಿಗೆಯನ್ನು ಕಂಡಿದೆ. ದೇಶದ ಸಾಮಾಜಿಕ, ಆರ್ಥಿಕ ಬೆಳವಣಿಗೆಯಲ್ಲಿ ಸಹಕಾರಿ ಸಂಘಗಳು ಪ್ರಮುಖ ಪಾತ್ರವಹಿಸಿದೆ. ಅದರಲ್ಲೂ ಗ್ರಾಮೀಣ ಪ್ರದೇಶದಲ್ಲಿ ಕೃಷಿ ಹಾಗೂ ಸಂಬಂಧಿತ ಕ್ಷೇತ್ರದಲ್ಲಿ ಅಭಿವೃದ್ಧಿಗೆ ಸಹಕಾರಿಯಾಗಿದೆ. ಸಹಕಾರಿ ಚಳುವಳಿಯು ಇಂದು ಎಲ್ಲಾ ಅಭಿವೃದ್ಧಿ ಕ್ಷೇತ್ರಗಳಲ್ಲಿ ಬೃಹದಾಕಾರವಾಗಿ ವಿಸ್ತರಿಸಿದ್ದು ಸಾಲ, ಮಾರುಕಟ್ಟೆ, ಗ್ರಾಹಕ, ರೇಷ್ಮೆ ಉದ್ಯಮ, ಹಾಲು ಉತ್ಪಾದನೆ, ಮೀನುಗಾರಿಕೆ, ತೋಟಗಾರಿಕೆ, ಸಕ್ಕರೆ, ಗೃಹ ನಿರ್ಮಾಣ, ಗೋದಾಮುಗಳ ನಿರ್ಮಾಣ ಇತ್ಯಾದಿ ಕ್ಷೇತ್ರಗಳಲ್ಲಿ ಪ್ರಭಾವ ಬೀರಿದೆ. ಉದಾರೀಕರಣ ಮತ್ತು ಜಾಗತೀಕರಣದ ಬದಲಾಗುತ್ತಿರುವ ಆರ್ಥಿಕ

ಪರಿಸರದಲ್ಲಿ ಸಹಕಾರಿ ಸಂಘಗಳು ಮಹತ್ವದ ಪಾತ್ರ ನಿರ್ವಹಿಸುತ್ತಿದೆ. ಭಾರತದಲ್ಲಿ ಮಹಾರಾಷ್ಟ್ರ, ಗುಜರಾತ್ ನಂತರ ಸಹಕಾರ ಚಳುವಳಿಯಲ್ಲಿ ಕರ್ನಾಟಕವು ಮೂರನೇ ಸ್ಥಾನದಲ್ಲಿದೆ. ಕರ್ನಾಟಕದಲ್ಲಿ ಸಹಕಾರಿ ಸಂಘಗಳ ಬೆಳವಣಿಗೆಯನ್ನು ಈ ಕೆಳಗಿನ ಪಟ್ಟಿಯಿಂದ ಗುರುತಿಸಬಹುದು.

**ಕೋಷ್ಟಕ ೨.೧ ಕರ್ನಾಟಕದಲ್ಲಿ ಸಹಕಾರ ಸಂಘಗಳ ಪ್ರಗತಿಯ ವಿವರ**

(ರೂ. ಲಕ್ಷಗಳಲ್ಲಿ)

| ವರ್ಷ | ಸಹಕಾರ ಸಂಘಗಳ ಸಂಖ್ಯೆ | ಸದಸ್ಯರ ಸಂಖ್ಯೆ (ಯಥಾರ್ಥ) | ಷೇರು ಬಂಡವಾಳ | ದುಡಿಯುವ ಬಂಡವಾಳ |
|---|---|---|---|---|
| ೧೯೦೫-೦೬ | ೫ | ೩೮೬ | ೦.೧೧ | ೦.೧೪ |
| ೧೯೨೫-೨೬ | ೧,೬೦೩ | ೯೨,೨೯೨ | ೩೫.೫೨ | ೧೧೨.೩೮ |
| ೧೯೫೦-೫೧ | ೫,೧೯೦ | ೫,೦೧,೨೮೧ | ೧೩೮.೭೪ | ೬೯೦.೯೦ |
| ೧೯೭೫-೭೬ | ೨೨,೭೧೩ | ೫೯,೪೫,೦೦೯ | ೧೨೫೪೩.೦೦ | ೯೧೬೩೭.೦೦ |
| ೨೦೦೦-೦೧ | ೨೯,೯೩೦ | ೧,೬೧,೬೭,೦೦೦ | ೧೪೭೩೧೬.೦೦ | ೨೧,೧೯,೮೬೭.೬೫ |
| ೨೦೦೫-೦೬ | ೩೨,೫೭೭ | ೨,೦೫,೦೦,೦೦೦ | ೧೯೧೭೦೦.೦೦ | ೨೬,೪೭೫,೦೦.೦೦ |
| ೨೦೦೭-೦೮ | ೩೩,೩೯೪ | ೨,೦೯,೦೦,೦೦೦ | ೨೬೯೦೦೦.೦೦ | ೨೭,೧೮,೦೦೦.೦೦ |
| ೨೦೦೮-೦೯ | ೩೪,೦೨೫ | ೧,೮೭,೮೮,೭೪೧ | ೨೭೮೫೭೪.೮೯ | ೩೨,೬೯,೩೨೧.೬೬ |
| ೨೦೦೯-೧೦ | ೩೪,೮೬೩ | ೧,೯೯,೦೪,೭೩೦ | ೩೧೭೧೩೬.೯೩ | ೩೮,೨೪,೮೯೧.೯೯ |
| ೨೦೧೦-೧೧ | ೩೫,೫೦೨ | ೨,೧೫,೩೩,೬೫೧ | ೩೪೭೯೯೦೦.೦೦ | ೪೧,೩೫,೫೦೦.೦೦ |


ಆಧಾರ : ಸಹಕಾರ ಚಳುವಳಿ ಕರ್ನಾಅಕ ಅಂಕಿ ಅಂಶಗಳ ನೋಟ, ಸಂಶೋಧನೆ ಮತ್ತು ಮೌಲ್ಯಮಾಪನ ಘಟಕ ಸಹಕಾರಿ ಸಂಘಗಳ ನಿಬಂಧಕರ ಕಛೇರಿ ಬೆಂಗಳೂರು (ವಾರ್ಷಿಕ ವರದಿ, ೨೦೧೦-೧೧)

ಮೇಲ್ಕಂಡ ಕೋಷ್ಟಕವನ್ನು ಅವಲೋಕಿಸಿದಾಗ ಕರ್ನಾಟಕದಲ್ಲಿ ಸಹಕಾರಿ ಸಂಘಗಳ ಪ್ರಗತಿಯನ್ನು ಗಮನಿಸಬಹುದು. ಸಹಕಾರಿ ಸಂಘಗಳ ಸಂಖ್ಯೆ, ಸದಸ್ಯತನದ ಹೆಚ್ಚಳ, ಷೇರು ಬಂಡವಾಳ, ದುಡಿಯುವ ಬಂಡವಾಳ ಬೃಹದಾಕಾರವಾಗಿ ಬೆಳೆದಿರುವುದ್ದನ್ನು ಇಲ್ಲಿ ಗುರುತಿಸಬಹುದಾಗಿದೆ. ಇವುಗಳ ಅಭೂತ ಪೂರ್ಣ ಸಾಧನೆಗೆ ಉತ್ತಮ ಆಡಳಿತ ಕಾರಣವಿರಬಹುದು. ಸಹಕಾರಿ ಸಂಘಗಳ ಕಾಯ್ದೆ ಸಂಘಗಳ ಉಪನಿಯಮಗಳ ಪ್ರಕಾರ ನೀತಿ ನಿಯಮಗಳ ಚೌಕಟ್ಟಿನಲ್ಲಿ ಆಡಳಿತ ವ್ಯವಹಾರ ನೋಡಿಕೊಂಡು ಜನತೆಗೆ ಸಮರ್ಪಕ ಸೇವೆ ಸಲ್ಲಿಸಿ ಸಾಮರ್ಥ್ಯಕ್ಕೆ ತಕ್ಕಂತೆ ವ್ಯವಹಾರ ಲಾಭ ಹೊಂದಿ ಸಮರ್ಪಕ  ಸಾಧನೆ ಸಾಧಿಸಿರುವುದು ಅವುಗಳ ಪ್ರಗತಿಗೆ ಕಾರಣವಾಗಿದೆ ಜಾಗತೀಕರಣದ ನಂತರದ ಅವಧಿಯಲ್ಲಿ ಸ್ವಲ್ಪಮಟ್ಟಿನ ಇಳಿಕೆ ಕಂಡಿದೆಯಾದರೂ

ನಂತರದ ವರ್ಷಗಳಲ್ಲಿನ ಪ್ರಗತಿ ಹರ್ಷದಾಯಕವಾಗಿದೆ. ಹೊಸ ಆರ್ಥಿಕ ನೀತಿಯ ಜಾರಿ ಹಿನ್ನಲೆಯಲ್ಲಿ ಸಹಕಾರ ಸಂಘಗಳ ಸದಸ್ಯರ ಸಂಖ್ಯೆಯಲ್ಲಿ ವರ್ಷದಿಂದ ವರ್ಷಕ್ಕೆ ಗಮನಾರ್ಹ ಬದಲಾವಣೆಯಾಗುತ್ತಾ ಬಂದಿರುವುದನ್ನು ಗಮನಿಸಲಾಗಿದೆ ಹಾಗೆಯೇ ಷೇರು ಬಂಡವಾಳ ಮತ್ತು ದುಡಿಯುವ ಬಂಡವಾಳಗಳು ಪ್ರಗತಿಯಲ್ಲಿರುವುದನ್ನು ಕಾಣಬಹುದಾಗಿದೆ. ಹೀಗೆ ಸಹಕಾರವು ರಾಜ್ಯದ ಆರ್ಥಿಕತೆಯಲ್ಲಿ ಒಂದು ಪ್ರಮುಖವಾದ ವಲಯವಾಗಿದೆ ಮತ್ತು ಸಾಮಾಜಿಕ, ಆರ್ಥಿಕ, ರಾಜಕೀಯ, ಅಭಿವೃದ್ಧಿಯ ಸೂಚಕವಾಗಿ ಕಂಡುಬರುತ್ತಿದೆ.

ಕರ್ನಾಟಕದಲ್ಲಿ ಕೃಷಿರಂಗದಲ್ಲಿ ಸಾಧಿಸಲಾದ ಪ್ರಗತಿಗೆ ಸಹಕಾರ ಸಂಘಗಳ ಪಾತ್ರ ಮುಖ್ಯವಾಗಿದೆ. ಕೃಷಿಯು ಒಂದು ಅಸಂಘಟಿತ ವಲಯವಾಗಿದ್ದು, ಕೃಷಿಯ ಪ್ರತಿಫಲಗಳು ಹೆಚ್ಚಾಗಿ ಹವಮಾನ ಅಂಶಗಳನ್ನು ಅವಲಂಬಿಸಿದ್ದು ಜೊತೆಗೆ ಅದರ ಅಭಿವೃದ್ಧಿಗೆ ಹಣಕಾಸು ಸಹ ಅತೀ ಮುಖ್ಯವಾದುದಾಗಿದೆ. ಅಲ್ಲದೇ ಕರ್ನಾಟಕದಲ್ಲಿ ಕೃಷಿ ಜೀವನಾಧಾರ ಕಸುಬಾಗಿರುವುದರಿಂದ ಅದು 'ಪ್ರಾಥಮಿಕ ವಲಯ'ವೆಂದು ಪರಿಗಣಿಸಲ್ಪಟ್ಟದೆ. ಕೃಷಿ ಜನರ ಜೀವನ ನಿರ್ವಹಣೆಗೆ ಆಹಾರವನ್ನು ಒದಗಿಸುತ್ತಿದೆಯಲ್ಲದೆ ದೇಶದ ಆರ್ಥಿಕಾಭಿವೃದ್ಧಿ, ವಿದೇಶಿ ವ್ಯಾಪಾರ ಮತ್ತು ಆದಾಯ ವೃದ್ಧಿಗೆ ತನ್ನದೇ ಆದ ಕೊಡುಗೆಗಳನ್ನು ಸಲ್ಲಿಸುತ್ತಿದೆ. ಹೀಗೆ ರಾಜ್ಯದ ಆದಾಯಕ್ಕೆ ಅಪಾರ ಕೊಡುಗೆ ನೀಡುತ್ತಿರುವ ಕೃಷಿ ಇಂದು ಅನೇಕ ಸಮಸ್ಯೆಗಳಿಂದ ಕೂಡಿಕೊಂಡಿದೆ. ಶೇ ೬೫ಕ್ಕಿಂರಲೂ ಹೆಚ್ಚಿನ ಜನರು ಇಂದು ಭೂಮಿಯನ್ನು ಅವಲಂಬಿತರಾಗಿದ್ದಾರೆ. ಅಂದರೆ ಕೃಷಿಯನ್ನು ಅವಲಬಿಸಿದ್ದಾರೆ. ನೀರಾವರಿ ಸೌಲಭ್ಯದ ಕೊರತೆ, ಕಡಿಮೆ ಉತ್ಪಾದನೆಯಿಂದಾಗಿ ವೈಜ್ಞಾನಿಕ ಬೇಸಾಯ ಕ್ರಮ ಮತ್ತು ಆಧುನಿಕ ಯಂತ್ರೋಪಕರಣಗಳನ್ನು ಬಳಸುವುದು ಕಷ್ಟಕರವಾಗಿದೆ. ಇದಕ್ಕೆ ಹಣಕಾಸಿನ ಅಡಚಣೆಯು ಮುಖ್ಯ ಕಾರಣವಾಗಿದೆ. ಕೃಷಿ ಮಾರುಕಟ್ಟೆಗಳು ಸೌಲಭ್ಯದ ಕೊರತೆಯನ್ನು ಅನುಭವಿಸುತ್ತಿದೆ. ಇಂತಹ ಮಾರುಕಟ್ಟೆಗಳು ಇನ್ನೂ ಸರಿಯಾಗಿ ಅಭಿವೃದ್ಧಿಗೊಂಡಿಲ್ಲ. ಇದರಿಂದ ರೈತರು ತಾವು ಬೆಳೆದ ಬೆಳೆಗಳಿಗೆ ಸರಿಯಾದ ಬೆಲೆ ಪಡೆಯುವುದು ಸಾಧ್ಯವಾಗುತ್ತಿಲ್ಲ. ಅಲ್ಲದೇ ಸ್ಥಳೀಯ ಮಾರುಕಟ್ಟೆಯಲ್ಲಿ ಮಧ್ಯವರ್ತಿಗಳ ಹಾವಳಿಯಿಂದ ಅವರು ತಮ್ಮ ವಸ್ತುಗಳನ್ನು ಕಡಿಮೆ ಬೆಲೆಗೆ ಮಾರಬೇಕಾದ ಅನಿವಾರ್ಯತೆ ಉಂಟಾಗಿದೆ. ಇದರಿಂದಾಗಿ ಅವರು ನಷ್ಟ ಅನುಭವಿಸಬೇಕಾಗಿದೆ. ಈ ಎಲ್ಲ ಸಮಸ್ಯೆಗಳ ನಿವಾರಣೆಯಾಗಬೇಕಾದರೆ ಕೃಷಿಗೆ ಹಣಕಾಸು ಅತೀ ಮುಖ್ಯ. ಹಣಕಾಸು ಕೃಷಿಯ ಪ್ರಾಣ ವಾಯುವಿದ್ದಂತೆ. ಕೃಷಿ ಚಟುವಟಿಕೆಗಳಿಗಾಗಿ ರೈತರು ಅನಿವಾರ್ಯವಾಗಿ ಹೊರಗಿನ ಮೂಲಗಳನ್ನು ಅವಲಂಬಿಸುತ್ತಾರೆ. ಅದರಲ್ಲಿ ಸಹಕಾರ ಸಂಘಗಳ ಪಾತ್ರವು ಬಹು ಮುಖ್ಯವಾಗಿದೆ.[೬]

ಕೃಷಿ ಹಣಕಾಸಿನ ಮೂಲಗಳನ್ನು ಕೆಳಕಂಡ ಪಟ್ಟಿಯಿಂದ ಗುರುತಿಸಬಹುದು.




ಮೇಲಿನ ಪಟ್ಟಿಯನ್ನು ಗಮನಿಸಿದಾಗ ಕೃಷಿ ಚಟುವಟಿಕೆಗಳಿಗೆ ಬೇಕಾಗಿರುವ ಹಣಕಾಸಿನ ಮೂಲಗಳನ್ನು ಎರಡು ಮೂಲಗಳಿಂದ ಗುರುತಿಸಿಲಾಗಿದೆ.

ಕೃಷಿಗೆ ಬೇಕಾದ ಹಣಕಾಸಿನ ಮೂಲದಲ್ಲಿ ಸಹಕಾರ ಸಂಘಗಳ ಪಾತ್ರವು ಬಹುಮುಖ್ಯವಾಗಿದೆ. ಸ್ಥಳೀಯ ಲೇವಾದೇವಿಗಾರರು ಅಧಿಕ ದರದಲ್ಲಿ ಸಾಲವನ್ನು ನೀಡಿ ರೈತರನ್ನು ಶೋಷಿಸುತ್ತಿದ್ದರು. ಇದನ್ನು ನಿರ್ಮೂಲನೆಗೊಳಿಸಲು ಸಹಕಾರಿ ಸಂಘಗಳು ತಲೆ ಎತ್ತಿದವು. ಗ್ರಾಮೀಣ ಋಣಭಾರವನ್ನು ತಗ್ಗಿಸಿ ಜನರಲ್ಲಿ ಉಳಿತಾಯ ಪ್ರವತ್ತಿಯನ್ನು ಬೆಳೆಸುವುದು ಸಹಕಾರಿ ಸಂಘಗಳ ಮೂಲಭೂತ ಉದ್ದೇಶವಾಗಿದೆ. ಕಡಿಮೆ ದರದಲ್ಲಿ ಸಾಲವನ್ನು ಒದಗಿಸಿ, ಪರಸ್ಪರ ಸಹಾಯಕ್ಕಾಗಿ ಮುಂದೆ ಬರುವಂತೆ ನೋಡಿಕೊಳ್ಳಲು ಸಹಕಾರಿಯಾಗಿವೆ. ಸ್ವಾತಂತ್ರ್ಯ ನಂತರ ಈ ಚಳುವಳಿ ವ್ಯಾಪಕವಾಗಿ ಹಬ್ಬಿದೆ. ಕೃಷಿಗೆ ಬೇಕಾದ ಅಲ್ಪಾವಧಿ ಮತ್ತು ಮಧ್ಯಾವಧಿ ಸಾಲಗಳನ್ನು ಕೃಷಿ ಸಹಕಾರಿ ಸಂಘಗಳು ನೀಡುತ್ತವೆ. ಕೃಷಿಯ ಪ್ರಗತಿಗಾಗಿ ಗ್ರಾಮೀಣ ಪ್ರದೇಶದಲ್ಲಿನ ದುರ್ಬಲ ವರ್ಗಗಳ ಸಮಸ್ಯೆಗಳಿಗೆ ಪರಿಹಾರ ಕಂಡು ಹಿಡಿಯುವ ಉದ್ದೇಶದಿಂದ ಕೃಷಿ ಸಹಕಾರಿ ಸಂಘಗಳು ಸ್ಥಾಪನೆಯಾಗಿದ್ದು, ಗ್ರಾಮೀಣ ಅರ್ಥ ವ್ಯವಸ್ಥೆಯಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸುತ್ತವೆ. ಕಳೆದ ಕೆಲವು ವರ್ಷಗಳಲ್ಲಿ ರಾಜ್ಯದಲ್ಲಿನ ಸಹಕಾರ ಆಂದೋಲನ ಅತ್ಯುನ್ನತ ಹಾಗೂ ಪ್ರಾಥಮಿಕ ಮಟ್ಟಗಳೆರಡರಲ್ಲೂ ಪ್ರಗತಿ ಹೊಂದಿದೆ. ರಾಷ್ಟ್ರೀಯ ಹಾಗೂ ರಾಜ್ಯ ನೀತಿಗಳಿಗನುಸಾರವಾಗಿ ಜನರ ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಲು ಅಂದರೆ ಕೃಷಿ ಉತ್ಪಾದನೆಯನ್ನು ಹೆಚ್ಚಿಸಲು ಹಾಗೂ ಸಹಕಾರಿ ವಾತಾವರಣವನ್ನು ರೂಪಿಸಲು

ರೈತರಿಗೆ ಸಾಕಷ್ಟು ಕೃಷಿ ಸಾಲ ನೀಡಿಕೆಗೆ ಅವಕಾಶ ಕಲ್ಪಿಸುವ ಮೂಲಕ ಸಹಕಾರ ಸಂಸ್ಥೆಗಳನ್ನು ಸಂವರ್ಧಿಸಿ ಸಂಘಟಿಸಲಾಗಿದೆ.

**೨.೫.ಗ್ರಂಥ ಪರಾಮರ್ಶೆ**

ಕೃಷಿ ಸಾಲಗಳ ಅಗತ್ಯತೆಗಳ ಕುರಿತು ಅನೇಕ ಪ್ರಬಂಧಗಳು, ವರದಿಗಳು ಮತ್ತು ಸಂಶೋಧನಾತ್ಮಕ ಲೇಖನಗಳಲ್ಲಿ ಚರ್ಚಿಸಲಾಗಿದೆ. ಅವುಗಳಲ್ಲಿ ಕೆಲವು ಗ್ರಂಥಗಳನ್ನು ಇಲ್ಲಿ ಪರಾಮರ್ಶೆ ಮಾಡಲಾಗಿದೆ.

ಗ್ರಾಮೀಣ ಅಭಿವೃದ್ಧಿ ಹಾಗೂ ಅದಕ್ಕೆ ಸಂಬಂಧ ಪಟ್ಟ ಕ್ಷೇತ್ರಗಳಿಗೆ ಹರಿದು ಬರುತ್ತಿರುವ ಸಾಲಗಳ ಬಗ್ಗೆ ಕ್ರಮಬದ್ಧವಾದ ಅಧ್ಯಯನ ನಡೆಸಲು ಕೇಂದ್ರ ಸರ್ಕಾರ ಹಾಗೂ ರಿಸರ್ವ್ ಬ್ಯಾಂಕ್ ಮೊದಲ ಪಂಚವಾರ್ಷಿಕ ಯೋಜನೆಯ ಆರಂಭದಿಂದಲೇ ಅನೇಕ ತಜ್ಞ ಸಮಿತಿಗಳನ್ನು ನೇಮಕ ಮಾಡಿದೆ. ಈ ಎಲ್ಲಾ ಸಮಿತಿಗಳು ಸಹಕಾರ ಆರ್ಥಿಕ ವ್ಯವಸ್ಥೆಯನ್ನು ಸದೃಢಗೊಳಿಸಲು ಸಲಹೆ ಸೂಚನೆಗಳನ್ನಿತ್ತಿದೆ. ಕೃಷಿ ಸಾಲಗಳ ಅಗತ್ಯತೆ ಮತ್ತು ಸಹಕಾರ ಬ್ಯಾಂಕುಗಳಲ್ಲಿನ ಕೃಷಿ ಸಾಲಗಳ ವ್ಯವಸ್ಥೆಗಳ ಬಗೆಗಿನ ಅನೇಕ ವರದಿಗಳು ಹಾಗೂ ಪ್ರಬಂಧಗಳು ಮತ್ತು ಲೇಖನಗಳಲ್ಲಿ ಚರ್ಚಿಸಲಾಗಿದೆ. ಅವುಗಳಲ್ಲಿ ಪ್ರಸ್ತುತ ಅಧ್ಯಯಕ್ಕೆ ಸಂಬಂಧಿಸಿದ ಕೆಲವು ಮಹತ್ತರ ಸಂಗತಿಗಳನ್ನು ಇಲ್ಲಿ ಪರಾಮರ್ಶಿಸಲಾಗಿದೆ. ಸಹಕಾರ ಸಾಲಕ್ಕೆ ಸಂಬಂಧಿಸಿದಂತೆ ಮತ್ತು ಅಭಿವೃದ್ಧಿ ಬಗೆಗಿನ ಕೆಲವು ಸಮಿತಿಗಳ ವರದಿ ಮತ್ತು ಶಿಫಾರಸ್ಸುಗಳನ್ನು ಇಲ್ಲಿ ಚರ್ಚಿಸಲಾಗಿದೆ.

ಭಾರತದ ಗ್ರಾಮೀಣ ಸಾಲ ಮತ್ತು ಸಹಕಾರ ಸಾಲದ ಕುರಿತ ಬೆಳಕು ಚೆಲ್ಲುವ ದಾಖಲೆಯನ್ನು ರೂಪಿಸಿರುವುದು ಶ್ರೀ ಗೋರ್ವಾಲ್ ಅವರ ಅಧ್ಯಕ್ಷತೆಯಲ್ಲಿ ರೂಪಿತವಾದ ಅಖಿಲ ಭಾರತ ಗ್ರಾಮೀಣ ಸಾಲ ಸಮೀಕ್ಷಾ ಸಮಿತಿ ವರದಿ ೧೯೫೪. ಈ ಸಮಿತಿಯು ಗ್ರಾಮೀಣ ಪತ್ತಿನ ಬಗ್ಗೆ ಆಳವಾಗಿ ಅಧ್ಯಯನ ಮಾಡಿ ಸದೃಢ ಗ್ರಾಮೀಣ ಪತ್ತಿನ ಸಹಕಾರ ವ್ಯವಸ್ಥೆಯ ನಿರ್ಮಾಣಕ್ಕಾಗಿ ಶಿಫಾರಸ್ಸು ಮಾಡಿದೆ. ಸಮಿತಿಯ ವರದಿಯ ಪ್ರಕಾರ ಸರ್ಕಾರದಿಂದ ಶೇ ೩.೩, ಸಹಕಾರದಿಂದ ಶೇ ೩.೧, ವಾಣಿಜ್ಯ ಬ್ಯಾಂಕು ಶೇ. ೦.೯ ಇಷ್ಟನ್ನು ಬಿಟ್ಟರೆ ಉಳಿದೆಲ್ಲಾ ಬಹುತೇಕ ಹಣಕಾಸು ಖಾಸಗಿ ಮೂಲದಿಂದ ಪತ್ತಿನ ಪೂರೈಕೆ ಆಗುತ್ತಿತ್ತು. ಸಹಕಾರಿ ಸಂಘಗಳ ಪುನರ್ ಸಂಘಟನೆ ಮಾಡಿ ಚಿಕ್ಕ ಸಂಘಗಳನ್ನು ಕೂಡಿಸಿ ಆರ್ಥಿಕ ಅಭಿವೃದ್ಧಿ ಹೆಚ್ಚು ಉಂಟಾಗುವಂತೆ ಹೆಚ್ಚಿನ ಕಾರ್ಯವ್ಯಾಪ್ತಿಯುಳ್ಳ ದೊಡ್ಡ ಪ್ರಮಾಣದ ಸಂಘಗಳನ್ನು ಸ್ಥಾಪಿಸಲು ಸಮಿತಿಯು ಪತ್ತು, ಉಳಿತಾಯ, ಗೃಹ ಬಳಕೆ, ಮಾರಾಟ ಮುಂತಾದ ವಿವಿದ್ದೋದೇಶ ಕಾರ್ಯಗಳನ್ನು

ನಿರ್ವಹಿಸಬೇಕೆಂದು ಶಿಫಾರಸ್ಸು ಮಾಡಿತು. ಗ್ರಾಮೀಣ ಸಹಕಾರ ಪತ್ತಿನ ವ್ಯವಸ್ಥೆಯನ್ನು ಬಲಗೊಳಿಸಲು ಸರ್ಕಾರದಿಂದ ಪಾಲುಗಾರಿಕೆಯನ್ನು ಹೊಂದಬೇಕು ಎನ್ನುವ ಪ್ರಮುಖ ಅಂಶವನ್ನು ಸಮಿತಿಯು ಶಿಫಾರಸ್ಸು ಮಾಡಿದೆ. ಒಟ್ಟಾರೆಯಾಗಿ ಈ ಸಮಿತಿಯು ಗ್ರಾಮೀಣ ಅಭಿವೃದ್ಧಿಯನ್ನು ಸಹಕಾರ ಸಂಸ್ಥೆಗಳ ಮೂಲಕ ಸಾಧಿಸಲು ಸಮಗ್ರ ಶಿಫಾರಸ್ಸುಗಳನ್ನು ಮಾಡಿದೆ. ಈ ಮೂಲಕ ಸಮಿತಿಯು ನೀಡಿದ ಶಿಫಾರಸ್ಸುಗಳನ್ನು ಕಾರ್ಯ ರೂಪಕ್ಕೆ ತರುವಲ್ಲಿ ಭೂ ಅಭಿವೃದ್ಧಿ ಬ್ಯಾಂಕುಗಳ ಕಾರ್ಯ ಕ್ಷಮತೆಯನ್ನು ವಿಶೇಷವಾಗಿ ಗುರುತಿಸಲಾಗಿದೆ.[೭]

ಭಾರತದಲ್ಲಿ ಗ್ರಾಮೀಣ ಇತಿಹಾಸದಲ್ಲಿ ಗ್ರಾಮೀಣ ಸಾಲ ಪುನರ್ ವಿಮರ್ಶನಾ ಸಮಿತಿ (೧೯೬೯) ಮಹತ್ತರ ಮೈಲುಗಲ್ಲನ್ನು ರೂಪಿಸಿದೆ. ಕೃಷಿ ಸಾಲಕ್ಕೆ ನೀಡುವ ಬಂಡವಾಳದಲ್ಲಿ ಆರ್ಥಿಕ ಮತ್ತು ತಂತ್ರಜ್ಞಾನಗಳ ಸಾಧ್ಯತೆಗಳನ್ನು ಮುಖ್ಯವಾಗಿ ಪರಿಗಣಿಸಬೇಕೆಂದು ಸಮಿತಿಯು ಸೂಚಿಸಿದೆ. ಬಂಡವಾಳದಿಂದಾಗುವ ಹೆಚ್ಚುವರಿ ಆದಾಯ ಹಾಗೂ ಸಾಲಗಾರನ ಸಾಲ ಮರುಪಾವತಿಯ ಸಾಮಥ್ಯದ ಆಧಾರದಲ್ಲಿ ಸಾಲದ ಅವಧಿಯನ್ನು ನಿಗದಿ ಪಡಿಸಬೇಕು. ಕೃಷಿ ಸಾಲ ಬಂಡವಾಳವು ಕೊನೆಯ ಫಲಾನುಭವಿಗೆ ತಲುಪುವಂತೆ ಕಾರ್ಯಯೋಜನೆಗಳನ್ನು ರೂಪಿಸಲು ಸಮಿತಿಯು ಸಲಹೆ ನೀಡಿವೆ. ಈ ಸಮಿತಿಯು ನೀಡಿದ ಭೂ ಅಭಿವೃದ್ಧಿ ಬ್ಯಾಂಕಿನ ಪುನರ್ ವಿಮರ್ಶನಾ ವರದಿ ಹಾಗೂ ಶಿಫಾರಸ್ಸುಗಳ ಆಧಾರದಲ್ಲಿ ಸಾಲ ವಿತರಣಾ ನೀತಿಯನ್ನು ಹಾಗೂ ರೀತಿಗಳನ್ನು ರೂಪಿಸಲಾಗಿದೆ. ಇಂದಿಗೂ ಕೂಡ ಭೂ ಅಭಿವೃದ್ಧಿ ಬ್ಯಾಂಕುಗಳು ಈ ಸಮಿತಿಯು ಶಿಫಾರಸ್ಸುಗಳ ಆಧಾರದಲ್ಲಿ ಕೆಲಸ ನಿರ್ವಹಿಸುತ್ತಿವೆ ಎನ್ನುವುದು ವಿಶೇಷ.[೮]

ರಿಪೋರ್ಟ್ ಆಫ್ ದ ಬ್ಯಾಂಕಿಂಗ್ ಕಮಿಷನ್ (೧೯೭೨) ಶ್ರೀ ಆರ್.ಜಿ.ಸಾರೈಯಾ ಇವರ ಅಧ್ಯಕ್ಷತೆಯಲ್ಲಿ ಕೇಂದ್ರ ಸರ್ಕಾರವು ನೇಮಿಸಿದ್ದ ಕಮಿಷನ್ ತನ್ನ ವರದಿಯಲ್ಲಿ ಮುಖ್ಯವಾಗಿ ಗ್ರಾಮೀಣ ಮಟ್ಟದಲ್ಲಿ ಬ್ಯಾಂಕಿಂಗ್ ಸೌಲಭ್ಯಗಳನ್ನು ಒದಗಿಸುವುದಕ್ಕೆ ಸಂಬಂಧಿಸಿದಂತೆ ತನ್ನ ಶಿಫಾರಸ್ಸುಗಳನ್ನು ಮಾಡಿದೆ. ಪ್ರಾಥಮಿಕ ಕೃಷಿ ಪತ್ತಿನ ಸಂಘಗಳು ಬ್ಯಾಂಕಿಂಗ್ ಸೌಲಭ್ಯಗಳನ್ನು ಒದಗಿಸಬೇಕೆಂದು ಇದಕ್ಕೆ ಕೇಂದ್ರ, ರಾಜ್ಯ ಬ್ಯಾಂಕಿನಿಂದ ನೆರವು ಪಡೆಯಬೇಕೆಂದು ಶಿಫಾರಸ್ಸು ಮಾಡಿದೆ. ಆರ್ಥಿಕ ಸಾಧ್ಯತೆಯಿರುವ ಪ್ರಾಥಮಿಕ ಪತ್ತಿನ ಸಂಘವನ್ನು ಗ್ರಾಮೀಣ ಸಹಕಾರಿ ಬ್ಯಾಂಕುಗಳನ್ನಾಗಿ ಪರಿವರ್ತಿಸಲು ಸಲಹೆ ನೀಡಿತು.[೯]

ರಿಪೋರ್ಟ್ ಆಫ್ ದ ಕಮಿಟಿ ಆನ್ ಕೋ–ಆಪರೇಟಿವ್ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್(೧೯೭೪)೧೯೭೪ರಲ್ಲಿ ಭಾರತೀಯ ರಿಸರ್ವ್ ಬ್ಯಾಕ್‌ನ ಶ್ರೀ ಕೆ. ಮಾಧವಾ ದಾಸ್ ಇವರ ಅಧ್ಯಕ್ಷತೆಯಲ್ಲಿ ಭೂ ಅಭಿವೃದ್ಧಿ ಬ್ಯಾಂಕುಗಳ ಸಮಸ್ಯೆ ಮತ್ತು ಬ್ಯಾಂಕುಗಳ ಸುಧಾರಣೆಗೆ

ಕೈಗೊಳ್ಳಬೇಕಾದ ಕ್ರಮಗಳ ಕುರಿತು ವರದಿ ನೀಡುವಂತೆ ಸಮಿತಿಯನ್ನು ರಚಿಸಿತು. ಚಿಕ್ಕ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ರಾಜ್ಯ ಸಹಕಾರಿ ಬ್ಯಾಂಕ್‌ಗಳ ದೀರ್ಘಾವಧಿ ಸಾಲಗಳನ್ನು ನೀಡುವಂತೆ ಸಲಹೆ ನೀಡಿದೆ. ಫೆಡರಲ್ ಮತ್ತು ಯುನಿಟರಿ ರಚನೆಯುಳ್ಳ ಬ್ಯಾಂಕುಗಳು, ದೀರ್ಘಾವಧಿ ಸಾಲದ ವ್ಯವಸ್ಥೆಯನ್ನು ಬಲಪಡಿಸಲು ಪ್ರಾಂತ್ಯ/ವಿಭಾಗ ಮಟ್ಟದ ಶಾಖೆಗಳನ್ನು ತಾಂತ್ರಿಕ ಸಿಬ್ಬಂದಿಯಿಂದ ಕೂಡಿ ತೆರೆಯಬೇಕೆಂದು ಸಲಹೆ ನೀಡಿದೆ. ದೀರ್ಘಾವಧಿ ಪತ್ತಿನ ವ್ಯವಸ್ಥೆಯನ್ನು ಸದೃಢಗೊಳಿಸುವ ದಿಸೆಯಲ್ಲಿ ಈ ಸಮಿತಿ ಶಿಫಾರಸ್ಸುಗಳನ್ನು ಮಾಡಿದೆ.[೧೦]

ರಿಪೋರ್ಟ್ ಆಫ್ ದ ಕಮಿಟಿ ಟು ರಿವ್ಯೂ ಆರೇಂಜ್‌ಮೆಂಟ್ ಫಾರ್ ಇಂಡಸ್ಟ್ರಿಯಲ್ ಕ್ರೆಡಿಟ್ ಫಾರ್ ಅಗ್ರಿಕಲ್ಚರ್ ಆಂಡ್ ರೂರಲ್ ಡೆವೆಲಪ್‌ಮೆಂಟ್ (Craficard) (೧೯೮೧) ಶ್ರೀ ಬಿ ಶಿವರಾಮನ್ ಇವರ ಅಧ್ಯಕ್ಷತೆಯಲ್ಲಿ ೧೯೭೦ರಲ್ಲಿ ರಿಸರ್ವ್ ಬ್ಯಾಂಕ್ ರಚಿಸಿದ್ದ ಈ ಸಮಿತಿ ತನ್ನ ವರದಿ (೧೯೮೧) ಯಲ್ಲಿ ಕೆಲವೊಂದು ಮುಖ್ಯ ಸಲಹೆಗಳನ್ನು ನೀಡಿದೆ. ಅಲ್ಪಾವಧಿ ಮತ್ತು ದೀರ್ಘಾವಧಿ ಸಂಸ್ಥೆಗಳನ್ನು ಒಟ್ಟುಗೂಡಿಸುವುದಕ್ಕೆ ಸಂಬಂಧಿಸಿದಂತೆ ಭಾರತದಂತಹ ವಿಶಾಲ ರಾಷ್ಟ್ರದಲ್ಲಿ ಒಂದೇ ಅಥವಾ ಏಕರೂಪದ ರಚನೆಯುಳ್ಳ ವ್ಯವಸ್ಥೆ ಸಾಧ್ಯತೆ ಇಲ್ಲದೇ ಇರುವುದರಿಂದ ಹಾಲಿ ವ್ಯವಸ್ಥೆಯನ್ನು ಮುಂದುವರಿಸಲು ಸೂಚನೆಯನ್ನು ನೀಡಿತು. ರೈತರ ಸೇವಾ ಸಹಕಾರ ಸಂಘಗಳನ್ನು ಅಭಿವೃದ್ಧಿ ಪಡಿಸುವುದು ಅಗತ್ಯವೆಂದು ಸಲಹೆಯನ್ನು ನೀಡಿತು. ದುರ್ಬಲ ವರ್ಗದ ಜನರಿಗೆ ವಿಶೇಷ ಸವಲತ್ತು ಮತ್ತು ಸಾಲ ನೀಡಿಕೆಗೆ ಶಿಫಾರಸ್ಸುಗಳನ್ನು ಮಾಡಿತು. ಫ್ಯಾಕ್ಸ್‌ಗಳು, ಠೇವಣಿ ಸಂಗ್ರಹಣೆ ಹೆಚ್ಚಿಸುವುದು ಹಾಗೂ ಪಿ.ಎಲ್.ಡಿ.ಬಿ.ಗಳು ವೈವಿಧ್ಯ ಚಟುವಟಿಕೆಗಳನ್ನು ಕೈಗೊಳ್ಳುವುದು ಮತ್ತು ಸುಸ್ತಿದಾರ ಸದಸ್ಯರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಲು ಐ.ಪಿ.ಸಿಗೆ ಸೂಕ್ತ ತಿದ್ದುಪಡಿ ತರುವುದು ಇತ್ಯಾದಿ. ಅಗತ್ಯವೆಂದು ಸಲಹೆಯನ್ನಿತ್ತಿತು. ಗ್ರಾಮೀಣ ಅಭಿವೃದ್ಧಿಗೆ ರಾಷ್ಟ್ರೀಯ ಬ್ಯಾಂಕ್ ಸ್ಥಾಪಿತವಾಗಬೇಕೆಂಬ ಈ ಸಮಿತಿಯ ಶಿಫಾರಸ್ಸು ಬಹಳ ಮುಖ್ಯವಾದುದು. ಉದ್ದೇಶಿತ ಬ್ಯಾಂಕನ್ನು ನಬಾರ್ಡ್ ಎಂದು ಹೆಸರಿಸಿತು ಇದರ ಪರಿಣಾಮವಾಗಿ ೧೯೮೨ರಲ್ಲಿ ನಬಾರ್ಡ್ ಅಸ್ತಿತ್ವಕ್ಕೆ ಬಂದಿತ್ತು.[೧೧]

ವ್ಯವಸಾಯ ಸಾಲ ಪುನರ್ ಪರಿಶೀಲನಾ ಸಮಿತಿ (೧೯೮೯) ಕೃಷಿ ಸಾಲದ ಅಧ್ಯಯನ ಮಾಡಲು ಭಾರತದ ರಿಸರ್ವ್‌ಬ್ಯಾಂಕ್ ಕೇಂದ್ರ ಸರ್ಕಾರ ಮತ್ತು ವಿಶ್ವ ಬ್ಯಾಂಕ್‌ನೊಡನೆ ಸಮಾಲೋಚಿಸಿ ಪ್ರೋ. ಎ.ಎಂ ಖುಸ್ರೋರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿತು. ಕೃಷಿ ಸಾಲದ ಅಧ್ಯಯನ, ಕೃಷಿ ಸಾಲ ವಿತರಿಸುವ ಸಂಸ್ಥೆಗಳ ಬಗ್ಗೆ ಮತ್ತು ಅವುಗಳ ಪ್ರಯೋಜನಗಳ ಬಗ್ಗೆ ಅಧ್ಯಯನ ಮಾಡುವುದು, ಸಾಲ ತೀರಿಸಲು ತಗಲುವ ವೆಚ್ಚ ಮತ್ತು

ಲಾಭಾಂಶಗಳ ಅಧ್ಯಯನ ಮತ್ತು ನಬಾರ್ಡ್ ಬ್ಯಾಂಕ್ ಸಂಘಟನೆ ಹಾಗೂ ಆಡಳಿತ ಅಧ್ಯಯನ ಮಾಡುವುದು ಈ ಸಮಿತಿಯ ಮುಖ್ಯ ಉದ್ದೇಶವಾಗಿತ್ತು. ಅಧ್ಯಯನದಿಂದ ಸಮಿತಿ ಕಂಡುಕೊಂಡ ಪ್ರಮುಖ ಸಂಗತಿಯೆಂದರೆ ಭೂ ಅಭಿವೃದ್ಧಿ ಬ್ಯಾಂಕುಗಳ ಸಾಲ ನೀಡಿಕೆಯಲ್ಲಿನ ಇಳಿಕೆ. ಇದು ಶೇ. ೮೦ ೧೯೭೪-೭೫ರಿಂದ ಶೇ. ೪೧ ೧೯೮೪-೮೫ ಕ್ಕೆ ಇಳಿಯಿತು. ಅಲ್ಲದೆ ಗ್ರಾಮೀಣ ಪ್ರದೇಶದಲ್ಲಿನ ಬಹುತೇಕ ಬ್ಯಾಂಕುಗಳು ನಷ್ಟದಲ್ಲಿ ನಡೆಯುತ್ತಿರುವುದು ಬೆಳಕಿಗೆ ಬಂತು. ದೀರ್ಘಾವದಿ ಕೃಷಿ ಪತ್ತಿನ ವ್ಯವಸ್ಥೆಯಲ್ಲಿ ಸಾಲಕ್ಕೆ ಸಂಬಂಧಿಸಿದಂತೆ ಅನೇಕ ತೊಂದರೆಗಳನ್ನು ಗುರುತಿಸಿತು. ಈ ಎಲ್ಲಾ ಸಮಸ್ಯೆಗಳನ್ನು ಹೋಗಲಾಡಿಸಲು ಕೃಷಿ ಪತ್ತಿನ ವ್ಯವಸ್ಥೆಯ ಪುನಶ್ಚೇತನಕ್ಕೆ ಆರ್ಥಿಕ ನೆರವು ನೀಡಿ, ಬಂಡವಾಳ ವೃದ್ಧಿಗೊಳಿಸಿ ಸದೃಡ ಕ್ಷೇತ್ರವಾಗಿ ಉಳಿಸಬೇಕೆಂದು ಶಿಫಾರಸ್ಸು ಮಾಡಿತು. ಅಲ್ಲದೆ ಇಂತಹ ಬ್ಯಾಂಕು ವಿವಿಧ ಚಟುವಟಿಕೆಗಳಲ್ಲಿ ತನ್ನನ್ನು ಒಳಪಡಿಸದ ಹೊರತು ವಾಣಿಜ್ಯ ಬ್ಯಾಂಕಿನೊಂದಿಗೆ ಪೈಪೋಟಿ ನಡೆಸಲು ಸಾಧ್ಯವಿಲ್ಲ ಎಂಬುದನ್ನು ಮನನ ಮಾಡಿಕೊಟ್ಟಿತು.[೧೨]

ಈ ಎಲ್ಲಾ ಸಮಿತಿಗಳ ವರದಿಗಳನ್ನು ಗಮನಿಸಿದ ಸರ್ಕಾರವು ಕೃಷಿ ಮತ್ತು ಇತರ ಕ್ಷೇತ್ರಗಳಿಗೆ ನೀಡುವ ಸಾಲವು ಸರಿಯಾದ ವ್ಯವಸ್ಥಿತವಾದ ಸಂಸ್ಥೆಗಳ ಮೂಲಕ ವಿತರಣೆಯಾದರೆ ಸಾಲದ ಉದ್ದೇಶ ಸಾರ್ಥಕವಾಗುತ್ತದೆ ಎಂದು ತಿಳಿದು ಸಹಕಾರ ಕ್ಷೇತ್ರವನ್ನು ಆಯ್ಕೆ ಮಾಡಿದೆ. ದುರ್ಬಲ ವರ್ಗದವರ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಲು ಬಂಡವಾಳಶಾಹಿಗಳ ಅನೀತಿಯನ್ನು ಹೋಗಲಾಡಿಸಲು ಹುಟ್ಟಿಕೊಂಡ ಈ ಸ್ವಯಂ ಸಂಘಟಿತ ಸಂಸ್ಥೆಯು ಸಾಲಗಳನ್ನು ವಿತರಣೆ ಮಾಡುತ್ತಿದ್ದುದ ಮನಗಂಡ ಸರ್ಕಾರವು ಸಂಘವನ್ನು ಪುನಶ್ಚೇತನಗೊಳಿಸಲು ಆರ್ಥಿಕ ನೆರವನ್ನು ನೀಡುತ್ತಿದೆ. ಸಹಕಾರ ಸಾಲದ ಮೂಲಕ ವ್ಯವಸಾಯದ ಉತ್ಪಾದನೆಯನ್ನು ಹೆಚ್ಚಿಸುವುದು ಜೊತೆಗೆ ಸದಸ್ಯರ ಉಳಿತಾಯ ಮನೋಭಾವನೆಯನ್ನು ಪ್ರೋತ್ಸಾಹಿಸುವ ಈ ಸಹಕಾರ ಸಂಘಗಳು ವಿವಿಧ ರೀತಿಯ ಸಾಲಗಳ ಜೊತೆಗೆ ಆಹಾರ ವಸ್ತುಗಳ ಸರಬರಾಜು, ಬ್ಯಾಂಕಿಂಗ್ ಸೌಲಭ್ಯಗಳನ್ನು ಒದಗಿಸುತ್ತಿದೆ. ಅಲ್ಲದೆ ಕೃಷಿಕರಿಗೆ ಕೊಡುವ ವ್ಯವಸಾಯ ಸಾಲಗಳನ್ನು ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ರಿಯಾಯಿತಿ ದರದಲ್ಲಿ ನೀಡುತ್ತಿದೆ. ಇವೆಲ್ಲವೂ ಸಹಕಾರ ಸಂಘಗಳ ಅಭಿವೃದ್ಧಿ ಮತ್ತು ಗ್ರಾಮೀಣಭಿವೃದ್ಧಿಗೆ ಪೂರಕವಾಗಿದೆ ಎನ್ನಬಹುದು.

ಭಾರತವು ಹಳ್ಳಿಗಳನ್ನೊಳಗೊಂಡ ದೇಶವಾಗಿದೆ. ಶೇ ೭೯ರಷ್ಟು ಜನ ಇಂದಿಗೂ ಹಳ್ಳಿಗಳಲ್ಲಿ ವಾಸವಾಗಿದ್ದಾರೆ. ಅಖಿಲ ಭಾರತ ಗ್ರಾಮೀಣ ಸಾಲ ಸಮೀಕ್ಷಾ (೧೯೫೪) ಸಮಿತಿಯು "ಭಾರತ ವಾಸ್ತವವಾಗಿ ಗ್ರಾಮೀಣ ಭಾರತ ಮತ್ತು ಗ್ರಾಮೀಣ ಭಾರತ ಮುಖ್ಯವಾಗಿ ಉಳುಮೆಗಾರರು,

ಹಳ್ಳಿಯ ಕುಶಲಕರ್ಮಿಗಳು ಮತ್ತು ಕೃಷಿ ಕಾರ್ಮಿಕರು" ಗಳನ್ನು ಒಳಗೊಂಡಿದೆ ಎಂದು ಅಭಿಪ್ರಾಯಪಟ್ಟಿದೆ. ಅಲ್ಲದೆ ತನ್ನ ವರದಿಯಲ್ಲಿ ಗ್ರಾಮೀಣ ಅಭಿವೃದ್ಧಿಯಲ್ಲಿನ ಸಾಲ ನೀಡುವಿಕೆಯ ಪಾತ್ರವನ್ನು ಒತ್ತು ನೀಡಿ ರಾಷ್ಟ್ರ ಅಭಿವೃದ್ಧಿ ಪಥದಲ್ಲಿ ಸಾಗಲು ಮತ್ತು ಎಲ್ಲಾ ಆರ್ಥಿಕ ಚಟುವಟಿಕೆಗಳನ್ನು ಉತ್ತಮಗೊಳಿಸಲು ಸಾಲ ನೀಡುವಿಕೆಯು ಒಂದು ಬಲವಾದ ನೀತಿಯಾಗಿದೆ. ಎಂದು ಅಭಿಪ್ರಾಯಪಟ್ಟಿದೆ. (ತಾರಾಪೊರೆ, ಸೆಪ್ಟಂಬರ್ ೧೯,೧೯೯೪).[೧೩]

ಕೃಷಿ ಸಾಲದ ಅವಶ್ಯಕತೆಗಳನ್ನು ಹಲವು ತಜ್ಞ ಸಮಿತಿಗಳು ಒತ್ತು ನೀಡಿವೆ. ಯುನೈಟೆಡ್ ನ್ಯಾಷನಲ್ ಆರ್ಗನೈಸೇಷನ್ ನೀಡಿದ ಪ್ರಕಟನೆಯನ್ವಯ ವಿಶ್ವದ ಹೆಚ್ಚಿನ ರೈತರು ಸಾಲವನ್ನು ಪಡೆಯುತ್ತಾರೆ. ಕೆಲವೊಮ್ಮೆ ಇದು ಹೆಚ್ಚಿನ ಸಂಖ್ಯೆಯಲ್ಲಿರುತ್ತದೆ. ಏಕೆಂದರೆ ಕೃಷಿ ಉತ್ಪಾದನೆಯನ್ನು ಹೆಚ್ಚಿಸಲು ಭೂ ಹಕ್ಕುಗಳನ್ನು ಪುನರ್ ವಿತರಣೆ ಮಾಡಲು ಇದು ಅಗತ್ಯವಾಗಿದೆ. ಹೀಗೆ ಕೃಷಿ ಮತ್ತು ಸಾಮಾನ್ಯ ಪ್ರಗತಿಗೆ ಮತ್ತು ಕೃಷಿ ಹಿತಾಸಕ್ತಿಗೆ ಸಾಕಷ್ಟು ಪ್ರಮಾಣದ ಸಾಲವು ರೈತರಿಗೆ ಸೂಕ್ತ ವೆಚ್ಚದಲ್ಲಿ ಲಭ್ಯವಿರುತ್ತದೆ. (ಮೆಮೊರಿಯಾ, ೧೯೮೩, ಪು.೫೧) [೧೪]

ರೈತರಿಗೆ ಅನುಕೂಲಕರ ಷರತ್ತುಗಳೊಂದಿಗೆ ಸಾಲದ ಅಗತ್ಯವಿದೆ. ಅಲ್ಲದೆ ಇವುಗಳ ಬಳಕೆಯನ್ನು ಉತ್ತಮಗೊಳಿಸಲು ಪರಿಣಾಮಕಾರಿಯಾಗಿ ನಿಯಂತ್ರಣಗೊಳಿಸುವುದು ಸಾಮಾಜಿಕ ಜವಾಬ್ದಾರಿಯಾಗಿದೆ. ಈ ಕಾರಣದಿಂದಲೇ ಸಾಂಸ್ಥಿಕ ಸಾಲಕ್ಕೆ ಹೆಚ್ಚು ಮಹತ್ವ ನೀಡಲಾಗಿದೆ.

ಸಾಂಸ್ಥಿಕ ಸಾಲವನ್ನು ಬೆಂಬಲಿಸುವ ಇನ್ನೊಂದು ಬಲವಾದ ಕಾರಣವೆಂದರೆ ಕೃಷಿ ಸಾಲವನ್ನು ಕೇವಲ ಸಾಲ ನೀಡುವುದು ಎಂಬ ಸಂಕುಚಿತ ಅರ್ಥದಲ್ಲಿ ವ್ಯಾಖ್ಯಾನಿಸದೆ, ಇದು ಈಗ ಒಂದು ವ್ಯಾಪಕವಾದ ತಾಂತ್ರಿಕ ಮಾರ್ಗದರ್ಶನ ಮತ್ತು ಸ್ವತಃ ಕೃಷಿ ವ್ಯವಹಾರಗಳಿಗೆ ಒಂದು ಸಂಪರ್ಕವಾಗಿ ಹಲವು ಯೋಜನೆಗಳನ್ನು ಒಳಗೊಂಡಿದೆ. ರೈತ ಮಾಡಿದ ಸಾಲವನ್ನು ಪರಿಣಾಮಕಾರಿ ಬಳಕೆ ಮಾಡಲು ಮಾರ್ಗದರ್ಶನ ಅಗತ್ಯವಾಗಿದೆ. ಕೃಷಿ ಉತ್ಪನ್ನವನ್ನು ಹೆಚ್ಚಿಸಲು ಮತ್ತು ಎಲ್ಲಾ ರೀತಿಯ ಬ್ಯಾಂಕಿಗ್ ಸೌಲಭ್ಯಗಳನ್ನೊದಗಿಸುವುದು ಸಾಂಸ್ಥಿಕ ಸಾಲದ ಮುಖ್ಯ ಉದ್ದೇಶವಾಗಿದೆ. ಅಲ್ಲದೆ ರೈತರಿಗೆ ಸುಧಾರಿತ ಕೃಷಿ ವಿಧಾನಗಳನ್ನು ತಿಳಿಸದ ಹೊರತು ತನ್ನ ಉದ್ದೇಶವನ್ನು ತಲುಪಲು ಸಾಧ್ಯವಿಲ್ಲವಾದ್ದರಿಂದ ಸಾಲ ನೀಡಿಕೆ, ಕೃಷಿ ವಿತರಣಾ ಸೇವೆಯನ್ನು ವಿಸ್ತರಿಸಲು ಇತರ ದೇಶದ ಕೃಷಿ ವಿಸ್ತರಣ ಸೇವೆಯ ನಿಕಟ ಸಹಯೋಗದಿಂದ ಸಾಧಿಸಲು ಸಾಧ್ಯವಾಗಬಹುದಾಗಿದೆ.

ಪ್ರೊ.ಎನ್.ಎಸ್ ಭಟ್ (೧೯೯೫) 'ಬ್ಯಾಂಕುಗಳಿಂದ ಕೃಷಿ ಸಾಲ' ದಕ್ಷಿಣ ಕನ್ನಡ ಜಿಲ್ಲೆಯ ವಾಣಿಜ್ಯ ಬ್ಯಾಂಕುಗಳು, ಪ್ರಾದೇಶಿಕ ಗ್ರಾಮೀಣ ಬ್ಯಾಂಕು ಮತ್ತು ಸಹಕಾರ ಸಂಘಗಳ ಆಯ್ದ ಕೃಷಿ ಸಾಲಗಾರರ ಒಂದು ಅಧ್ಯಯನದಲ್ಲಿ ಬಂದ ತೀರ್ಮಾನವೆಂದರೆ ಸಣ್ಣ ಭೂ ಹಿಡುವಳಿದಾರರು ಮತ್ತು ಅತ್ಯಂತ ಕಡಿಮೆ ವಾರ್ಷಿಕ ವರಮಾನವುಳ್ಳವರು ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಹಣಕಾಸು ಸಂಸ್ಥೆಗಳಿಂದ ಸಾಲವನ್ನು ಪಡೆಯುತ್ತಾರೆ. ಭೂ ಹಿಡುವಳಿಯನ್ನು ಮತ್ತು ವಾರ್ಷಿಕ ವರಮಾನದಲ್ಲಿ ಕೃಷಿಕರಲ್ಲಿ ಆರ್ಥಿಕ ಅಸಮಾನತೆಯಿದೆ. ಈ ಆರ್ಥಿಕ ಅಸಮಾನತೆಯನ್ನು ಹೋಗಲಾಡಿಸಲು ಭಾರತದ ಆರ್ಥಿಕ ನೀತಿಯನ್ವಯ ಆಧಾರದಲ್ಲಿ ಅಸಮಾನತೆಯನ್ನು ಸರಿತೂಗಿಸಿದರೆ, ಹಣಕಾಸು ಸಂಸ್ಥೆಗಳು ಸಣ್ಣ ರೈತರನ್ನು ಗುರಿಯನ್ನಾಗಿರಿಸಿ ಸೂಕ್ತವಾದ ನೀತಿಯನ್ನು ಅಳವಡಿಸಬಹುದಾಗಿದೆ.

ಭಾರ್ಗವ ಮತ್ತು ಶಾ (೧೯೬೮) ಉತ್ತರ ಪ್ರದೇಶದ ತರ್ರೈ ಪ್ರದೇಶದಲ್ಲಿ ನಡೆಸಿದ ತಮ್ಮ ಅಧ್ಯಯನದಲ್ಲಿ ಬಂದ ತೀರ್ಮಾನ ವೆಂದರೆ "ಸಣ್ಣ ರೈತರ ಸಾಲ ಅಗತ್ಯತೆಗಳು ರಸಗೊಬ್ಬರಗಳ ಸಾಲ ಕಾರ್ಮಿಕ ವೆಚ್ಚ, ಪಂಪ್ ಸೆಟ್, ಭೂಸುಧಾರಣೆ ಮತ್ತು ಕಟ್ಟಡಗಳನ್ನೊಳಗೊಂಡಿದೆ. ಮಧ್ಯಮ ವರ್ಗದ ರೈತರು ರಸಗೊಬ್ಬರಗಳ ಸಾಲ, ಕಾರ್ಮಿಕ ವೆಚ್ಚ, ಕೊಳವೆ ಬಾವಿ, ಟ್ರಾಕ್ಟರ್‌ಗಳು, ಕೃಷಿಸಲಕರಣೆ ಮತ್ತು ಕಟ್ಟಡಗಳನ್ನೊಳಗೊಂಡಿದೆ. ಅಲ್ಲದೆ ಕಾರ್ಮಿಕ ವೆಚ್ಚ, ರಸಗೊಬ್ಬರ, ಕೊಳವೆ ಬಾವಿ, ಟ್ರಾಕ್ಟರ್ ಇವೆಲ್ಲ ದೊಡ್ಡ ರೈತರುಗಳ ಅಗತ್ಯತೆಗಳಾಗಿವೆ.

ಮನಮೋಹನ್ ಮತ್ತು ಜೋಷಿ (೧೯೭೫)ರ ತಮ್ಮ ಅಧ್ಯಯನದಲ್ಲಿ "ಸುಧಾರಿತ ತಂತ್ರಜ್ಞಾನದ ಅನುಕೂಲತೆಯನ್ನು ಪಡೆಯಲು ಸಣ್ಣ, ಮಧ್ಯಮ ಹಾಗೂ ದೊಡ್ಡ ಪ್ರಮಾಣದ ಬಂಡವಾಳದ ಅಗತ್ಯವಿದೆ" ಎಂದು ಅಭಿಪ್ರಾಯ ಪಡುತ್ತಾರೆ.

ಈ ಮೇಲಿನ ಅಧ್ಯಯನಗಳನ್ನು ಗಮನಿಸಿದಾಗ ಕೃಷಿ ಉತ್ಪಾದನೆಯನ್ನು ಹೆಚ್ಚಿಸಲು ತಂತ್ರಜ್ಞಾನಗಳ ಅಳವಡಿಕೆ ಅಗತ್ಯ ಮತ್ತು ಇದಕ್ಕೆ ಸಣ್ಣ, ಮಧ್ಯಮ ಹಾಗೂ ದೊಡ್ಡ ಪ್ರಮಾಣದ ಬಂಡವಾಳದ ಅಗತ್ಯವಿದೆ ಎಂದು ತಿಳಿದು ಬರುತ್ತದೆ.

ಎ.ಆರ್. ಪಟೇಲ್ (೧೯೭೫) ತಮ್ಮ ಅಧ್ಯಯನದಲ್ಲಿ ಸಹಕಾರಿ ಸಂಘಗಳು ಮತ್ತು ವಾಣಿಜ್ಯ ಬ್ಯಾಂಕುಗಳ ಕೃಷಿ ಮುಂಗಡವನ್ನು ಅವಲೋಕಿಸಿ ಕಂಡು ಕೊಂಡ ಅಂಶವೆಂದರೆ ಸಹಕಾರ ಸಂಘಗಳು ಸಣ್ಣ ಮತ್ತು ಮಧ್ಯಮ ಮಟ್ಟದಲ್ಲಿ ನೀಡಿದ ಸಾಲದಲ್ಲಿನ ಹೆಚ್ಚಳ ೧೯೭೦-೭೧ರಲ್ಲಿ ೫೭೮ ಕೋಟಿ ರೂ. ನಿಂದ ೧೯೭೨-೭೩ರಲ್ಲಿ ೬೮೬ ಕೋಟಿಗೇರಿತು. ಇದು ೧೯೭೩-೭೪

೭೫೦ ಕೋಟಿ ರೂ. ಗೆ ತಲುಪಿತು. ಈ ಅಧ್ಯಯನದಲ್ಲಿ ತಿಳಿದು ಬಂದ ಪ್ರಮುಖ ಸಂಗತಿಯೆಂದರೆ ಸಹಕಾರಿ ಸಂಘಗಳಲ್ಲಿ ಕೃಷಿ ಸಾಲದಲ್ಲಿನ ಪ್ರಗತಿ.

ಹೀಗೆ ಸಹಕಾರವು ಸಮಾನವಾಗಿ ಸಾಮಾಜಿಕ ಉದ್ದೇಶ ಮತ್ತು ಆರ್ಥಿಕ ಅಭಿವೃದ್ಧಿಯ ಜೊತೆಗೆ ಸದಸ್ಯ ಮತ್ತು ಸಾರ್ವಜನಿಕರ ನೈತಿಕ ಪ್ರಗತಿಯಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಮತ್ತು ಸಾಮಾಜಿಕ ಮೌಲ್ಯಗಳ ಪ್ರಾಬಲ್ಯ ಸ್ಥಾಪಿಸಲು ಸಹಾಯಕವಾಗುತ್ತದೆ. ಅಲ್ಲದೇ ಸಹಕಾರ ಚಳುವಳಿಯು ಅನೇಕ ಅಂತರಾಷ್ಟ್ರೀಯ ಸಮಸ್ಯೆಗಳನ್ನು ಪರಿಹರಿಸುವ ಸಾಮರ್ಥ್ಯವನ್ನು ಹೊಂದಿದೆ ಎಂದು ಸಾಬೀತು ಪಡಿಸಿದೆ. ಸಹಕಾರವು ಒಂದು ನಿರ್ದಿಷ್ಟ ದೇಶದ ಒಂದು ನಿರ್ದಿಷ್ಟ ಸಮುದಾಯದಲ್ಲಿ ಬೇರೂರಿದ ಸ್ಥಳೀಯ ಸಂಘಟನೆಯಾಗಿದ್ದು ಅಂತರಾಷ್ಟ್ರೀಯ ಚೌಕಟ್ಟಿಗೆ ಸಂಬಂಧಿಸಿದಂತೆ ಸಾಮಾನ್ಯ ಆದರ್ಶಗಳು, ಸಾಮಾನ್ಯ ಗುರಿಗಳನ್ನು ಮತ್ತು ಸಾಮಾನ್ಯ ಒಮ್ಮತವನ್ನು ಹೊಂದಿದೆ.

ಅಂತರಾಷ್ಟ್ರೀಯ ಸಹಕಾರ ಒಕ್ಕೂಟಗಳು (ICA) ತನ್ನ ಜನರ ಜೀವನಮಟ್ಟವನ್ನು ಉತ್ತಮಗೊಳಿಸಲು ಮತ್ತು ಸಾರ್ವತ್ರಿಕ ಶಾಂತಿಯನ್ನು ಬಲಪಡಿಸಲು ಎಲ್ಲಾ ದೇಶಗಳ ಸಹಕಾರ ಅಗತ್ಯವೆಂಬ ಬೇಡಿಕೆಯನ್ನಿತ್ತಿದೆ. ಹೀಗೆ ಸಹಕಾರವು ಈ ಸಂದರ್ಭದಲ್ಲಿ ಸ್ಥಳೀಯ ಮತ್ತು ಜಾಗತಿಕ ನಡುವಿನ ಒಂದು ರೀತಿಯ ವಾಹಕವಾಗಿದೆ ಎಂದು ಕರೆಯಲಾಗಿದೆ. ಅಲ್ಲದೆ ವಿಶ್ವದ ಆರ್ಥಿಕ ಮತ್ತು ಸಾಮಾಜಿಕ ಬೆಳವಣಿಗೆಯ ಮಾರ್ಗದರ್ಶಿ ಸಹಕಾರವಾಗಿದೆ. ಈ ನಿಟ್ಟಿನಲ್ಲಿ ಸಹಕಾರ ಸಂಘಗಳ ಇನ್ನಷ್ಟು ಬಲವರ್ಧನೆಯಾಗಬೇಕಾಗಿದೆ.

## ಉಲ್ಲೇಖಗಳು


೧. ಕೃಷ್ಣಮೂರ್ತಿ ಎಚ್. ಆರ್(೨೦೦೨) ಭಾರತದ ಆರ್ಥಿಕ ವ್ಯವಸ್ಥೆ, ಸ್ವಪ್ನ ಬುಕ್‌ಹೌಸ್, ಬೆಂಗಳೂರು. ಪು. ೨೬೨.

೨. ಬೆಂಚನ್‌ಕರ್ ಪಿ.ವೈ.ಆಂಡ್ ಎಂ.ವಿ. ನಂಜೀಶ್ (೧೯೭೫), ಕೋ–ಆಪರೇಷನ್ ಆಂಡ್ ದ ಡೈನಮಿಕ್ ಆಫ್ ಚೇಂಜ್, ಸೋಮಯ್ಯ ಪಬ್ಲಿಕೇಷನ್ಸ್, ನ್ಯೂ–ಡೆಲ್ಲಿ, ಪು.ಸಂ ೨೫

೩. ಜಿ.ಓ.ಐ ಡಿಪಾರ್ಟ್‌ಮೆಂಟ್ ಆಫ್ ಕೋ–ಆಪರೇಟಿವ್, ರಿಪೋರ್ಟ್, ೧೯೭೨–೭೩, ಪು.ಸಂ. ೮೫.

೪. ಜಿ.ಓ.ಐ ಡಿಪಾರ್ಟ್‌ಮೆಂಟ್ ಆಫ್ ಕೋ–ಆಪರೇಟಿವ್, ರಿಪೋರ್ಟ್, ೧೯೭೨–೭೩, ಪು.ಸಂ. ೫, ಪು ೫೮೦.

೫. .ಪುರಾಣಿಕ್ ಯು.ಆರ್.(೨೦೦೫), ಸಹಕಾರ ಚಳುವಳಿಗೆ ನೂರರ ಸಂಭ್ರಮ, ಪ್ರಜಾವಾಣಿ, ವಾಣಿಜ್ಯ ಪುರವಣಿ, ಮೇ೨೦೦೫.

೬. ಚಿನ್ನಸ್ವಾಮಿ ಸೋಸಲ್ (೨೦೦೪), ನಮ್ಮ ಗ್ರಾಮಗಳು ಅಂದು ಇಂದು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೨೬.

೭. ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ, ಅಖಿಲ ಭಾರತ ಗ್ರಾಮೀಣ ಸಾಲ ಸಮೀಕ್ಷಾ ಸಮಿತಿ ವರದಿ, ಬಾಂಬೆ, ೧೯೫೪

೮. ರಿಸರ್ವ್ ಬ್ಯಾಂಖ್ ಆಫ್ ಇಂಡಿಯಾ, ಅಖಿಲ ಭಾರತ ಸಾಲ ಪುನರ್ ವಿಮರ್ಶನಾ ಸಮಿತಿ ವರದಿ, ಬಾಂಬೆ, ೧೯೬೯

೯. ಜಿ.ಓ.ಐ. ಡಿಪಾರ್ಟ್‌ಮೆಂಟ್ ಆಫ್ ಕೋ–ಆಪರೇಷನ್ ರಿಪೋರ್ಟ್ ೧೯೭೨–೭೩ ಪು೨೯

೧೦. ಜಿ.ಓ.ಐ. ಡಿಪಾರ್ಟ್‌ಮೆಂಟ್ ಆಫ್ ಕೋ–ಆಪರೇಷನ್ ರಿಪೋರ್ಟ್ ೧೯೭೨–೭೩ ಪು೩೦

೧೧. ಆರ್.ಬಿ.ಐ, ರಿಪೋರ್ಟ್ ಆಫ್ ದ ಕಮಿಟಿ ಟು ರಿವ್ಯೂ ಅರೇಂಜ್‌ಮೆಂಟ್ಸ್ ಫಾರ್ ಇನ್ಸಿಟಿಟ್ಯೂಷನಲ್ ಕ್ರೆಡಿಟ್ ಫಾರ್ ಅಗ್ರಿಕಲ್ಚರ್ ಆಂಡ್ ರೂರಲ್ ಡೆವೆಲಪ್‌ಮೆಂಟ್ಸ್ (Craficard) ಬಾಂಬೆ, ೧೯೮೧, ಪು ೩೪೯ & ಪು ೩೬೨

೧೨.ಆರ್.ಬಿ.ಐ, ರಿಪೋರ್ಟ್ ಆಫ್ ದ ಅಗ್ರಿಕಲ್ಚರ್ ಕ್ರೆಡಿಟ್ ರಿವ್ಯೂ ಕಮಿಟಿ (ACRC) ಬಾಂಬೆ, ೧೯೮೯.

೧೩. ತಾರಾಪೊರೆ ಎಸ್.ಎಸ್., ರೂರಲ್ ಬ್ಯಾಂಕಿಂಗ್ ಎಟ್ ಕ್ರಾಸ್ ರೋಡ್ಸ್, ಫಸ್ಟ್ ಸ್ಪೆಷಲ್ ಲೆಕ್ಚರ್ ಅಂಡರ್ ಸಿಂಡಿಕೇಟ್ ಬ್ಯಾಂಕ್ ಚ್ಯಾರ್ ಆನ್ ರೂರಲ್ ಬ್ಯಾಂಕ್, ಮ್ಯಾಂಗಲೂರ್ ಯೂನಿವರ್ಸಿಟಿ, ಸೆಪ್ಟೆಂಬರ್ ೧೯, ೧೯೯೪

೧೪. ಮೆಮೊರಿಯಾ ಸಿ.ಬಿ. 'ರೂರಲ್ ಕ್ರೆಡಿಟ್ ಆಂಡ್ ಎಗ್ರಿಕಲ್ಚರ್ ಆಂಡ್ ಅಗ್ರಿಕಲ್ಚರಲ್ ಕೋ–ಆಪರೇಷನ್ ಇನ್ ಇಂಡಿಯಾ' ಕಿತಾಬ್ ಮಹಲ್ ಅಲಹಬಾದ್, ದೆಲ್ಲಿ, ಪಾಟ್ನ, ನಾಗಪುರ್ ಫಸ್ಟ್ ಎಡಿಷನ್ ೧೯೮೩.

# ಅಧ್ಯಾಯ-೩

# ಮಂಗಳೂರಿನ ಆಯ್ದ ಬ್ಯಾಂಕುಗಳ ಕ್ಷೇತ್ರ ಕಾರ್ಯಾಧಾರಿತ  ಅಧ್ಯಯನ

## ಅಧ್ಯಾಯ ೩

## ಮಂಗಳೂರಿನ ಆಯ್ದ ವ್ಯವಸಾಯ ಸಹಕಾರಿ ಬ್ಯಾಂಕುಗಳ ಕ್ಷೇತ್ರ ಕಾರ್ಯಾಧಾರಿತ ಅಧ್ಯಯನ

ಕಳೆದ ಮೂರು ದಶಕಗಳಿಂದ ಭಾರತದ ಬ್ಯಾಂಕಿಂಗ್ ವ್ಯವಸ್ಥೆಯು ಹಲವಾರು ಸಾಧನೆಗಳನ್ನು ಹೊಂದಿದೆ. ಭಾರತದ ಹಣಕಾಸು ವ್ಯವಸ್ಥೆಯಲ್ಲಿ ಬ್ಯಾಂಕು ಪ್ರಮುಖ ಪಾತ್ರವಹಿಸುತ್ತಿದೆ. ಈ ಬ್ಯಾಂಕುಗಳು ಹಲವಾರು ಸೌಲಭ್ಯಗಳನ್ನು ಮತ್ತು ಅವಕಾಶಗಳನ್ನು ತನ್ನ ಗ್ರಾಹಕರಿಗೆ ನೀಡುತ್ತಿದೆ. ಅಲ್ಲದೆ ಬ್ಯಾಂಕ್ ಹೂಡಿಕೆ ಮತ್ತು ವಿಮಾ ಉತ್ಪನ್ನಗಳನ್ನು ಒದಗಿಸುತ್ತಿದೆ. ಬ್ಯಾಂಕುಗಳನ್ನು ಸ್ಥಾಪಿಸುವ ಮೊದಲು ಆರ್ಥಿಕ ಚಟುವಟಿಕೆಗಳು ಲೇವಾದೇವಿದಾರರಿಗೆ ಮತ್ತು ವ್ಯಕ್ತಿಗಳಿಂದ ನಿರ್ವಹಿಸಲ್ಪಡುತ್ತಿದ್ದವು. ಆ ಸಂದರ್ಭದಲ್ಲಿ ಬಡ್ಡಿದರಗಳು ಅಧಿಕವಾಗಿದ್ದವು ಮತ್ತು ಸಾರ್ವಜನಿಕ ಉಳಿತಾಯ ಮತ್ತು ಸಾಲಕ್ಕೆ ಸಂಬಂಧಿಸಿದಂತೆ ಯಾವುದೇ ರೀತಿಯ ಏಕರೂಪತೆ ಮತ್ತು ಭದ್ರತೆ ಇರಲಿಲ್ಲ. ಆದುದರಿಂದ ಈ ರೀತಿಯ ಸಮಸ್ಯೆಗಳನ್ನು ಹೋಗಲಾಡಿಸಲು ಯೋಜಿತವಾದ ಬ್ಯಾಂಕಿಗ್ ಕ್ಷೇತ್ರವನ್ನು ಸ್ಥಾಪಿಸಲಾಯಿತು ಮತ್ತು ಈ ಸಂಸ್ಥೆಗಳು ಸರಕಾರದ ನಿಯಂತ್ರಣದಲ್ಲಿ ನಡೆಸಲ್ಪಟ್ಟಿತ್ತು.

ಭಾರತೀಯ ಬ್ಯಾಂಕಿಗನ್ನು ವಿವಿಧ ಘಟಕಗಳನ್ನಾಗಿ ವಿಂಗಡಿಸಲಾಗಿದೆ. ಅದರಲ್ಲಿ ಸಹಕಾರಿ ಬ್ಯಾಂಕ್ ಒಂದು ಘಟಕವಾಗಿದೆ. ಸಹಕಾರಿ ಬ್ಯಾಂಕುಗಳು ಠೇವಣಿಗಳನ್ನು ತೆಗೆದುಕೊಳ್ಳುವುದರ ಜೊತೆಗೆ ಪ್ರಪಂಚದ ವಿವಿಧ ಭಾಗಗಳಲ್ಲಿ ಜನರಿಗೆ ವಿವಿಧ ರೀತಿಯ ಸಾಲಗಳನ್ನು ನೀಡಿದೆ. ಭಾರತದಲ್ಲಿ ಸಹಕಾರಿ ಬ್ಯಾಂಕ್ ಅಸ್ತಿತ್ವಕ್ಕೆ ಒಂದು ಸುಮಾರು ೧೦೭ ವರುಷಗಳೇ ಸಂದಿವೆ. ಸಹಕಾರಿ ಬ್ಯಾಂಕ್‌ಗಳು ಭಾರತದ ಆರ್ಥಿಕ ವ್ಯವಸ್ಥೆಯಲ್ಲಿ ಬಹುಮುಖ್ಯ ಪಾತ್ರವನ್ನು ವಹಿಸಿದೆ.

ಪ್ರಸ್ತುತ ಅಧ್ಯಾಯದಲ್ಲಿ ಕೃಷಿ ಸಹಕಾರ ಬ್ಯಾಂಕುಗಳು ಕೃಷಿ ವಿಧಾನ ಮತ್ತು ವ್ಯವಸ್ಥೆಯಲ್ಲಿ ಅಂದರೆ ಕೃಷಿಯ ಅಭಿವೃದ್ಧಿಯಲ್ಲಿ ಬೀರಿರುವ ಪರಣಾಮಗಳ ಬಗ್ಗೆ ಪರಾಮರ್ಶಿಸಲಾಗಿದೆ. ಈ ಅಧ್ಯಯನಕ್ಕೆ ಮಂಗಳೂರು ತಾಲೂಕಿನ ಬಜ್ಪೆ ವ್ಯವಸಾಯ ಸಹಕಾರಿ ಬ್ಯಾಂಕ್ ಮತ್ತು ಕಿನ್ನಿಗೋಳಿ ವ್ಯವಸಾಯ ಸೇವಾ ಸಹಕಾರಿ ಬ್ಯಾಂಕ್ ಎಂಬ ೨ ಬ್ಯಾಂಕುಗಳನ್ನು ಆಯ್ದುಕೊಳ್ಳಲಾಗಿದೆ ಮತ್ತು ಇವುಗಳ ಸಂಘಟನಾತ್ಮಕ ಬೆಳವಣಿಗೆ, ಸಾಲ ನೀಡಿಕೆ ಮತ್ತು ಮರುಪಾವತಿ, ದುಡಿಯುವ ಬಂಡವಾಳ, ಲಾಭ ಮತ್ತು ಲಾಭಾಂಶಗಳ ಬಗ್ಗೆ ವಿವರವಾಗಿ ವಿಶ್ಲೇಷಿಸಲಾಗಿದೆ.

### ೩.೧ ಬಜಪೆ ವ್ಯವಸಾಯ ಸಹಕಾರಿ ಬ್ಯಾಂಕ್‌ನ ಸಂಕ್ಷಿಪ್ತ ಇತಿಹಾಸ

ಒಂದು ಸಣ್ಣ ಸಹಕಾರಿ ಸಂಸ್ಥೆಯಾಗಿ ಪ್ರಾರಂಭಗೊಂಡ ಬಜಪೆ ವ್ಯವಸಾಯ ಸಹಕಾರಿ ಬ್ಯಾಂಕು ಇಂದು ಸುಸಜ್ಜಿತ ಕಟ್ಟಡದೊಂದಿಗೆ ಎಲ್ಲಾ ಸೌಲಭ್ಯಗಳನ್ನು ಅಳವಡಿಸಿಕೊಂಡಿರುವ ಅಪರೂಪದ ಸಹಕಾರಿ ಬ್ಯಾಂಕು ಎನ್ನುವ ಕೀರ್ತಿಗೆ ಪಾತ್ರವಾಗಿದೆ. ಪಾಲು ಬಂಡವಾಳವಾಗಲಿ, ಠೇವಣಾತಿಯಾಗಲಿ, ಸಾಲ ನೀಡುವುದಾಗಲಿ, ಸಾಲ ವಸೂತಿಯಾಗಲಿ ಪ್ರತಿಯೊಂದರಲ್ಲಿಯೂ ವಿಶಿಷ್ಟತೆಯನ್ನು ಹೊಂದಿದ ಸಹಕಾರಿ ಬ್ಯಾಂಕು ಇದಾಗಿದೆ. ೧೯೫೬ನೇ ಇಸವಿಯಲ್ಲಿ ದಿ|ಡಾ|ಬಿ. ಭಾಸ್ಕರ ರಾಯರ ಅಧ್ಯಕ್ಷತೆಯಲ್ಲಿ ಕೇವಲ ೩ ಸಿಬ್ಬಂದಿಗಳಿಂದ, ೨೦೦ ಸದಸ್ಯರ ೨೦೦೦ ರೂಪಾಯಿ ಪಾಲು ಹಣ ಮತ್ತು ಸುಮಾರು ೨೫,೦೦೦ ರೂಪಾಯಿ ಠೇವಣಿಯಿಂದ ಪ್ರಾರಂಭಗೊಂಡ ಈ ಸಹಕಾರಿ ಬ್ಯಾಂಕು ಇಂದು ಹಲವಾರು ವಿನೂತನ ಯೋಜನೆಗಳ ಮೂಲಕ ತನ್ನದೇ ಛಾಪನ್ನು ಸಹಕಾರಿ ಕ್ಷೇತ್ರದಲ್ಲಿ ಮೂಡಿಸಿದೆ. ಪ್ರಸ್ತುತ ಈ ಬ್ಯಾಂಕಿನಲ್ಲಿ ಸದಸ್ಯರ ಸಂಖ್ಯೆ ೬೭೦೦ಕ್ಕೂ ಹೆಚ್ಚಿದ್ದು ಸುಮಾರು ೭ ಕೋಟಿ ೯೭ ಲಕ್ಷದಷ್ಟು ಪಾಲು ಹಣ ಅಲ್ಲದೇ ೭೫ ಕೋಟಿ ೨೯ ಲಕ್ಷದಷ್ಟು ಠೇವಣಿ ಹೊಂದಿರುವುದು ಈ ಬ್ಯಾಂಕಿನ ಪ್ರಗತಿಯ ದ್ಯೋತಕವಾಗಿದೆ. ಇದಲ್ಲದೆ ಸದಸ್ಯರ ಹೊರಬಾಕಿ ಸಾಲ ೪೮ ಕೋಟಿ ರೂಪಾಯಿಗೂ ಮಿಗಿಲಾಗಿರುತ್ತದೆ. ಇದೆಲ್ಲದರ ಫಲಶ್ರುತಿ ಎನ್ನುವಂತೆ ಬ್ಯಾಂಕು ೨.ಕೋಟಿಗೂ ಹೆಚ್ಚಿನ ಲಾಭಾಂಶದಲ್ಲಿ ಮುನ್ನಡೆಯುತ್ತಿದೆ. ಅಲ್ಲದೆ ಕಳೆದ ೧೮ ವರ್ಷಗಳಿಂದಲೂ ಶೇ. ೧೫% ಲಾಭಾಂಶವನ್ನು ಸದಸ್ಯರಿಗೆ ನೀಡುತ್ತಿದೆ.

ಮಂಗಳೂರು ತಾಲೂಕಿನ ಬಜ್ಪೆ, ಎಕ್ಕಾರು, ದೇಲಂತಬೆಟ್ಟು, ಪೆರ್ಮುದೆ, ಪಡು ಪೆರಾರ, ಕೆಂಜಾರು, ಆದ್ಯಪಾಡಿ, ಮಳವೂರು, ತೋಕೂರು, ಬಾಳ, ಕಳವಾರು ಮುಂತಾದ ೧೪ ಗ್ರಾಮಗಳನ್ನು ಹೊಂದಿದ್ದು ವಿಶೇಷವಿತ್ತವಲಯದಿಂದಾಗಿ ಹಲವು ಗ್ರಾಮಗಳನ್ನು ಕಳಕೊಂಡು ಈಗ ೭ ಗ್ರಾಮಗಳನ್ನೊಳಗೊಂಡಿದೆ.

ಬ್ಯಾಂಕಿನ ಕೇಂದ್ರ ಕಛೇರಿ ಬಜ್ಪೆಯಲ್ಲಿದ್ದು, ಜೋಕಟ್ಟೆ, ಎಕ್ಕಾರು, ಮತ್ತು ಕಿನ್ನಿಕಂಬಳದಲ್ಲಿ ಶಾಖೆಗಳನ್ನು ಹೊಂದಿರುತ್ತದೆ. ಬ್ಯಾಂಕಿನಲ್ಲಿ ೮ ಜನ ಚುನಾಯಿತ ನಿರ್ದೇಶಕರುಗಳು ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ಪ್ರತಿನಿಧಿ ಹಾಗೂ ೨ ಜನ ಸಹಕಾರದಿಂದ ನಾಮ ನಿರ್ದೇಶನಗೊಂಡ ನಿರ್ದೇಶಕರುಗಳಿರುತ್ತಾರೆ. ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರು ಕಾರ್ಯ ನಿರ್ವಾಹಕ ನಿರ್ದೇಶಕರಾಗಿರುತ್ತಾರೆ. ಪ್ರಸ್ತುತ ಶ್ರೀ ರತ್ನಾಕರ ಶೆಟ್ಟಿ ಇವರು ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಬ್ಯಾಂಕಿನ ವ್ಯವಹಾರವನ್ನು ಕೇಂದ್ರ ಕಛೇರಿ ಹಾಗೂ ಶಾಖೆಗಳಲ್ಲಿಯೂ ಸಂಪೂರ್ಣ ಗಣಕಯಂತ್ರಗಳ ಮೂಲಕವೇ ಮಾಡಲಾಗುತ್ತಿದೆ. ಬ್ಯಾಂಕಿನ ಕಾರ್ಯಕ್ಷೇತ್ರದ ಕೃಷಿಕರಿಗೆ ಶೇ ೪ರ ಬಡ್ಡಿಯಲ್ಲಿ ಸಾಲ ನೀಡುವುದು ಮಾತ್ರವಲ್ಲದೆ, ಇತರ ವಾಣಿಜ್ಯ ಬ್ಯಾಂಕುಗಳು ನೀಡಿರುವ ಎಲ್ಲಾ ವಿಧದ ಸಾಲಗಳನ್ನು ಸದಸ್ಯರಿಗೆ ನೀಡಲಾಗುತ್ತದೆ. ಚಿನ್ನಾಭರಣ ಅಡವಿನ ಮೇಲೆ ಕಡಿಮೆ ಬಡ್ಡಿ ಮತ್ತು ಸರಳ ರೀತಿಯಲ್ಲಿ ಸಾಲ ನೀಡುತ್ತಿದ್ದು, ಜನರು ಇದರ ಪ್ರಯೋಜನವನ್ನು ಪಡಕೊಳ್ಳುತ್ತಿದ್ದಾರೆ. ಠೇವಣಾತಿಗಳಿಗೆ ಇತರ ಯಾವುದೇ ವಾಣಿಜ್ಯ ಬ್ಯಾಂಕುಗಳು ನೀಡುವ ಬಡ್ಡಿದರಕ್ಕಿಂತ ಹೆಚ್ಚಿನ ಬಡ್ಡಿದರವನ್ನು ನೀಡುತ್ತಿದ್ದು ಗ್ರಾಮೀಣ ಜನರಿಗೆ ಹೆಚ್ಚಿನ ಪ್ರಯೋಜನವಾಗಿದೆ. ಬ್ಯಾಂಕಿನ ಠೇವಣಾತಿಗಳನ್ನು ಠೇವಣಿ ಖಾತರಿ ನಿಧಿಗೆ ಒಳಪಡಿಸಲಾಗಿದೆ. ಅಲ್ಲದೆ ಸರ್ಕಾರದ ಯೋಜನೆಗಳಿಂದ ಸಾರ್ವಜನಿಕ ಪಡಿತರ ಸಾಮಾಗ್ರಿಗಳ ವಿತರಣಾ ವ್ಯವಸ್ಥೆ, ರೈತರಿಗೆ ಬೇಕಾಗುವ ಎಲ್ಲಾ ತರದ ಕೃಷಿ ಉಪಕರಣಗಳು, ರಸಗೊಬ್ಬರಗಳು, ಕೀಟನಾಶಕಗಳು ಮತ್ತು ಭತ್ತದ ಬೀಜಗಳನ್ನು ಮತ್ತು ಅಡುಗೆ ಅನಿಲವನ್ನು ಒದಗಿಸಲಾಗುತ್ತಿದೆ.

ಕರ್ನಾಟಕ ಸರಕಾರದ ಬಡ್ಡಿ ಮನ್ನಾ ಯೋಜನೆಯನ್ವಯ ಮತ್ತು ಶೇ ೬% ಬಡ್ಡಿ ಯೋಜನೆಯನ್ವಯ ಕೃಷಿ ಸಾಲ ವಸೂಲಾತಿ ಶೇ. ೧೦೦% ಆಗಿರುತ್ತದೆ. ಪ್ರಸ್ತುತ ಬ್ಯಾಂಕು ಶೇ ೩% ಬಡ್ಡಿದರದಲ್ಲಿ ಕೃಷಿ ಸಾಲವನ್ನು ನೀಡುತ್ತಿದ್ದು, ಬೆಳೆಸಾಲ ಶೇ೧% ರ ಬಡ್ಡಿದರದಲ್ಲಿ ನೀಡುತ್ತಿದೆ. ಗ್ರಾಮೀಣ ಪ್ರದೇಶದ ಎಲ್ಲಾ ರೈತರುಗಳು ಈ ಪ್ರಯೋಜನಗಳನ್ನು ಪಡೆಯುತ್ತಿದ್ದಾರೆ ಮತ್ತು ತಮ್ಮ ಇಳುವರಿಯನ್ನು ಹೆಚ್ಚಿಸಿಕೊಂಡಿರುತ್ತಾರೆ. ಅಲ್ಲದೆ ಬ್ಯಾಂಕಿನ ಕಾರ್ಯ ಕ್ಷೇತ್ರದಲ್ಲಿ ಒಟ್ಟು ೩೩೦ ಸ್ವಸಹಾಯ ಗುಂಪುಗಳಲ್ಲಿ ಹೆಚ್ಚಾಗಿ ಮಹಿಳೆಯರೇ ಅಲ್ಲಿನ ಸದಸ್ಯರಾಗಿರುತ್ತಾರೆ. ಈ ಸ್ವಸಹಾಯ ಗುಂಪುಗಳಿಗೆ ನೀಡಲ್ಪಟ್ಟ ಸಾಲವು ಸರಿಯಾದ ಸಮಯದಲ್ಲಿ ಮರುಪಾವತಿಯಾಗಿರುತ್ತದೆ. ಬ್ಯಾಂಕು ಪಶುಸಂಗೋಪನೆ ಗೃಹ ಕೈಗಾರಿಕೆ, ಕೋಳಿ ಸಾಕಣೆ ಮತ್ತು ಇತರ ಉದ್ದೇಶಗಳಿಗೆ ಕಡಿಮೆ ಬಡ್ಡಿಯಲ್ಲಿ ಸಾಲವನ್ನು ನೀಡುತ್ತದೆ. ಅಲ್ಲದೆ ನವೋದಯ ಗ್ರಾಮ ವಿಕಾಸ ಚಾರಿಟೇಬಲ್ ಟ್ರಸ್ಟ್ ಇದರ ವತಿಯಿಂದ ಎಲ್ಲಾ ಗುಂಪಿನ ಸದಸ್ಯರಿಗೂ ಆರೋಗ್ಯ ವಿಮೆ ಸೌಲಭ್ಯವನ್ನು ಬ್ಯಾಂಕು ಒದಗಿಸಿರುತ್ತದೆ.

**೩.೧.೧ ಬ್ಯಾಂಕಿನ ಇತರ ಚಟುವಟಿಕೆಗಳು**

- ಗ್ರಾಹಕರಿಗೆ ಅನುಕೂಲವಾಗುವಂತೆ ಭದ್ರತಾಕೋಶಗಳ ವ್ಯವಸ್ಥೆಯನ್ನು ಅಳವಡಿಸುವುದು.
- ರೈತರಿಗೆ ಹೆಚ್ಚಿನ ಮಾಹಿತಿ ಒದಗಿಸಲು ರೈತಕೂಟಗಳನ್ನು ರಚಿಸಲಾಗಿದೆ.

- ರೈತ ಸಾಲಗಳಿಗೆ ಬೆಳೆ ವಿಮೆ ಹಾಗೂ ಕಿಸಾನ್ ಕ್ರೆಡಿಟ್ ಕಾರ್ಡ್‌ದಾರರಿಗೆ ಅಪಘಾತ ವಿಮೆಯನ್ನು ಬ್ಯಾಂಕಿನ ವೆಚ್ಚದಿಂದಲೇ ಅಳವಡಿಸಲಾಗಿದೆ.

- ಬ್ಯಾಂಕಿನ ಕಾರ್ಯ ಕ್ಷೇತ್ರದ ಹೆಚ್ಚಿನ ಗ್ರಾಮಗಳಿಗೆ ಕುಡಿಯುವ ನೀರಿನ ವ್ಯವಸ್ಥೆಯ ಸೌಲಭ್ಯ ದೊರಕಲು ಅನುಕೂಲವಾಗುವಂತೆ ರಾಜೀವಗಾಂಧಿ ಕುಡಿಯುವ ನೀರಿನ ಯೋಜನೆಗೆ ೫ ಲಕ್ಷ ರೂಪಾಯಿ ದೇಣಿಗೆ ನೀಡಲಾಗುತ್ತಿದೆ.

- ಕರ್ನಾಟಕ ಸರ್ಕಾರದ ಜನಪ್ರಿಯ ಯೋಜನೆಯಾದ ಯಶಸ್ವಿನಿ ರೈತ ಆರೋಗ್ಯ ವಿಮಾ ಯೋಜನೆಗೆ ಹೆಚ್ಚಿನ ಸದಸ್ಯರನ್ನು ಒಳಪಡಿಸಲಾಗಿದೆ. ಬ್ಯಾಂಕಿನ ಸುಮಾರು ೬೦ ಜನ ಸದಸ್ಯರು ಇದರ ಸದುಪಯೋಗ ಪಡಕೊಂಡಿರುತ್ತಾರೆ.

- ಬ್ಯಾಂಕಿನ ಕಾರ್ಯಕ್ಷೇತ್ರದ ಪ್ರತಿಭಾವಂತ ಬಡ ವಿದ್ಯಾರ್ಥಿಗಳಿಗೆ, ವಿದ್ಯಾರ್ಥಿವೇತನ, ವಿದ್ಯಾ ಸಂಸ್ಥೆಗಳಿಗೆ ದೇಣಿಗೆ, ರ್‍ಯಾಂಕ್ ವಿಜೇತರಿಗೆ ಬಹುಮಾನ ಹಾಗೂ ಇತರ ಸಾರ್ವಜನಿಕ ಸಂಸ್ಥೆಗಳಿಗೆ ಸಹಾಯ ಧನ ನೀಡುವ ಕಾರ್ಯಕ್ರಮಗಳನ್ನು ಪ್ರತಿ ವರ್ಷ ಕೈಗೊಳ್ಳಲಾಗುತ್ತಿದೆ.

- ಬ್ಯಾಂಕಿನ ಸ್ವಸಹಾಯ ಗುಂಪುಗಳ ಸದಸ್ಯರಿಗೆ ಹಾಗೂ ಸದಸ್ಯೇತರಿಗೆ ಪ್ರಸಿದ್ಧ ವೈದ್ಯರುಗಳಿಂದ ಉಚಿತ ವೈದ್ಯಕೀಯ ತಪಾಸಣೆಯನ್ನು ಮಾಡಲಾಗುತ್ತದೆ.

- ಬ್ಯಾಂಕಿನ ಸದಸ್ಯರಿಗೆ ಅನುಕೂಲವಾಗುವಂತೆ ಬ್ಯಾಂಕಿನ ಸಭಾಂಗಣವನ್ನು ಮದುವೆ ಮತ್ತು ಇತರ ಸಮಾರಂಭಗಳಿಗೆ ಅತ್ಯಂತ ಕಡಿಮೆ ಬಾಡಿಗೆಯಲ್ಲಿ ನೀಡುತ್ತಿದ್ದು ಸದಸ್ಯರು ಇದರ ಸದುಪಯೋಗ ಪಡೆದುಕೊಳ್ಳುತ್ತಿದ್ದಾರೆ.

**೩.೨ ಕಿನ್ನಿಗೋಳಿ ವ್ಯವಸಾಯ ಸಹಕಾರಿ ಬ್ಯಾಂಕ್‌ನ ಸಂಕ್ಷಿಪ್ತ ಇತಿಹಾಸ**

ಈ ಸಂಸ್ಥೆಯು ೧೯೫೫ರಲ್ಲಿ ಮೂಲ್ಕಿ ಹೋಬಳಿಯ ೩೪ ಗ್ರಾಮಗಳ ಕಾರ್ಯವ್ಯಾಪ್ತಿಯಲ್ಲಿ ಕಿನ್ನಿಗೋಳಿ ರೂರಲ್ ಕೋ–ಆಪರೇಟಿವ್ ಎಂಬ ಹೆಸರಿನಿಂದ ಸ್ಥಾಪನೆಯಾಗಿರುತ್ತದೆ. ತದ ನಂತರ ೧೯೭೬ ರ ಸೆಪ್ಟಂಬರ್ ತಿಂಗಳ ೪ನೇ ತಾರೀಕಿಗೆ ಕರ್ನಾಟಕ ಸರಕಾರದ ಆದೇಶದ ಪ್ರಕಾರ ಸ್ಥಳೀಯ ೩ ಕೃಷಿ ಪತ್ತಿನ ಸಹಕಾರ ಸಂಘಗಳ ವಿಲೀನದೊಂದಿಗೆ ಕಿನ್ನಿಗೋಳಿ ವ್ಯವಸಾಯ ಸೇವಾ ಸಹಕಾರಿ ಸಂಘ ನಿಯಮಿತ ಎಂಬ ಹೆಸರಿನಿಂದ ಮುಂದುವರಿದು ೨೯/೦೧/೧೯೯೭ ರಿಂದ ಸರಕಾರದ ಆದೇಶದ ಮೇರೆಗೆ ಕಿನ್ನಿಗೋಳಿ ವ್ಯವಸಾಯ ಸೇವಾ

ಸಹಕಾರಿ ಬ್ಯಾಂಕು ಎಂಬ ಹೆಸರಿನಿಂದ ಕಾರ್ಯ ನಿರ್ವಹಿಸುತ್ತಿದೆ. ದಿ। ಡಾ॥ ಐ.ವಿ. ಅಸ್ರಣ್ಣ ನವರು ಈ ಬ್ಯಾಂಕಿನ ಸ್ಥಾಪಕ ಅಧ್ಯಕ್ಷರಾಗಿದ್ದರು. ಪ್ರಸ್ತುತ ಈ ಬ್ಯಾಂಕಿನಲ್ಲಿ ಸದಸ್ಯರ ಸಂಖ್ಯೆ ೫೭೦೦ಕ್ಕೂ ಹೆಚ್ಚಿದ್ದು ಸುಮಾರು ೧ ಕೋಟಿ ಎಂಟು ಲಕ್ಷಕ್ಕೂ ಹೆಚ್ಚು ಪಾಲು ಹಣ ಅಲ್ಲದೆ ೧೯ ಕೋಟಿ ೧೧ ಲಕ್ಷದಷ್ಟು ಠೇವಣಾತಿಯನ್ನು ಹೊಂದಿರುತ್ತದೆ. ಅಲ್ಲದೆ ಬ್ಯಾಂಕು ೨೨ ಲಕ್ಷಕ್ಕೂ ಹೆಚ್ಚಿನ ಲಾಭಾಂಶದಲ್ಲಿ ಮುನ್ನಡೆಯುತ್ತಿದೆ. ಗ್ರಾಮೀಣ ಪ್ರದೇಶದಲ್ಲಿ ಅತ್ಯಂತ ಮುಂದುವರಿದ ಬ್ಯಾಂಕು ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಕಿನ್ನಿಗೋಳಿ ಪ್ರದೇಶದಲ್ಲಿ ಸುಮಾರು ೧೨ ರಾಷ್ಟ್ರೀಕೃತ ಬ್ಯಾಂಕುಗಳ ಜೊತೆ ಉತ್ತಮ ರೀತಿಯಲ್ಲಿ ಪೈಪೋಟಿ ನಡೆಸಿ ಸಹಕಾರ ತತ್ವದಡಿಯಲ್ಲಿ ಗ್ರಾಹಕರಿಗೆ ತನ್ನದೇ ಆದ ರೀತಿಯಲ್ಲಿ ಎಲ್ಲಾ ವಿಧದ ಬ್ಯಾಂಕಿಗ್ ಸೌಲಭ್ಯಗಳನ್ನು ನೀಡುತ್ತಾ ಪ್ರಗತಿ ಪಥದಲ್ಲಿ ಮುನ್ನಡೆಯುತ್ತಿದೆ.

ಬ್ಯಾಂಕಿನ ಕಾರ್ಯಕ್ಷೇತ್ರವು ತಾಳಿಪಾಡಿ, ಮೆನ್ನಬೆಟ್ಟು, ಐಕಳ, ಏಳಿಂಜೆ, ಕೆಮ್ರಾಲ್, ನಡುಗೋಡು, ಕೊಂಡೇಮೂಲ, ಕಿಲೆಂಜೂರು ಗ್ರಾಮಗಳಿಗೆ ಸೀಮಿತವಾಗಿರುತ್ತದೆ. ಬ್ಯಾಂಕು ತನ್ನದೇ ಆದ ಸುಸಜ್ಜಿತ ಕಟ್ಟಡವನ್ನು ಹೊಂದಿದ್ದು ಕೇಂದ್ರಕಛೇರಿ ಕಿನ್ನಿಗೋಳಿಯಲ್ಲಿದ್ದು ತಾಳಿಪಾಡಿ ಗ್ರಾಮದ ದಾಮಾಸ್ ಕಟ್ಟೆಯಲ್ಲಿ ಒಂದು ಶಾಖೆಯನ್ನು ಹೊಂದಿದೆ ಅಲ್ಲದೆ ಸದ್ಯದಲ್ಲೇ ಪಕ್ಷಿಕೆರೆಯಲ್ಲಿ ಇನ್ನೊಂದು ಶಾಖೆಯನ್ನು ತೆರೆಯಲು ಯೋಜನೆಗಳು ರೂಪಿತವಾಗಿದೆ.

ಬ್ಯಾಂಕಿನಲ್ಲಿ ೮ ಜನ ಚುನಾಯಿತ ನಿರ್ದೇಶಕರುಗಳಿದ್ದು ದಕ್ಷಿಣ ಕನ್ನಡ ಜಿಲ್ಲೆಯ ಕೇಂದ್ರ ಸಹಕಾರಿ ಬ್ಯಾಂಕಿನ ಓರ್ವ ಪ್ರತಿನಿಧಿ ಇರುತ್ತಾರೆ. ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರು ಕಾರ್ಯನಿರ್ವಾಹಕ ನಿರ್ದೇಶಕರಾಗಿರುತ್ತಾರೆ. ಪ್ರಸಕ್ತಸಾಲಿನಲ್ಲಿ ಶ್ರೀ ಕೆ. ಲವ ಶೆಟ್ಟಿಯವರು ಬ್ಯಾಂಕಿನ ಅಧ್ಯಕ್ಷರಾಗಿರುತ್ತಾರೆ. ಪ್ರಸ್ತುತ ಶ್ರೀ ಶೇಖರ ಮಾಡರವರು ಜನರಲ್ ಮ್ಯಾನೇಜರ್ ಆಗಿದ್ದು ೧೮ ಮಂದಿ ಸಿಬ್ಬಂಧಿಗಳು ಬ್ಯಾಂಕಿನ ಸರ್ವತೋಮುಖ ಅಭಿವೃದ್ಧಿಗಾಗಿ ದುಡಿಯುತ್ತಿದ್ದಾರೆ.

ಬ್ಯಾಂಕಿನ ಕಾರ್ಯಕ್ಷೇತ್ರದ ಒಳಗಿನ ಕೃಷಿಕರನ್ನು ಸದಸ್ಯರನ್ನಾಗಿಸಿ ಅವರಿಗೆ ಸರಕಾರ ನಿಗದಿಪಡಿಸಿದ ಬಡ್ಡಿದರಲ್ಲಿ ಆರ್ಥಿಕ ನೆರವು ನೀಡಿತ್ತಿದೆ. ಅಲ್ಲದೆ ಕೃಷಿಯೇತರರನ್ನು ಸದಸ್ಯರನ್ನಾಗಿಸಿ ಕಾರ್ಯಕ್ಷೇತ್ರದ ಜನರಿಗೆ ಎಲ್ಲಾ ವಿಧದ ಬ್ಯಾಂಕಿಂಗ್ ಸೇವೆಗಳನ್ನು ಒದಗಿಸುತ್ತಿದೆ. ಅಲ್ಲದೆ ಚಿನ್ನಾಭರಣ ಅಡವಿನ ಮೇಲೆ ಕಡಿಮೆ ಬಡ್ಡಿ ಮತ್ತು ಸರಳ ರೀತಿಯಲ್ಲಿ ಸಾಲ ನೀಡುತ್ತಿದ್ದು, ಜನರು ಇದರ ಪ್ರಯೋಜನಗಳನ್ನು ಪಡೆದುಕೊಳ್ಳುತ್ತಿದ್ದಾರೆ. ಅದಲ್ಲದೆ ಕೃಷಿಕರು ಮತ್ತು ಕೃಷಿಯೇತರರು ನೀಡುವ ಠೇವಣಾತಿಗಳಿಗೆ ಇತರ ಯಾವುದೇ ವಾಣಿಜ್ಯ ಬ್ಯಾಂಕುಗಳು ನೀಡುವ

ಬಡ್ಡಿದರಕ್ಕಿಂತ ಹೆಚ್ಚಿನ ದರದ ಬಡ್ಡಿಯನ್ನು ನೀಡುತ್ತಿದೆ. ಗ್ರಾಹಕರ ಹೆಚ್ಚಿನ ಭದ್ರತೆಗಾಗಿ ಭದ್ರತಾ ಕೋಶಗಳ ಸೌಲಭ್ಯವನ್ನು ಒದಗಿಸುತ್ತಿದೆ. ಅಲ್ಲದೆ ಬ್ಯಾಂಕ್ ಠೇವಣಿ ಖಾತರಿ ಯೋಜನೆಗೆ ಒಳಪಟ್ಟಿದೆ.

**೩.೨.೧ ಬ್ಯಾಂಕಿನ ಇತರ ಚಟುವಟಿಕೆಗಳು**

- ಸರ್ಕಾರದ ಯೋಜನೆಗಳಿಂದ ಸಾರ್ವಜನಿಕ ಪಡಿತರ ಸಾಮಾಗ್ರಿಗಳ ವಿತರಣ ವ್ಯವಸ್ಥೆ, ರೈತರಿಗೆ ಬೇಕಾಗುವ ಎಲ್ಲಾ ತರದ ಕೃಷಿ ಉಪಕರಣಗಳ, ರಸಗೊಬ್ಬರಗಳು, ಕೀಟನಾಶಕಗಳು, ಭತ್ತದ ಬೀಜಗಳನ್ನು ಒದಗಿಸುತ್ತಿದೆ.
- ಗ್ರಾಹಕರಿಗೆ ಅನುಕೂಲವಾಗುವಂತೆ ಭದ್ರತಾ ಕೋಶಗಳನ್ನು ಸೌಲಭ್ಯವನ್ನು ಅಳವಡಿಸಲಾಗಿದೆ.
- ಯಶಸ್ವಿನಿ ಯೋಜನೆಯನ್ನು ಯಶಸ್ವಿಯಾಗಿ ಕಾರ್ಯಾಚರಿಸಿ ಫಲಾನುಭವಿಗಳಿಗೆ ಹೆಚ್ಚಿನ ಸಹಾಯ ದೊರಕುವಂತೆ ಮಾಡಿದೆ.
- ಬ್ಯಾಂಕಿನ ಕಾರ್ಯಕ್ಷೇತ್ರದ ಶಾಲೆಗಳಲ್ಲಿರುವ ಬಡ ವಿದ್ಯಾರ್ಥಿಗಳಿಗೆ ಉಚಿತ ಪುಸ್ತಕ ವಿತರಣೆ ಮಾಡಲಾಗುತ್ತಿದೆ.
- ಬ್ಯಾಂಕಿಸ ಸದಸ್ಯರಿಗೆ ಅನುಕೂಲವಾಗುವಂತೆ ಬ್ಯಾಂಕಿನ ಸಭಾಂಗಣವನ್ನು ಸಮಾರಂಭಗಳಿಗೆ ಅತ್ಯಂತ ಕಡಿಮೆ ಬಾಡಿಗೆಯಲ್ಲಿ ನೀಡುತ್ತಿದ್ದು ಸದಸ್ಯರು ಇದರ ಸದುಪಯೋಗ ಪಡೆದುಕೊಳ್ಳುತ್ತಿದ್ದಾರೆ.
- ಪ್ರಸ್ತುತ ಬ್ಯಾಂಕು ಶೇ.೩ ಬಡ್ಡಿ ದರದಲ್ಲಿ ಕೃಷಿ ಸಾಲವನ್ನು ನೀಡುತ್ತಿದೆ. ಗ್ರಾಮೀಣ ಪ್ರದೇಶದ ಹೆಚ್ಚಿನ ರೈತರು ಇದರ ಸದುಪಯೋಗವನ್ನು ಪಡೆದುಕೊಳ್ಳುತ್ತಿದ್ದಾರೆ. ಅಲ್ಲದೆ ಸರ್ಕಾರಿ ಆದೇಶದಂತೆ ಕೃಷಿಕರಿಗೆ ಶೇ ೧ರ ಬಡ್ಡಿದರದಲ್ಲಿ ಮಂಗಳ ಕಿಸಾನ್ ಸಾಲ ನೀಡಲಾಗುತ್ತಿದೆ. ಇವೆಲ್ಲವುದರ ಜೊತೆಗೆ ಬ್ಯಾಂಕಿನ ಕಾರ್ಯಕ್ಷೇತ್ರದಲ್ಲಿ ಸುಮಾರು ೧೬೪ ಸ್ವಸಹಾಯ ಗುಂಪುಗಳ ರಚನೆಯಾಗಿದ್ದು ಪ್ರಸಕ್ತ ಸಾಲಿನಲ್ಲಿ ಸುಮಾರು ೩೬ ಲಕ್ಷದಷ್ಟು ಸಾಲ ವಿತರಣೆಯನ್ನು ಮಾಡಲಾಗಿದೆ. ಈ ಸ್ವಸಹಾಯ ಗುಂಪುಗಳಿಗೆ ನೀಡಲ್ಪಟ್ಟ ಸಾಲವು ಸರಿಯಾದ ಸಮಯದಲ್ಲಿ ಮರು ಪಾವತಿಯಾಗಿರುತ್ತದೆ.

## ೩.೩ ಬ್ಯಾಂಕುಗಳ ಕಾರ್ಯ ನಿರ್ವಹಣೆಯ ವಿಶ್ಲೇಷಣೆ

ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬ್ಯಾಂಕಿಂಗ್ ಕ್ಷೇತ್ರದ ಪ್ರಗತಿ ದೇಶಕ್ಕೇ ಮಾದರಿಯಾಗಿದೆ ಮಂಗಳೂರು ತಾಲೂಕಿನ ಸಹಕಾರಿ ಕ್ಷೇತ್ರದ ಪ್ರಗತಿಯು ಅಷ್ಟೇ ಉಲ್ಲೇಖನೀಯವಾಗಿದೆ. ಈ ತಾಲೂಕಿನ ನಗರ ಹಾಗೂ ಗ್ರಾಮೀಣ ಅರ್ಥ ವ್ಯವಸ್ಥೆಯಲ್ಲಿ ಹಾಗು ಸಾಮಾಜಿಕ ಆರ್ಥಿಕ ಪರಿವರ್ತನೆಯಲ್ಲಿ ಸಹಕಾರಿ ಬ್ಯಾಂಕುಗಳು ನಿರಂತರವಾಗಿ ಸೇವೆ ಸಲ್ಲಿಸುತ್ತಾ ಬಂದಿವೆ. ಈ ಪ್ರದೇಶದ ಸಹಕಾರ ಕ್ಷೇತ್ರದ ಪ್ರಗತಿಯ ಕುರಿತಾದ ಅಧ್ಯಯನಗಳು ನಡೆದಿವೆ.

ತಾಲೂಕಿನ ಸಹಕಾರ ಕ್ಷೇತ್ರದ ಅಧ್ಯಯನದ ಆಳ ವಿಸ್ತಾರಗಳು ಬಹಳಷ್ಟಿದ್ದರೂ ಅವೆಲ್ಲವುಗಳನ್ನೂ ಒಂದೇ ಅಧ್ಯಯನದಲ್ಲಿ ಅಳವಡಿಸಿಕೊಳ್ಳುವುದು ಕಷ್ಟ. ಆ ಕಾರಣಕ್ಕಾಗಿ ಈ ರೀತಿಯದೊಂದು ಸೂಕ್ಷ್ಮ ಅಧ್ಯಯನ ತನ್ನದೇ ವೈಶಿಷ್ಟ್ಯವನ್ನು ಹೊಂದಿರುತ್ತದೆ.

ಪ್ರಸಕ್ತ ಆಯ್ದುಕೊಂಡ ಅಧ್ಯಯನವು ಅವಧಿಯ ದೃಷ್ಟಿಯಿಂದಲೂ ಕ್ಷೇತ್ರ ಕಾರ್ಯದ ವ್ಯಾಪ್ತಿಯ ದೃಷ್ಟಿಯಿಂದಲೂ ಬಹಳ ಸೀಮಿತವಾಗಿವೆ. ಆದರೂ ಸಹಕಾರಿ ಕ್ಷೇತ್ರದ ಮಹತ್ವವನ್ನೂ ಅದರ ಇರುವಿಕೆಯಿಂದ ಜನರಿಗಾಗುವ ಅನುಕೂಲವನ್ನೂ ಗಮನದಲ್ಲಿರಿಸಿಕೊಂಡು ಈ ಅಧ್ಯಯನದ ಪ್ರಯತ್ನವನ್ನು ಮಾಡಲಾಗಿದೆ.

ಸಹಕಾರಿ ಕ್ಷೇತ್ರವು ಸಮಾಜದ ಎಲ್ಲಾ ವರ್ಗದ ಜನರಿಗೂ ಅತ್ಯಾವಶ್ಯವಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಪ್ರಜಾಪ್ರಭುತ್ವದ ತಳಹದಿಯಲ್ಲಿ ಸಹಕಾರಿ ಸಂಘ, ಬ್ಯಾಂಕ್ ಹಾಗೂ ಸಂಸ್ಥೆಗಳು ನಿರ್ಮಾಣಗೊಂಡು ಗ್ರಾಮಾಭಿವೃದ್ಧಿಗೆ ಹೆಚ್ಚು ಉತ್ತೇಜನ ನೀಡುತ್ತಿವೆ. ಸಮಾನತೆ,ಸಹಬಾಳ್ವೆಯ ಉದಾತ್ತ ಧ್ಯೇಯವನ್ನಿಟ್ಟುಕೊಂಡ ಸಹಕಾರಿ ಬ್ಯಾಂಕು ಗ್ರಾಮ ಮಟ್ಟದಿಂದ ಹಿಡಿದು ರಾಷ್ಟ್ರಮಟ್ಟದವರೆಗೆ ತನ್ನ ಪ್ರತಿಷ್ಠೆಯ ಮುದ್ರೆಯೊತ್ತಿ ರಾಷ್ಟ್ರಾದ್ಯಾಂತ ಒಂದು ಕ್ರಾಂತಿಯನ್ನು ಸೃಷ್ಟಿ ಮಾಡಿದೆ.

### ೩.೩.೧ ಸಂಘಟನಾತ್ಮಕ ಮತ್ತು ವಿತ್ತೀಯ ವಿನ್ಯಾಸ

ಸಹಕಾರ ರಂಗದ ಸಂಸ್ಥೆಗಳ ಧ್ಯೇಯ ಖಾಸಗಿ ಕ್ಷೇತ್ರದಂತೆ ಲಾಭವೇ ಗುರಿಯಿಲ್ಲದಿದ್ದರೂ ಇಂದಿನ ಸ್ಪರ್ಧಾತ್ಮಕ ಆರ್ಥಿಕ ಜಾಗತೀಕರಣ ವ್ಯವಸ್ಥೆಯಲ್ಲಿ ವಾಣಿಜ್ಯ ಮನೋಭಾವ ಬೆಳಿಸಿಕೊಳ್ಳುವುದು ಅತೀ ಅಗತ್ಯ. ಸಮಾಜದ ಎಲ್ಲಾ ವರ್ಗದ ಜನರ ನೋವು ನಲಿವುಗಳಿಗೆ ಸ್ಪಂದಿಸುವ ಹೊಣೆಗಾರಿಕೆ ಈ ಕ್ಷೇತ್ರದ ಮೇಲಿದೆ. ಸದಸ್ಯರ ಹಿತವನ್ನು ರಕ್ಷಿಸುವುದು ಮಾತ್ರವಲ್ಲದೆ ಸಂಸ್ಥೆಯನ್ನು ಪ್ರಗತಿಯತ್ತ ಮುನ್ನಡೆಸುವ ಜವಾಬ್ದಾರಿಯು ಸಹಕಾರಿ ಕ್ಷೇತ್ರಕ್ಕಿದೆ. ಕೃಷಿ ಹಾಗೂ ಇತರ ಕ್ಷೇತ್ರಗಳಿಗೆ ನೀಡುವ ಸಾಲವು ಸರಿಯಾದ ವ್ಯವಸ್ಥಿತವಾದ ಸಂಸ್ಥೆಗಳ ಮೂಲಕ

ವಿತರಣೆಯಾದರೆ ಸಾಲದ ಉದ್ದೇಶ ಸಾರ್ಥಕವಾಗುತ್ತದೆ ಎಂದು ತಿಳಿದು ಈ ಕ್ಷೇತ್ರವನ್ನು ಆಯ್ಕೆ ಮಾಡಲಾಗಿದೆ. ಇಂತಹ ಸಹಕಾರದ ಆಡಳಿತವನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಸಂಘಟನಾತ್ಮಕ ಮತ್ತು ವಿತ್ತೀಯ ವಿನ್ಯಾಸವು ಉತ್ತಮವಾಗಿರಬೇಕು. ಈ ನಿಟ್ಟಿನಲ್ಲಿ ಬ್ಯಾಂಕಿನ ಪಾಲು ಬಂಡವಾಳ, ಸದಸ್ಯರ ಸಂಖ್ಯೆ, ಠೇವಣಾತಿ ಮತ್ತು ದುಡಿಯುವ ಬಂಡವಾಳದ ವಿವರವನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

**೩.೩.೧.ಅ ಪಾಲು ಬಂಡವಾಳ**

ಯಾವುದೇ ಒಂದು ಸಂಸ್ಥೆ/ ಕಂಪನಿಯ ಷೇರುಗಳ ಒಟ್ಟು ಮೌಲ್ಯವನ್ನು ಬಂಡವಾಳ ಎಂದು ಕರೆಯಲಾಗುತ್ತದೆ. ಬ್ಯಾಂಕಿನ ಬೆಳವಣಿಗಯಲ್ಲಿ ಪಾಲು ಬಂಡವಾಳವು ಮಹತ್ವದ್ದಾಗಿದೆ. ಸಹಕಾರಿ ಬ್ಯಾಂಕು ಸಾಕಷ್ಟು ಪ್ರಮಾಣದಲ್ಲಿ ಬಂಡವಾಳವನ್ನು ತೊಡಗಿಸುವುದರಿಂದ ಗ್ರಾಮೀಣ ಪ್ರದೇಶದ ಆರ್ಥಿಕಾಭಿವೃದ್ಧಿಯನ್ನು ಸಾಧಿಸಬಹುದಾಗಿದೆ.


ಕೋಷ್ಟಕ ೩.೩.೧.ಅ ಪಾಲು ಬಂಡವಾಳದ ವಿವರ

(ರೂ. ಲಕ್ಷಗಳಲ್ಲಿ)

| ವರ್ಷ | ಬಜಪೆ ವ್ಯವಸಾಯ ಸಹಕಾರಿ ಬ್ಯಾಂಕ್ | ಕಿನ್ನಿಗೋಳಿ ವ್ಯವಸಾಯ ಸಹಕಾರಿ ಬ್ಯಾಂಕ್ |
|---|---|---|
| ೨೦೦೬-೦೭ | ೨೩೮.೩೯ | ೮೦.೮೪ |
| ೨೦೦೭-೦೮ | ೩೧೯.೧೧ | ೯೫.೪೬ |
| ೨೦೦೮-೦೯ | ೪೪೮.೪೫ | ೯೯.೨೯ |
| ೨೦೦೯-೧೦ | ೬೧೪.೫೦ | ೧೦೨.೯೦ |
| ೨೦೧೦-೧೧ | ೭೯೭.೪೧ | ೧೦೮.೮೦ |

ಮೂಲ: ಬ್ಯಾಂಕಿನ ವಾರ್ಷಿಕ ವರದಿ

ಚಿತ್ರ-೧





ಅಧ್ಯಯನದಿಂದ ತಿಳಿಯುವಂತೆ ಬಜಪೆ ವ್ಯವಸಾಯ ಸಹಕಾರಿ ಬ್ಯಾಂಕ್‌ನ ಪಾಲು ಬಂಡವಾಳವು ವರ್ಷದಿಂದ ವರ್ಷಕ್ಕೆ ವೇಗವಾದ ರೀತಿಯಲ್ಲಿ ಏರಿಕೆಯಾಗಿದೆ.ಇದು ೨೦೦೬-೦೭ ರೂ೨೩೮.೩೯ ಲಕ್ಷದಿಂದ ೨೦೧೦-೧೧ಕ್ಕೆ ರೂ ೭೯೭.೪೧ ಲಕ್ಷಕ್ಕೆ ಏರಿಕೆಯಾಗಿದೆ. ಬ್ಯಾಂಕಿನ ಕ್ಷಿಪ್ರ ಬೆಳವಣಿಗೆಯಲ್ಲಿ ಈ ರೀತಿಯ ಪಾಲು ಬಂಡವಾಳದ ತೀವ್ರತರವಾದ ಏರಿಕೆಯು ಮಹತ್ವದ್ದಾಗಿದೆ. ಹಣಕಾಸು ವಲಯದ ಸುಧಾರಣೆಯಿಂದಾಗಿ ಈ ಬ್ಯಾಂಕುಗಳು ಸಾಕಷ್ಟು ಬಂಡವಾಳವನ್ನು ತೊಡಗಿಸಿ ಗ್ರಾಮೀಣ ಪ್ರದೇಶಗಳ ಸಮಗ್ರ ಆರ್ಥಿಕಾಭಿವೃದ್ಧಿಯನ್ನು ಸಾಧಿಸುವಲ್ಲಿ ಸಹಾಯಕವಾಗಿದೆ.

ಕಿನ್ನಿಗೋಳಿ ವ್ಯವಸಾಯ ಸಹಕಾರಿ ಬ್ಯಾಂಕ್‌ನ ಪಾಲು ಬಂಡವಾಳವು ನಿಧಾನಗತಿಯಲ್ಲಿ ಏರಿಕೆಯಾಗಿದೆ. ಇದು ೨೦೦೬-೦೭ ರೂ ೮೦.೮೪ಲಕ್ಷದಿಂದ ೨೦೧೦-೧೧ ರೂ ೧೦೮.೮ ಲಕ್ಷಕ್ಕೆ ಏರಿಕೆಯಾಗಿದೆ. ಈಗಿನ ಪಾಲು ಬಂಡವಾಳದ ಏರಿಕೆಯ ಗತಿ ನಿಧಾನವಾಗಿದ್ದರೂ ಅದನ್ನು ಹೆಚ್ಚಿಸುವ ಅವಕಾಶ ಮತ್ತು ಸಾಧ್ಯತೆಗಳು ಇನ್ನೂ ಇವೆ ಎಂಬುದೇ ಸಮಾಧಾನದ ವಿಷಯವಾಗಿದೆ.

**೩.೩.೧.ಆ ಸದಸ್ಯರು**

ಸಹಕಾರಿ ಸಂಘವು ಸ್ವಯಂಪ್ರೇರಿತ ಮತ್ತು ಮುಕ್ತ ಸದಸ್ಯತ್ವವನ್ನು ಆದರಿಸಿರುತ್ತದೆ. ವ್ಯಕ್ತಿಯ ಜೀವನದಲ್ಲಿ ಸಹಕಾರದ ಪಾತ್ರವು ಗಣನೀಯವಾಗಿದ್ದು ಅವರ ಆರ್ಥಿಕಾಭಿವೃದ್ಧಿಯಲ್ಲಿ



ಸಹಾಯಕವಾಗಿದೆ. ಸದಸ್ಯರ ಸೇವೆಯೇ ಸಹಕಾರದ ಮುಖ್ಯ ಗುರಿಯಾಗಿದೆ. ಸಂಗದ ಲಾಭ ಮತ್ತು ಉಳಿತಾಯವು ಸದಸ್ಯರಿಗೆ ಸೇರುತ್ತದೆ. ಬ್ಯಾಂಕಿನ ಕಾರ್ಯ ನೀತಿ ರೂಪಿಸುವಲ್ಲಿ ಸದಸ್ಯರು ಪ್ರಧಾನ ಪಾತ್ರವಹಿಸುತ್ತಾರೆ.


ಕೋಷ್ಟಕ ೩.೩.೧.೮ ಸದಸ್ಯರ ವಿವರ

(ರೂ. ಲಕ್ಷಗಳಲ್ಲಿ)

| ವರ್ಷ | ಬಜಪೆ ವ್ಯವಸಾಯ ಸಹಕಾರಿ ಬ್ಯಾಂಕ್ | ಕಿನ್ನಿಗೋಳಿ ವ್ಯವಸಾಯ ಸಹಕಾರಿ ಬ್ಯಾಂಕ್ |
|---|---|---|
| ೨೦೦೬-೦೭ | ೪೮೪೮ | ೪೬೬೮ |
| ೨೦೦೭-೦೮ | ೫೩೬೮ | ೪೯೮೨ |
| ೨೦೦೮-೦೯ | ೫೯೧೬ | ೫೧೯೩ |
| ೨೦೦೯-೧೦ | ೬೩೮೯ | ೫೨೦೩ |
| ೨೦೧೦-೧೧ | ೬೭೨೬ | ೫೭೪೪ |

ಮೂಲ: ಬ್ಯಾಂಕಿನ ವಾರ್ಷಿಕ ವರದಿ

ಚಿತ್ರ-೨




ಬಜಪೆ ವ್ಯವಸಾಯ ಸಹಕಾರಿ ಬ್ಯಾಂಕ್‌ನಲ್ಲಿನ ಸದಸ್ಯರ ಸಂಖ್ಯೆ ೨೦೦೬-೦೭ರಲ್ಲಿ ೪೮೪೮ ರಿಂದ ೨೦೧೦-೧೧ ೬೭೨೬ಕ್ಕೆ ಏರಿದೆ. ಕಿನ್ನಿಗೋಳಿ ವ್ಯವಸಾಯ ಸಹಕಾರಿ ಬ್ಯಾಂಕ್‌ನಲ್ಲಿನ ಸದಸ್ಯರ

ಸಂಖ್ಯೆ ೨೦೦೬-೦೭ರಲ್ಲಿ ೪೬೬೮ ರಿಂದ ೨೦೧೦-೧೧ ೫೭೪೪ಕ್ಕೆ ಏರಿದೆ. ಸದಸ್ಯರ ಸಂಖ್ಯೆ ಹೆಚ್ಚುವುದೆಂದರೆ ಬ್ಯಾಂಕ್‌ನ ಒಟ್ಟು ಕೆಲಸ-ಕಾರ್ಯಗಳು ಹೆಚ್ಚಿದಂತೆ. ಮುಕ್ತ ಸದಸ್ಯತನವು ಸ್ವಸಹಾಯ ವ್ಯವಸ್ಥೆಗೂ ಸಮಾಜೋಪಯೋಗಿ ಚಟುವಟಿಕೆಗಳಿಗೂ ಅವಕಾಶವನ್ನು ನೀಡುವುದರಿಂದ ನಮ್ಮ ಅಧ್ಯಯನದ ವ್ಯಾಪ್ತಿಯಲ್ಲಿ ಬರುವ ಎರಡೂ ಬ್ಯಾಂಕುಗಳಲ್ಲಿ ಸದಸ್ಯರ ಸಂಖ್ಯೆಯು ನಿಯಮಿತವಾಗಿ ಏರಿಕೆಯಾದದನ್ನು ಗಮನಿಸಬಹುದು.

**೩.೩.೧.೩ ಠೇವಣಾತಿ**

ಸಹಕಾರಿ ಬ್ಯಾಂಕುಗಳು ಸದಸ್ಯರಿಂದಲೂ ಇತರ ಮೂಲದಿಂದಲೂ ಠೇವಣಿಗಳನ್ನು ಸಂಗ್ರಹಿಸುತ್ತದೆ. ತನ್ನ ಕಾರ್ಯ ಚಟುವಟಿಕೆಗಳನ್ನು ನಡೆಸಲು, ಹಲವು ಯೋಜನೆಗಳನ್ನು ಅನುಷ್ಠಾನಗೊಳಿಸಲು ಹಾಗು ಆರ್ಥಿಕ ಭದ್ರತೆಗಾಗಿ ಠೇವಣಿಯು ಅಗತ್ಯವಾಗಿರುತ್ತದೆ.

ಕೋಷ್ಟಕ ೩.೩.೧.೩ ಠೇವಣಾತಿಯ ವಿವರ

(ರೂ ಲಕ್ಷಗಳಲ್ಲಿ)

| ವರ್ಷ | ಬಜಪೆ ವ್ಯವಸಾಯ ಸಹಕಾರಿ ಬ್ಯಾಂಕ್ | ಕಿನ್ನಿಗೋಳಿ ವ್ಯವಸಾಯ ಸಹಕಾರಿ ಬ್ಯಾಂಕ್ |
|---|---|---|
| ೨೦೦೬-೦೭ | ೨೫೭೭.೧೬ | ೧೦೬೧.೩೮ |
| ೨೦೦೭-೦೮ | ೪೨೦೮.೮೧ | ೧೧೪೮.೭೬ |
| ೨೦೦೮-೦೯ | ೫೦೭೧.೯೬ | ೧೩೧೧.೪೪ |
| ೨೦೦೯-೧೦ | ೬೧೨೬.೫೮ | ೧೫೩೩೫.೫೧ |
| ೨೦೧೦-೧೧ | ೭೫೨೯.೨೮ | ೧೯೧೧.೮೩ |

ಮೂಲ: ಬ್ಯಾಂಕಿನ ವಾರ್ಷಿಕ ವರದಿ

ನಮ್ಮ ಅಧ್ಯಯನದ ಬ್ಯಾಂಕುಗಳು ತಮ್ಮ ಸದಸ್ಯರಿಂದಲೂ ಇತರ ಮೂಲಗಳಿಂದಲೂ ಠೇವಣಿಗಳನ್ನು ಸಂಗ್ರಹಿಸುತ್ತದೆ. ಎರಡೂ ಬ್ಯಾಂಕುಗಳಲ್ಲಿ ಠೇವಣಿ ಸಂಗ್ರಹದಲ್ಲಿ ಏರಿಕೆ ಕಾಣುವುದಾದರೂ ಬಜ್ಪೆ ಬ್ಯಾಂಕ್‌ನಲ್ಲಿ ಈ ಏರಿಕೆಯ ಪ್ರಮಾಣವು ತುಲನಾತ್ಮಕವಾಗಿ ಹೆಚ್ಚಿರುವುದನ್ನು ಗಮನಿಸಬಹುದು. ನಮ್ಮ ಅಧ್ಯಯನದ ಅವಧಿಯಲ್ಲಿ ಕಿನ್ನಿಗೋಳಿ ಬ್ಯಾಂಕಿನಲ್ಲಿ ಠೇವಣಿ ಸಂಗ್ರಹದ ಪ್ರಮಾಣ ಸುಮಾರು ಎರಡುಪಟ್ಟು ಹೆಚ್ಚಾಗಿದ್ದರೆ ಈ ಹೆಚ್ಚಳವು ಬಜ್ಪೆ ಬ್ಯಾಂಕಿನಲ್ಲಿ ಸುಮಾರು ಮೂರರಷ್ಟಾಗಿರುತ್ತದೆ. ತಾನು ರೂಪಿಸಿದ ಯೋಜನೆಗಳನ್ನು

ಅನುಷ್ಠಾನಗೊಳಿಸಲು ಮತ್ತು ಆರ್ಥಿಕ ಭದ್ರತೆಯನ್ನು ಕಾಯ್ದುಕೊಳ್ಳಲು ಬ್ಯಾಂಕುಗಳಿಗೆ ಠೇವಣಿ ಮೂಲದಿಂದ ಸಂಗ್ರಹವಾದ ಹಣಕಾಸು ಪ್ರಧಾನವಾಗಿರುತ್ತದೆ. ಈ ಪ್ರಯತ್ನಗಳನ್ನು ಎರಡೂ ಬ್ಯಾಂಕುಗಳು ನಿರಂತರವಾಗಿ ಮುಂದುವರಿಸಿವೆ.

ಬಜ್ಪೆ ವ್ಯವಸಾಯ ಸಹಕಾರಿ ಬ್ಯಾಂಕಿನ ಠೇವಣಾತಿಯು ೨೦೦೬-೦೭ರಲ್ಲಿ ರೂ ೨೫೭೨.೧೬ ಲಕ್ಷದಿಂದ ೨೦೧೦-೧೧ಕ್ಕೆ ರೂ ೭೫೪೯.೨೮ ಲಕ್ಷಕ್ಕೇರಿದೆ. ಕಿನ್ನಿಗೋಳಿ ವ್ಯವಸಾಯ ಸಹಕಾರಿ ಬ್ಯಾಂಕಿನ ಠೇವಣಾತಿಯು ೨೦೦೬-೦೭ರಲ್ಲಿ ರೂ ೧೦೬೧.೩೮ ಲಕ್ಷದಿಂದ ೨೦೧೦-೧೧ಕ್ಕೆ ರೂ ೧೯೧೧.೮೩ ಲಕ್ಷಕ್ಕೇರಿದೆ.

### ೩.೩.೧.ಈ ದುಡಿಯುವ ಬಂಡವಾಳ

ದುಡಿಯುವ ಬಂಡವಾಳವು ಸರ್ಕಾರಿ ಘಟಕ ಸೇರಿದಂತೆ ವ್ಯವಹಾರ ಸಂಸ್ಥೆ ಅಥವಾ ಇತರ ಸಂಸ್ಥೆಯಲ್ಲಿ ಲಭ್ಯವಿರುವ ವಿತ್ತೀಯ ದ್ರವ್ಯತೆ(liquidity)ಯನ್ನು ಪ್ರತಿನಿಧಿಸುತ್ತದೆ. ಈ ಕೆಳಗಿನ ಕೋಷ್ಟಕದಲ್ಲಿ ದುಡಿಯುವ ಬಂಡವಾಳದಲ್ಲಿನ ಏರಿಕೆಯ ಪ್ರಮಾಣವನ್ನು ಗುರುತಿಸಬಹುದು. ದುಡಿಯುವ ಬಂಡವಾಳದ ಪ್ರಮಾಣದ ಏರಿಕೆ ಎರಡೂ ಬ್ಯಾಂಕುಗಳಿಗೂ ಅನ್ವಯವಾದರೂ ಈ ಏರಿಕೆಯು ಬಜ್ಪೆ ಬ್ಯಾಂಕಿನಲ್ಲಿ ಕಿನ್ನಿಗೋಳಿ ಬ್ಯಾಂಕಿಗಿಂತಲೂ ಹೆಚ್ಚಿರುವುದನ್ನು ಗಮನಿಸಬಹುದು. ಆದರೂ ಈ ವ್ಯತ್ಯಾಸವು ಸದಸ್ಯತನ ಸಂಖ್ಯೆ ಮತ್ತು ಠೇವಣಿ ಸಂಚಯನದ ಪ್ರಮಾಣಕ್ಕೆ ಅನುಗುಣವಾಗಿಯೇ ಇದೆ.

ಬಜ್ಪೆ ವ್ಯವಸಾಯ ಸಹಕಾರಿ ಬ್ಯಾಂಕಿನ ದುಡಿಯುವ ಬಂಡವಾಳವು ೨೦೦೬-೦೭ರಲ್ಲಿ ರೂ೨೬೭೦.೧೨ ಲಕ್ಷದಿಂದ ೨೦೧೦-೧೧ ರೂ ೭೯೫೨..೫೨ ಲಕ್ಷಕ್ಕೇರಿದೆ. ಕಿನ್ನಿಗೋಳಿ ವ್ಯವಸಾಯ ಸಹಕಾರಿ ಬ್ಯಾಂಕಿನ ಠೇವಣಾತಿಯು ೨೦೦೬-೦೭ರಲ್ಲಿ ರೂ ೧೨೬೧.೧೨ ಲಕ್ಷದಿಂದ ೨೦೧೦-೧೧ ರೂ ೨೩೩೧.೬೧ ಲಕ್ಷಕ್ಕೇರಿದೆ. ಇವುಗಳ ವರ್ಷವಾರು ವಿವರವನ್ನು ಈ ಕೆಳಗಿನ ಕೋಷ್ಟಕದಲ್ಲಿ ಅಭಿವ್ಯಕ್ತಗೊಳಿಸಲಾಗಿದೆ.

ಕೋಷ್ಟಕ೩.೩.೧.ಈ ದುಡಿಯುವ ಬಂಡವಾಳದ ವಿವರ

(ರೂ. ಲಕ್ಷಗಳಲ್ಲಿ)

| ವರ್ಷ | ಬಜಪೆ ವ್ಯವಸಾಯ ಸಹಕಾರಿ ಬ್ಯಾಂಕ್ | ಕಿನ್ನಿಗೋಳಿ ವ್ಯವಸಾಯ ಸಹಕಾರಿ ಬ್ಯಾಂಕ್ |
|---|---|---|
| ೨೦೦೬-೦೭ | ೨೬೭೦.೧೨ | ೧೨೬೧.೧೨ |
| ೨೦೦೭-೦೮ | ೩೭೬೪.೮೬ | ೧೩೮೮.೯೯ |
| ೨೦೦೮-೦೯ | ೫೪೯೬.೬೯ | ೧೬೧೮.೭೮ |
| ೨೦೦೯-೧೦ | ೬೪೮೩.೩೫ | ೧೯೦೦.೫೪ |
| ೨೦೧೦-೧೧ | ೭೯೫೨.೫೨ | ೨೩೩೧.೬೧ |

ಮೂಲ: ಬ್ಯಾಂಕಿನ ವಾರ್ಷಿಕ ವರದಿ

### ೩.೩.೨ ಸಾಲ ಮತ್ತು ಸಾಲದ ಮರುಪಾವತಿ

ಬ್ಯಾಂಕಿನ ನಿಗದಿತ ಚಟುವಟಿಕೆಗಳಲ್ಲಿ ಸಾಲ ನೀಡುವ ಮತ್ತು ಮರುಪಾವತಿಸುವ ಪ್ರಕ್ರಿಯೆಗೆ ಪ್ರತ್ಯೇಕವಾದ ಸ್ಥಾನವಿದೆ. ಸಾಲ ನೀಡಿಕೆಯ ವಿವರಗಳ ವಿಶ್ಲೇಷಣೆಯಲ್ಲಿ ಸಾಲದ ಉದ್ದೇಶ, ಅವಧಿ, ಬಡ್ಡಿಯದರ ಫಲಾನುಭವಿಗಳ ಆಯ್ಕೆ ಪ್ರಮುಖ ಅಂಶಗಳು. ಸಾಲ ನೀಡಿಕೆಯ ಪ್ರಕ್ರಿಯೆಯಲ್ಲಿ ಸಾಲ ಪಡೆಯುವವನು ಸಲ್ಲಿಸಬೇಕಾದ ದಾಖಲೆಗಳ ವಿವರಗಳು ಆಧಾರ ಪತ್ರಗಳು/ವಸ್ತುಗಳು ಸಾಕ್ಷಿಗಳೆಲ್ಲದಕ್ಕೂ ವಿಶೇಷ ಮಹತ್ವವಿದೆ. ಸಾಲ ಮರುಪಾವತಿಯು ಸದಸ್ಯರ ಪ್ರಾಮಾಣಿಕತೆಯನ್ನೂ, ಬ್ಯಾಂಕಿನ ದಕ್ಷತೆಯನ್ನೂ ತಿಳಿಯ ಪಡಿಸುವ ವಿಷಯಗಳಾಗಿವೆ.

ಈ ಹಿನ್ನೆಲೆಯಲ್ಲಿ ನಮ್ಮ ಅಧ್ಯಯನದ ಬ್ಯಾಂಕುಗಳ ಸಾಲ ನೀಡಿಕೆ ಮತ್ತು ಮರುಪಾವತಿಯ ವಿಧಾನಗಳನ್ನು ವಿವರಿಸುವಾಗ ತೃಪ್ತಿದಾಯಕ ಅಂಶಗಳು ಗೋಚರಿಸುತ್ತದೆ.


ಕೋಷ್ಟಕ ೩.೩೨.ಅ. ಸಾಲದ ವಿವರ

(ರೂ. ಲಕ್ಷಗಳಲ್ಲಿ)

| ವರ್ಷ | ಬಜಪೆ ವ್ಯವಸಾಯ ಸಹಕಾರಿ ಬ್ಯಾಂಕ್ | ಕಿನ್ನಿಗೋಳಿ ವ್ಯವಸಾಯ ಸಹಕಾರಿ ಬ್ಯಾಂಕ್ |
|---|---|---|
| ೨೦೦೬-೦೭ | ೧೯೪೦.೩೮ | ೭೫೨.೮೮ |
| ೨೦೦೭-೦೮ | ೨೫೫೬.೮೮ | ೮೮೩.೭೭ |
| ೨೦೦೮-೦೯ | ೩೭೦೯.೫೭ | ೯೫೭.೭೯ |
| ೨೦೦೯-೧೦ | ೫೦೫೮.೨೧ | ೧೧೧೬.೬೫ |
| ೨೦೧೦-೧೧ | ೫೬೯೧.೨೫ | ೧೨೮೪.೦೦ |

ಮೂಲ: ಬ್ಯಾಂಕಿನ ವಾರ್ಷಿಕ ವರದಿ

ಚಿತ್ರ-೫




ಕೋಷ್ಟಕ ೩.೩.೨.ಆ. ಸಾಲ ಮರುಪಾವತಿಯ ವಿವರ


| ವರ್ಷ | ಬಜಪೆ ವ್ಯವಸಾಯ ಸಹಕಾರಿ ಬ್ಯಾಂಕ್ | ಕಿನ್ನಿಗೋಳಿ ವ್ಯವಸಾಯ ಸಹಕಾರಿ ಬ್ಯಾಂಕ್ |
|---|---|---|
| ೨೦೦೬-೦೭ | ೯೫.೫೫% | ೯೩.೭೦% |
| ೨೦೦೭-೦೮ | ೯೬.೭೯% | ೯೧.೦೯% |
| ೨೦೦೮-೦೯ | ೯೮.೨೯% | ೯೨.೩೪% |
| ೨೦೦೯-೧೦ | ೯೬.೬೨% | ೯೨.೪೧% |
| ೨೦೧೦-೧೧ | ೯೭.೩೨% | ೯೨.೭೭% |

ಮೂಲ: ಬ್ಯಾಂಕಿನ ವಾರ್ಷಿಕ ವರದಿ

ಚಿತ್ರ–೬




ಕೋಷ್ಟಕ ೩.೩.೨ 'ಅ' ಮತ್ತು 'ಆ' ದಲ್ಲಿ ತಿಳಿಸಿದಂತೆ ಅಧ್ಯಯನದ ಅವಧಿಯಲ್ಲಿ ಎರಡೂ ಬ್ಯಾಂಕುಗಳ ಸಾಲ ನೀಡಿಕೆಯ ಪ್ರಮಾಣದಲ್ಲಿ ಗಣನೀಯವಾದ ಹೆಚ್ಚಳ ಕಂಡುಬರುತ್ತದೆ. ಹಾಗೆಯೇ ಎರಡೂ ಬ್ಯಾಂಕುಗಳಲ್ಲಿ ಶೇಕಡಾ ನೂರಕ್ಕೆ ಹತ್ತಿರದಷ್ಟಿರುವ ಸಾಲ ಮರುಪಾವತಿಯ



ಪ್ರಮಾಣವು ಪ್ರತ್ಯೇಕವಾಗಿ ಗುರುತಿಸಬೇಕಾದ ಅಂಶ. ಬ್ಯಾಂಕಿನ ಸಮರ್ಥವಾದ ಆಡಳಿತ ಮತ್ತು ಅನುಷ್ಠಾನ ಪದ್ಧತಿಗೆ ಪೂರಕವಾಗಿರುವ ಸದಸ್ಯರ ಪ್ರಾಮಾಣಿಕತೆಯು ಸಾಲಗಳ ಸಕಾಲಿಕ ಮರುಪಾವತಿಯನ್ನು ಸಾಧ್ಯಗೊಳಿಸಿದೆ. ಅದರ ಜೊತೆಯಲ್ಲಿ ಮರುಪಾವತಿಯನ್ನು ಉತ್ತೇಜಿಸುವ ಸರ್ಕಾರದ ಮತ್ತು ಸಹಕಾರ ವ್ಯವಸ್ಥೆಯ ನೀತಿನಿಯಮಗಳು ಪೂರಕ ಅವಕಾಶಗಳನ್ನು ಒದಗಿಸುತ್ತದೆ.

ಕೋಷ್ಟಕಗಳಲ್ಲಿ ತಿಳಿಸುವಂತೆ ಬಜ್ಪೆ ಮತ್ತು ಕಿನ್ನಿಗೋಳಿ ಬ್ಯಾಂಕುಗಳ ಸಾಲ ನೀಡಿಕೆ ಹಾಗೂ ಶೇಕಡಾವಾರು ಮರುಪಾವತಿಯ ವರ್ಷವಾರು ವಿವರಗಳು ಅನುಕ್ರಮವಾಗಿ ಈ ರೀತಿಯಾಗಿವೆ: ೨೦೦೬-೦೭- ೧೯೪೦.೩೮/೯೫.೫ ಹಾಗು ೭೫೨.೮೮/೯೩.೭; ೨೦೦೭-೦೮- ೨೫೫೬.೮೮/೯೬.೭೯ ಹಾಗು೮೮೩.೭೭/೯೧.೦೯; ೨೦೦೮-೦೯-೩೭೦೯.೫೭/೯೮.೨೯ ಮತ್ತು ೯೫೭.೭೯/೯೨.೩೪; ೨೦೦೯-೧೦-೫೦೫೮.೨೧/೯೬.೬೨ ಮತ್ತು ೧೧೧೬.೬೫/೯೨.೪೧; ೨೦೧೦-೧೧-೫೬೯೧.೨೫/೯೭.೩೨ ಮತ್ತು ೧೨೮೪.೦೦/೯೨.೭೭.

### ೩.೩.೩ ಲಾಭ ಮತ್ತು ಲಾಭಾಂಶ

ಈಗಾಗಲೇ ಉಲ್ಲೇಕಿಸಿದಂತೆ ಲಾಭ ಮತ್ತು ಲಾಭಾಂಶಗಳೇ ಸಹಕಾರಿ ಸಂಸ್ಥೆಯ ಕಾರ್ಯ ವೈಖರಿಯ ನಿರ್ಣಾಯಕ ಅಂಶಗಳು ಅಲ್ಲವಾಗಿದ್ದರೂ ಬ್ಯಾಂಕುಗಳನ್ನು ಆರ್ಥಿಕ ವಿಶ್ಲೇಷಣೆಗೆ ಒಳಪಡಿಸಿದಾಗ ನಮಗೆ ಲಭ್ಯವಾಗುವ ಮೌಲ್ಯ ಮಾಪನಗಳಲ್ಲಿ ಲಾಭ ಮತ್ತು ಲಾಭಾಂಶಗಳು ಪ್ರಮುಖವಾಗಿವೆ. ಇವುಗಳ ಹೆಚ್ಚಳಕ್ಕೆ ಬ್ಯಾಂಕುಗಳು ಸಹಜವಾಗಿ ಪ್ರಯತ್ನಗಳನ್ನು ಮುಂದುವರಿಸುತ್ತದೆ ವರ್ಷದಿಂದ ವರ್ಷಕ್ಕೆ ಲಾಭದ ಪ್ರಮಾಣದಲ್ಲಿ ಆದ ಹೆಚ್ಚಳವನ್ನು ಕೋಷ್ಟಕ ೩.೩.೩ ರಲ್ಲಿ ಕಾಣಬಹುದು(೨೦೦೮-೦೯ರಲ್ಲಿ ಕಿನ್ನಿಗೋಳಿ ಬ್ಯಾಂಕಿನಲ್ಲಿ ಲಾಭದ ಪ್ರಮಾಣ ಕಡಿಮೆಯಾಗಿತ್ತು)
ತನ್ನ ಪಾಲುದಾರ ಸದಸ್ಯರಿಗೆ ಲಾಭಾಂಶವನ್ನು ನೀಡುವ ಹೊಣೆಗಾರಿಕೆಯನ್ನು ಹೊಂದಿದ ಬ್ಯಾಂಕ್ ಲಾಭಾಂಶವನ್ನು ನಿಗದಿ ಪಡಿಸುವಲ್ಲಿ ತನ್ನದೇ ನೀತಿ ವಿಧಾನಗಳನ್ನು ಅನುಸರಿಸುತ್ತದೆ. ಬಜ್ಪೆ ಬ್ಯಾಂಕ್ ಕಳೆದ ೨೨ ವರ್ಷಗಳಿಂದಲೂ ಶೇಕಡಾ ೧೫ರ ಸ್ಥಿರವಾದ ದರದಲ್ಲಿ ಲಾಭಾಂಶವನ್ನು ನೀಡಿದರೆ ಕಿನ್ನಿಗೋಳಿ ಬ್ಯಾಂಕ್ ತನ್ನ ವ್ಯವಹಾರ ಮತ್ತು ಲಾಭದ ಪ್ರಮಾಣದ ಏರಿಕೆಗೆ ಅನುಗುಣವಾಗಿ ಲಾಭಾಂಶದ ಪ್ರಮಾಣವನ್ನು ಹೆಚ್ಚಿಸುತ್ತಾ ಈಗ ಶೇಕಡಾ ೧೨ರ ಲಾಭಾಂಶವನ್ನು ನೀಡುವುದಕ್ಕೆ ಸಮರ್ಥವಾಗಿದೆ.

ಕೋಷ್ಟಕ ೩.೩.೩ ಲಾಭ ಮತ್ತು ಲಾಭಾಂಶದ ವಿವರ

| ವರ್ಷ | ಬಜಪೆ ವ್ಯವಸಾಯ ಸಹಕಾರಿ ಬ್ಯಾಂಕ್ | | ಕಿನ್ನಿಗೋಳಿ ವ್ಯವಸಾಯ ಸಹಕಾರಿ ಬ್ಯಾಂಕ್ | |
|---|---|---|---|---|
| | ಲಾಭ(ರೂ ಲಕ್ಷಗಳಲ್ಲಿ) | ಲಾಭಾಂಶ | ಲಾಭ (ರೂ ಲಕ್ಷಗಳಲ್ಲಿ) | ಲಾಭಾಂಶ |
| ೨೦೦೬-೦೭ | ೫೨.೩೭ | ೧೫% | ೩.೬೦ | ೩% |
| ೨೦೦೭-೦೮ | ೮೨.೭೨ | ೧೫% | ೧೩.೩೧ | ೩% |
| ೨೦೦೮-೦೯ | ೧೦೭.೫೩ | ೧೫% | ೭.೦೨ | ೯% |
| ೨೦೦೯-೧೦ | ೧೫೧.೫೯ | ೧೫% | ೧೭.೧೪ | ೧೦% |
| ೨೦೧೦-೧೧ | ೨೦೧.೦೪ | ೧೫% | ೨೨.೫೮ | ೧೨% |

ಮೂಲ: ಬ್ಯಾಂಕಿನ ವಾರ್ಷಿಕ ವರದಿ



ಅಧ್ಯಯನಕ್ಕೆ ಆಯ್ದ ಎರಡೂ ಬ್ಯಾಂಕುಗಳು ಸ್ಥಾಪನೆಗೊಂಡು ಸರಿಸುಮಾರು ೫೬ ವರ್ಷಗಳೇ ಸಂದಿವೆ. ಗ್ರಾಮೀಣ ಪ್ರದೇಶದಲ್ಲಿ ಸ್ಥಾಪನೆಯಾದ ಎರಡೂ ಬ್ಯಾಂಕುಗಳು ಇಂದು ಸಹಕಾರಿ ಕ್ಷೇತ್ರದಲ್ಲಿ ತನ್ನದೇ ಆದ ಮೈಲುಗಲ್ಲನ್ನು ಸ್ಥಾಪಿಸಿರುವುದನ್ನು ಕಾಣಬಹುದಾಗಿದೆ. ಬಜ್ಪೆ ವ್ಯವಸಾಯ ಸಹಕಾರಿ ಬ್ಯಾಂಕು ಕ್ಷಿಪ್ರಗತಿಯಲ್ಲಿ ಪ್ರಗತಿಯನ್ನು ಸಾಧಿಸಿದರೆ, ಕಿನ್ನಿಗೋಳಿ ವ್ಯವಸಾಯ ಸಹಕಾರಿ ಬ್ಯಾಂಕು ನಿಧಾನಗತಿಯಲ್ಲಿ ಪ್ರಗತಿ ಪಥದತ್ತ ದಾಪುಗಾಲು ಹಾಕುತ್ತಿದೆ. ಈ ಎರಡೂ ಬ್ಯಾಂಕುಗಳು ಸಹಕಾರಿ ಕ್ಷೇತ್ರದಲ್ಲಿ ಅದ್ವಿತೀಯ ಸಾಧನೆಯನ್ನು ಮಾಡಿವೆ. ಗ್ರಾಹಕರಿಗೆ ಉತ್ತಮ ಸೌಲಭ್ಯಗಳನ್ನೊದಗಿಸುತ್ತಿರುವ ಬಜ್ಪೆ ವ್ಯವಸಾಯ ಸಹಕಾರಿ ಬ್ಯಾಂಕು ದಕ್ಷಿಣಕನ್ನಡ ಜಿಲ್ಲೆಯಲ್ಲಿಯೇ ಉತ್ತಮ ಕೃಷಿ ಸಹಕಾರಿ ಬ್ಯಾಂಕು ಎಂದು ಕೇಂದ್ರ ಬ್ಯಾಂಕು, ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳಿ ಹಾಗೂ ನಬಾರ್ಡ್‌ನಿಂದ ಪುರಸ್ಕರಿಸಲ್ಪಟ್ಟಿದೆ. ಗ್ರಾಮೀಣ ಪ್ರದೇಶವೊಂದರಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬ್ಯಾಂಕೊಂದು ಸಹಕಾರಿ ಕ್ಷೇತ್ರದಲ್ಲಿ ಗೈದಿರುವ ಸಾಧನೆ ಗಮನಾರ್ಹವಾದುದು. ಈ ಬ್ಯಾಂಕ್ ಗ್ರಾಮೀಣ ಪ್ರದೇಶದಲ್ಲಿ ಆರ್ಥಿಕ ಕ್ರಾಂತಿಯನ್ನೇ ಮಾಡಿದೆ. ಈ ಭಾಗದ ಜನರ ಆಶೋತ್ತರಗಳನ್ನು ಪೂರೈಸುತ್ತಿರುವ ಈ ಬ್ಯಾಂಕು ಆಧುನಿಕತೆಗೂ ಹೊಸ ಮೆರುಗನ್ನು ನೀಡಿದೆ. ಸಂಪೂರ್ಣ ಗಣಕೀಕೃತ ಪ್ರಧಾನ ಕಛೇರಿಯನ್ನೂ ಸಂಪೂರ್ಣ ಹವಾನಿಯಂತ್ರಣಗೊಳಿಸಿ ಈ ವ್ಯವಸ್ಥೆಯಲ್ಲಿ

ಕಾರ್ಯನಿರ್ವಹಿಸುತ್ತಿರುವ ಮೊದಲ ಪ್ರಾಥಮಿಕ ಪತ್ತಿನ ಸಹಕಾರ ಬ್ಯಾಂಕ್ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಈ ಬ್ಯಾಂಕು ಗ್ರಾಮೀಣಾಭಿವೃದ್ಧಿಯ ಮೂಲಕ ಸಹಕಾರ ರಂಗಕ್ಕೆ ಭದ್ರನೆಲೆಯನ್ನು ಕಂಡುಕೊಂಡಿರುವುದು ಅಭಿನಂದನೀಯ. ಮಾಜಿ ರಾಷ್ಟ್ರಪತಿ ಡಾ.ಎ.ಪಿ.ಜೆ ಅಬ್ದುಲ್ ಕಲಾಂ ಅವರ ಗ್ರಾಮೀಣ ಪ್ರದೇಶಗಳಿಗೆ ಪಟ್ಟಣದ ಸವಲತ್ತು ಸಹಕಾರ ಕ್ಷೇತ್ರದಿಂದ ದೊರೆಯಬೇಕೆಂಬ ಆಶಯದ ಮಾತಿಗೆ ಇಲ್ಲಿ ಹೆಚ್ಚು ಮಹತ್ವ ದೊರಕಿದೆ ಎಂದರೆ ತಪ್ಪಾಗಲಾರದು.

ಸುಮಾರು ೧೨ ರಾಷ್ಟ್ರೀಕೃತ ಬ್ಯಾಂಕುಗಳ ಜೊತೆ ಪೈಪೋಟಿಯನ್ನು ನಡೆಸಿ ಸಹಕಾರ ತತ್ವದಡಿಯಲ್ಲಿ ಗಾಹಕರಿಗೆ ತನ್ನದೇ ಆದ ರೀತಿಯಲ್ಲಿ ಇತರ ವಾಣಿಜ್ಯ ಬ್ಯಾಂಕುಗಳು ನೀಡುವ ಎಲ್ಲಾ ರೀತಿಯ ಸಾಲ ಸೌಲಭ್ಯಗಳನ್ನು ಒದಗಿಸುತ್ತಿರುವ ಕಿನ್ನಿಗೋಳಿ ವ್ಯವಸಾಯ ಬ್ಯಾಂಕು ಗ್ರಾಮೀಣ ಪ್ರದೇಶದಲ್ಲಿಯೇ ಅತ್ಯಂತ ಮುಂದುವರಿದ ಬ್ಯಾಂಕು ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವುದು ಬ್ಯಾಂಕಿನ ಪ್ರಗತಿಯ ದ್ಯೋತಕವಾಗಿದೆ. ಗ್ರಾಮೀಣ ಪ್ರದೇಶವೊಂದರಲ್ಲಿ ಬ್ಯಾಂಕೊಂದು ಇಷ್ಟು ಪ್ರಗತಿಯನ್ನು ಸಾಧಿಸುರುವುದು ಗಮನಾರ್ಹ ಅಂಶ. ಈ ಎರಡೂ ಬ್ಯಾಂಕುಗಳು ಸಹಕಾರ ಕ್ಷೇತ್ರದ ಬೆಳವಣಿಗೆಯಲ್ಲಿ ಮತ್ತು ಕೃಷಿ ಅಭಿವೃದ್ಧಿಯಲ್ಲಿ ಮಹತ್ತರ ಪಾತ್ರವಹಿಸಿದೆ.

# ಅಧ್ಯಾಯ-೪

# ಮಂಗಳೂರಿನ ಆಯ್ದ ಬ್ಯಾಂಕುಗಳ ಸದಸ್ಯರ ಕ್ಷೇತ್ರ ಕಾರ್ಯಾಧಾರಿತ ಮಾಹಿತಿ ವಿಶ್ಲೇಷಣೆ

# ಅಧ್ಯಾಯ–೪

# ಮಂಗಳೂರಿನ ಆಯ್ದ ಕೃಷಿ ಸಹಕಾರಿ ಬ್ಯಾಂಕುಗಳ ಸದಸ್ಯರ ಕ್ಷೇತ್ರ ಕಾರ್ಯಾಧಾರಿತ ಮಾಹಿತಿ ವಿಶ್ಲೇಷಣೆ

ಮಂಗಳೂರಿನ ಆಯ್ದ ವ್ಯವಸಾಯ ಸಹಕಾರಿ ಬ್ಯಾಂಕುಗಳ ಕಾರ್ಯವಿಧಾನಗಳ ವಿಸ್ತ್ರತವಾದ ಅಧ್ಯಯನ ಮಾಡಲು ಮತ್ತು ಈ ಬ್ಯಾಂಕುಗಳು ಕೃಷಿ ಕಾರ್ಯ ಚಟುವಟಿಕೆಗಳಲ್ಲಿ ಬೀರುವ ಪರಿಣಾಮಗಳನ್ನು ವಿಶ್ಲೇಷಿಸುವ ಉದ್ದೇಶವಿಟ್ಟುಕೊಂಡು ಈ ಅಧ್ಯಯನವನ್ನು ನಡೆಸಲಾಗಿದೆ. ಇದಕ್ಕಾಗಿ ಈ ಬ್ಯಾಂಕುಗಳ ಸದಸ್ಯರ/ಫಲಾನುಭವಿಗಳ ಮಾಹಿತಿಯನ್ನು ಕ್ಷೇತ್ರ ಕಾರ್ಯದ ಮೂಲಕ ಸಂಗ್ರಹಿಸಲಾಗಿದೆ. ಈ ಅಧ್ಯಾಯದಲ್ಲಿ ಆಯ್ದ ಬ್ಯಾಂಕುಗಳ ಸದಸ್ಯರ/ಫಲಾನುಭವಿಗಳ ಮಾಹಿತಿಯನ್ನು ಪ್ರಶ್ನಾವಳಿಗಳ ಮೂಲಕ ಕ್ಷೇತ್ರ ಕಾರ್ಯವನ್ನು ಮಾಡಿ ಸಂಗ್ರಹಿಸಿ ಅವುಗಳನ್ನು ತುಲನಾತ್ಮಕವಾಗಿ ವಿಶ್ಲೇಷಿಸಲಾಗಿದೆ.

ಸಹಕಾರಿ ಬ್ಯಾಂಕಿನ ಸದಸ್ಯರ ಹೊಣೆ ದಿನೇ ದಿನೇ ಹೆಚ್ಚುತ್ತಲಿದ್ದು ಈ ಹೊಣೆಯನ್ನು ಪ್ರತಿಯೊಬ್ಬ ಸದಸ್ಯನು ಅರಿತು ಪ್ರಾಮಾಣಿಕತೆಯಿಂದ ಮತ್ತು ನಿಷ್ಠೆಯಿಂದ ಕೆಲಸ ಮಾಡಿದಲ್ಲಿ ಯೋಜನೆಗಳು, ಗೊತ್ತು ಗುರಿಗಳು ಗೊತ್ತು ಪಡಿಸಿದ ಅವಧಿಗಿಂತ ಮುಂಚಿತವಾಗಿಯೇ ಯಶಸ್ವಿಯಾಗಿ ಪೂರ್ತಿಗೊಳ್ಳುವುದರಲ್ಲಿ ಸಂದೇಹವಿಲ್ಲ. ಸದಸ್ಯರ ಸಕ್ರಿಯ ಪಾಲ್ಗೊಳ್ಳುವಿಕೆ ಸಹಕಾರಿ ಸಂಘಗಳ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ರೈತರ, ಸದಸ್ಯರ, ಸಾರ್ವಜನಿಕರ ಆರ್ಥಿಕ ಹಾಗೂ ಸಾಮಾಜಿಕ ಏಳಿಗೆಗಾಗಿ ಹಲವಾರು ಸೌಲಭ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ಸಹಕಾರಿ ಸಂಘಗಳು ಕಾರ್ಯನಿರ್ವಹಿಸುತ್ತಿವೆ. ಈ ಸಹಕಾರಿ ಸಂಘಗಳ ಬೆಳವಣಿಗೆಗೆ ಸದಸ್ಯರ ಸಕ್ರಿಯ ಪಾಲ್ಗೊಳ್ಳುವಿಕೆ ಅವಶ್ಯವಾಗಿದೆ.

ಅಧ್ಯಯನಕ್ಕೆ ಆಯ್ದುಕೊಳ್ಳಲಾದ ಕೃಷಿ ಸಹಕಾರಿ ಬ್ಯಾಂಕುಗಳ ಸಂಖ್ಯೆ ಕೇವಲ ಎರಡು ಮಾತ್ರವಾದರೂ ಅವುಗಳು ಅಧ್ಯಯನದ ದೃಷ್ಟಿಯಿಂದ ಪ್ರಾತಿನಿಧಿಕ ಬ್ಯಾಂಕುಗಳೆಂದು ಪರಿಗಣಿಸಬಹುದು, ಸದಸ್ಯರ ಸಂಖ್ಯೆ, ಕಾರ್ಯಕ್ಷೇತ್ರ ಮತ್ತು ಚಟುವಟಿಕೆಗಳನ್ನು ಗಮನಿಸಿದಾಗ ಆಯ್ದ ಈ ಬ್ಯಾಂಕುಗಳಲ್ಲಿ ಸಾಕಷ್ಟು ಅಧ್ಯಯನಕ್ಕೆ ಯೋಗ್ಯವಾದ ವಿಷಯಗಳಿರುವುದು ಸ್ಪಷ್ಟವಾಗುತ್ತದೆ. ಕ್ಷೇತ್ರಕಾರ್ಯದಲ್ಲಿ ತಲಾ ೬೦ರಷ್ಟು ಪ್ರತಿ ಬ್ಯಾಂಕಿನ ಸದಸ್ಯರನ್ನು/ಫಲಾನುಭವಿಗಳನ್ನು ಆಯ್ಕೆ ಮಾಡಿ ಪ್ರಶ್ನಾವಳಿಗಳ ಮೂಲಕ ಅವರ ಸಂದರ್ಶನವನ್ನು ನಡೆಸಿ ಮಾಹಿತಿ ಸಂಗ್ರಹಿಸಲಾಗಿದೆ. ಅವರ ಪ್ರಾಥಮಿಕ ವಿವರಗಳು ಬ್ಯಾಂಕಿನಿಂದಲೇ ಲಭ್ಯವಾದರೂ ಇತರ ಅಗತ್ಯದ ವಿವರಗಳನ್ನು ಕ್ಷೇತ್ರ

ಕಾರ್ಯದ ಮೂಲಕ ಸಂಗ್ರಹಿಸಲಾಗಿದೆ. ಎರಡೂ ಬ್ಯಾಂಕುಗಳಲ್ಲಿ ತಲಾ ೬೦೦೦ದ ಆಸುಪಾಸಿನ ಸಂಖ್ಯೆಯಲ್ಲಿ ಸದಸ್ಯರಿದ್ದು ಅದರ ನಿರ್ದಿಷ್ಟ ಅನುಪಾತದ ತಲಾ ೬೦ರ ಸಂಖ್ಯೆಯ ಸದಸ್ಯರನ್ನು 'ರ್‍ಯಾಂಡಮ್ ಸರ್ವೆ'ಯ ಮೂಲಕ ಗುರುತಿಸಿ ಕ್ಷೇತ್ರ ಕಾರ್ಯವನ್ನು ನಿರ್ವಹಿಸಲಾಗಿದೆ.

**೪.೧ ಸದಸ್ಯರ/ಫಲಾನುಭವಿಗಳ ಪ್ರಾಥಮಿಕ ಮಾಹಿತಿಗಳು**

ಕ್ಷೇತ್ರ ಕಾರ್ಯದ ಸಂದರ್ಭಲ್ಲಿ ಆಯ್ದ ಸದಸ್ಯರ/ಫಲಾನುಭವಿಗಳ ಪ್ರಾಥಮಿಕ ಮಾಹಿತಿಯ ಸಂಗ್ರಹಿಸುವಾಗ ಅವರ ಕೌಟುಂಬಿಕ ಪರಿಚಯವನ್ನು(ಐಚ್ಛಿಕ) ಮಾಡಿಕೊಳ್ಳಲಾಗಿದೆ.ಅದರಂತೆ ಪ್ರಶ್ನಾವಳಿಯ ಆರಂಭದಲ್ಲಿ ಮಾಹಿತಿದಾರರ (ಉತ್ತರಿಸಿದವರ) ಹೆಸರು, ವಯಸ್ಸು, ವಾಸಸ್ಥಳ, ಹಾಗೂ ವಿದ್ಯಾರ್ಹತೆ ಮತ್ತು ಕೃಷಿ ಭೂಮಿಗಳಿಗೆ ಸಂಬಂಧಿಸಿದಂತೆ ಮಾಹಿತಿಯನ್ನು ಕೇಳಲಾಗಿದೆ. ಅಲ್ಲದೆ ಸದಸ್ಯರಿಂದ/ ಫಲಾನುಭವಿಗಳಿಂದ ಆಯ್ದ ಕೃಷಿ ಸಹಕಾರಿ ಬ್ಯಾಂಕುಗಳ ಬಗೆಗಿನ ಪ್ರಾಥಮಿಕ ಮಾಹಿತಿಯನ್ನು ಪಡೆಯಲಾಗಿದೆ. ಇದರಿಂದ ಅವರು ಸದಸ್ಯರಾದ ವರ್ಷ, ಉದ್ದೇಶ, ಭಾಗವಹಿಸುವಿಕೆ, ಹಾಗೂ ವೈಯುಕ್ತಿಕವಾಗಿ ಅವರು ಮಹತ್ವ ನೀಡುವ ವಿಷಯ ಇತ್ಯಾದಿಗಳ ಬಗ್ಗೆ ಮಾಹಿತಿ ಸಂಗ್ರಹಿಸಬಹುದಾಗಿದೆ.

**೪.೧.೧ ಕೃಷಿ ಸಹಕಾರಿ ಬ್ಯಾಂಕಿನ ಸದಸ್ಯತನದ ವರ್ಷವಾರು ವಿವರ**

ಸಹಕಾರಿ ಸಂಘಟನೆಯು ಸ್ವಯಂಪ್ರೇರಿತ ಮತ್ತು ಮುಕ್ತ ಸದಸ್ಯತ್ವವನ್ನು ಆಧರಿಸಿರುತ್ತದೆ.ಅದರಲ್ಲಿ ಸದಸ್ಯನಾಗಲು ಯಾವುದೇ ಒತ್ತಾಯ ಇರುವುದಿಲ್ಲ. ಸದಸ್ಯತ್ವವನ್ನು ಪಡೆಯುವುದು ಮತ್ತು ತ್ಯಜಿಸುವುದು ಸ್ವಯಂಪ್ರೇರಿತವಾಗಿರುತ್ತದೆ. ಪರಸ್ಪರ ಪ್ರಯೋಜನ ಪಡೆಯುವುದಕ್ಕಾಗಿ ಸಮಾನ ಆಸಕ್ತಿಯಿಂದ ಕೂಡಿದ ಜನರು ಸ್ವಯಂಪ್ರೇರಿತರಾಗಿ ಸಂಘಟನೆಗೊಳ್ಳಲು ಸಹಕಾರ ಸಂಘಗಳು ಸೂಕ್ತ ವೇದಿಕೆ ನಿರ್ಮಾಣ ಮಾಡಿ ಕೊಡುತ್ತದೆ. ಸಹಕಾರ ವ್ಯವಸ್ಥೆಯಲ್ಲಿ ಸದಸ್ಯರ ಕಲ್ಯಾಣಕ್ಕೆ ಆದ್ಯತೆ ನೀಡಲಾಗುತ್ತದೆ.

ಕೋಷ್ಟಕ ೪.೧.೧ ಸದಸ್ಯತನದ ವರ್ಷವಾರು ವಿವರ

| ಕ್ರಮ ಸಂಖ್ಯೆ | ಸದಸ್ಯತನದ ವರ್ಷ | ಬಜಪೆ ವ್ಯವಸಾಯ ಸಹಕಾರಿ ಬ್ಯಾಂಕ್ | | ಕಿನ್ನಿಗೋಳಿ ವ್ಯವಸಾಯ ಸಹಕಾರಿ ಬ್ಯಾಂಕ್ | |
|---|---|---|---|---|---|
| | | ಸಂಖ್ಯೆ | ಶೇಕಡಾವಾರು ಪ್ರಮಾಣ | ಸಂಖ್ಯೆ | ಶೇಕಡಾವಾರು ಪ್ರಮಾಣ |
| ೧ | ೨೦೦೧ರ ಮೊದಲು | ೨೦ | ೩೩.೩೩ | ೩೪ | ೫೬.೬೭ |
| ೨ | ೨೦೦೧ರ ನಂತರ,೨೦೦೫ರ ಮೊದಲು | ೦೯ | ೧೫.೦೦ | ೧೭ | ೨೮.೩೩ |
| ೩ | ೨೦೦೫ರ ನಂತರ | ೩೧ | ೫೧.೬೭ | ೯ | ೧೫.೦೦ |
| | ಒಟ್ಟು | ೬೦ | ೧೦೦ | ೬೦ | ೧೦೦ |

ಮೂಲ: ಸಂಶೋಧನಾ ಕ್ಷೇತ್ರ ಕಾರ್ಯಾಧಾರಿತ ಮಾಹಿತಿ

ಬಜಪೆ ವ್ಯವಸಾಯ ಸಹಕಾರಿ ಬ್ಯಾಂಕ್‌ನಲ್ಲಿ ೨೦೦೫ರ ನಂತರದ ಅವಧಿಯಲ್ಲಿ ಸದಸ್ಯರಾದವರ ಸಂಖ್ಯೆ ಪ್ರಾರಂಭಕ್ಕಿಂತ ಅಧಿಕವಾಗಿದ್ದು ಈ ದಶಕದಲ್ಲಿ ಬ್ಯಾಂಕ್ ತನ್ನ ಕಾರ್ಯಕ್ಷೇತ್ರವನ್ನು ವಿಸ್ತರಿಸುತ್ತಿರುವುದು ಬೆಳಕಿಗೆ ಬರುತ್ತದೆ. ಇದು ೨೦೦೧ರ ಮೊದಲು ಶೇಕಡಾ ೩೩ರಷ್ಟಿದ್ದು, ೨೦೦೫ರ ನಂತರದ ಅವಧಿಯಲ್ಲಿ ಶೇಕಡಾ ೫೨ರಷ್ಟಾಗಿದೆ. ಕಿನ್ನಿಗೋಳಿ ವ್ಯವಸಾಯ ಬ್ಯಾಂಕಿನಲ್ಲಿ ಸದಸ್ಯತನದ ವರ್ಷವಾರು ವಿವರವನ್ನು ಪರಿಶೀಲಿಸಿದಾಗ ಇದು ಪ್ರಾರಂಭದಲ್ಲಿ ಅಂದರೆ ೨೦೦೧ರ ಮೊದಲು ಅಧಿಕವಾಗಿರುದನ್ನು(ಶೇಕಡಾ ೫೭)ಕಾಣಬಹುದಾಗಿದೆ.

ಎರಡೂ ಬ್ಯಾಂಕಿನಲ್ಲಿ ಸದಸ್ಯರ ಸಂಖ್ಯೆಯನ್ನು ಗಮನಿಸಿದಾಗ ಪ್ರತಿ ವರ್ಷವು ಹೆಚ್ಚಳವಾಗುತ್ತಿರುವುದನ್ನು ಗಮನಿಸಬಹುದಾಗಿದೆ. ಸದಸ್ಯರ ಸಂಖ್ಯೆ ಹೆಚ್ಚುವುದೆಂದರೆ ಬ್ಯಾಂಕ್‌ನ ಒಟ್ಟು ಕೆಲಸ-ಕಾರ್ಯಗಳು ಹೆಚ್ಚಿದಂತೆ. ಇದು ಬ್ಯಾಂಕ್‌ನ ಪ್ರಗತಿಯ ದ್ಯೋತಕವಾಗಿದೆ. ನಮ್ಮ ಅಧ್ಯಯನದ ಕ್ಷೇತ್ರಕಾರ್ಯದ ಮಾಹಿತಿಯನ್ನು ಕೋಷ್ಟಕ ೪.೧.೧ ರಲ್ಲಿ ಪ್ರಸ್ತುತಪಡಿಸಿದಂತೆ ಬೇರೆ-ಬೇರೆ ಸಮಯಾವಧಿಯಲ್ಲಿ ಸದಸ್ಯರಾದವರ ಸಂಖ್ಯೆಯ ಶೇಕಡಾವಾರು ವಿವರಗಳು ಅದನ್ನು ದೃಢಪಡಿಸುತ್ತವೆ.

### ೪.೧.೨ ಕೃಷಿ ಸಹಕಾರಿ ಬ್ಯಾಂಕ್‌ನ ಸದಸ್ಯರಾಗಿರುವ ಪ್ರಧಾನ ಉದ್ದೇಶ

ಜನರು ತಮ್ಮ ಆರ್ಥಿಕ ಕಲ್ಯಾಣಕ್ಕಾಗಿ ಒಗ್ಗೂಡಿ ಆರ್ಥಿಕ ಕಾರ್ಯ ಚಟುವಟಿಕೆಗಳನ್ನು ಕೈಗೊಳ್ಳುತ್ತಾರೆ. ಸದಸ್ಯರ ಸೇವೆಯೇ ಸಹಕಾರದ ಮುಖ್ಯ ಗುರಿಯಾಗಿದೆ. ಸಂಘದ ಸದಸ್ಯರಲ್ಲಿ ಉಳಿತಾಯ, ಮಿತವ್ಯಯ, ಸ್ವಸಹಾಯ ಮತ್ತು ಸಹಕಾರಿ ಮನೋಭವನೆಯನ್ನುಂಟು

ಮಾಡುವುದೇ ಸಹಕಾರಿ ಸಂಘದ ಸಾಮಾನ್ಯ ಉದ್ದೇಶವಾಗಿದೆ. ಸಹಕಾರದ ಮೂಲಕ ವ್ಯಕ್ತಿಯು ತನ್ನ ಅಭಿವೃದ್ಧಿಯನ್ನು ಸಾಧಿಸುತ್ತಾನೆ. ವ್ಯಕ್ತಿಯ ಜೀವನದಲ್ಲಿ ಸಹಕಾರದ ಪಾತ್ರವು ಗಣನೀಯವಾಗಿದ್ದು ಅವನ ಉದ್ದೇಶವನ್ನು ಪೂರೈಸುವ ನಿಟ್ಟಿನಲ್ಲಿ ಇದು ಸಹಕಾರಿಯಾಗಿದೆ.

ಕೋಷ್ಟಕ ೪.೧.೨ ಸದಸ್ಯತನದ ಪ್ರಧಾನ ಉದ್ದೇಶ

| ಕ್ರಮ ಸಂಖ್ಯೆ | ಸದಸ್ಯತನದ ಪ್ರಧಾನ ಉದ್ದೇಶ | ಬಜಪೆ ವ್ಯವಸಾಯ ಸಹಕಾರಿ ಬ್ಯಾಂಕ್ | | ಕಿನ್ನಿಗೋಳಿ ವ್ಯವಸಾಯ ಸಹಕಾರಿ ಬ್ಯಾಂಕ್ | |
|---|---|---|---|---|---|
| | | ಸಂಖ್ಯೆ | ಶೇಕಡಾವಾರು ಪ್ರಮಾಣ | ಸಂಖ್ಯೆ | ಶೇಕಡಾವಾರು ಪ್ರಮಾಣ |
| ೧ | ಬ್ಯಾಂಕಿನ ಯೋಜನೆಗಳ ಫಲಾನುಭವಿಯಾಗುವುದು | ೫೪ | ೯೦ | ೪೧ | ೬೮.೩೩ |
| ೨ | ಮತಚಲಾಯಿಸುವುದು, ಸ್ಪರ್ಧಿಸುವುದು | ೦೦ | – | ೦೭ | ೧೧.೬೭ |
| ೩ | ಸಮಾಜಸೇವೆ | ೦೦ | – | ೦೦ | – |
| ೪ | ಎಲ್ಲವೂ | ೦೬ | ೧೦ | ೧೨ | ೨೦.೦೦ |
| | ಒಟ್ಟು | ೬೦ | ೧೦೦ | ೬೦ | ೧೦೦ |

ಮೂಲ: ಸಂಶೋಧನಾ ಕ್ಷೇತ್ರ ಕಾರ್ಯಾಧಾರಿತ ಮಾಹಿತಿ

ಕ್ಷೇತ್ರಕಾರ್ಯದ ಅಧ್ಯಯನದ ವಿವರಗಳು ತಿಳಿಸುವಂತೆ (ಕೋಷ್ಟಕ ೪.೧.೨ ರಲ್ಲಿ) ಬಜಪೆ ವ್ಯವಸಾಯ ಬ್ಯಾಂಕಿನ ಸದಸ್ಯರಾಗಿರುವ ಪ್ರಧಾನ ಉದ್ದೇಶ ಗಮನಿಸಿದಾಗ ಶೇಕಡಾ ೯೦ರಷ್ಟು ಸದಸ್ಯರು ಬ್ಯಾಂಕಿನ ಯೋಜನೆಗಳ ಫಲಾನುಭವಿಯಾಗುವುದು ತಮ್ಮ ಪ್ರಮುಖ ಉದ್ದೇಶವೆಂದು ತಿಳಿಸಿದ್ದಾರೆ. ಇದು ಕಿನ್ನಿಗೋಳಿ ವ್ಯವಸಾಯ ಬ್ಯಾಂಕಿನಲ್ಲಿ ಶೇಕಡಾ ೬೮ರಷ್ಟಿದೆ. ಹೆಚ್ಚಿನ ಸದಸ್ಯರು ಕೃಷಿ ಸಹಕಾರಿ ಬ್ಯಾಂಕು ನೀಡುವ ಹಲವು ಯೋಜನೆಗಳ ಸದುಪಯೋಗವನ್ನು ಪಡೆದುಕೊಳ್ಳುತ್ತಿರುವುದನ್ನು ಮೇಲಿನ ಕೋಷ್ಟಕದಿಂದ ಕಂಡುಕೊಳ್ಳಬಹುದಾಗಿದೆ. ಸದಸ್ಯರ ಪಾಲ್ಗೊಳ್ಳುವಿಕೆಯು ಕೃಷಿಯಲ್ಲಿನ ಅಭಿವೃದ್ಧಿಗೆ ಪೂರಕವಾದ ಅಂಶವಾಗಿದೆ.

### ೪.೧.೩ ಕೃಷಿ ಸಹಕಾರಿ ಬ್ಯಾಂಕ್‌ನ ಸದಸ್ಯರ/ ಫಲಾನುಭವಿಗಳ ಅನುಭವದ ವಿವರ

ಪ್ರಜಾಸತ್ತಾತ್ಮಕ ಆಡಳಿತವನ್ನು ಸಹಕಾರವು ಹೊಂದಿದ್ದು ಇಲ್ಲಿ ಸಂಘದ ಸದಸ್ಯನು ಪ್ರಜಾಪ್ರಭುತ್ವದ ಮೂಲ ತತ್ವಗಳಿಗನುಸಾರವಾಗಿ ವರ್ತಿಸುತ್ತಾನೆ. ಸದಸ್ಯರ ಸಕ್ರಿಯ ಪಾಲ್ಗೊಳ್ಳುವಿಕೆ ಸಂಘಗಳ ಬೆಳವಣಿಗೆಗೆ ಅವಶ್ಯವಾಗಿರುತ್ತದೆ. ಸಹಕಾರಿ ಸಂಘವು ಆರ್ಥಿಕ ಸಹಕಾರಕ್ಕೆ ಮಾತ್ರ

ಸೀಮಿತವಾಗಿರದೆ ವ್ಯಕ್ತಿಯ ಜೀವನ ವಿಕಾಸಕ್ಕೆ ಅವಕಾಶ ಮಾಡಿಕೊಡುತ್ತದೆ. ಸಹಕಾರಿ ತತ್ವದ ತಿಳುವಳಿಕೆಯು ಸದಸ್ಯರಲ್ಲಿನ ಸಹಕಾರಿ ಮನೋಭಾವವನ್ನು ಹೆಚ್ಚಿಸುತ್ತದೆ.

ಕೋಷ್ಟಕ ೪.೧.೩ ಕೃ.ಸ.ಬ್ಯಾಂ.ನಲ್ಲಿ ತಮ್ಮ ಅನುಭವ

| ಕ್ರಮ ಸಂಖ್ಯೆ | ಅನುಭವದ ವಿವರ | ಬಜಪೆ ವ್ಯವಸಾಯ ಸಹಕಾರಿ ಬ್ಯಾಂಕ್ | | ಕಿನ್ನಿಗೋಳಿ ವ್ಯವಸಾಯ ಸಹಕಾರಿ ಬ್ಯಾಂಕ್ | |
|---|---|---|---|---|---|
| | | ಸಂಖ್ಯೆ | ಶೇಕಡಾವಾರು ಪ್ರಮಾಣ | ಸಂಖ್ಯೆ | ಶೇಕಡಾವಾರು ಪ್ರಮಾಣ |
| ೧ | ಸಾಮಾನ್ಯ ಸದಸ್ಯನಾಗಿ | ೫೪ | ೯೦.೦೦ | ೫೫ | ೯೧.೬೭ |
| ೨ | ನಿರ್ದೇಶಕನಾಗಿ | ೦೦ | – | ೦೦ | – |
| ೩ | ಅಧ್ಯಕ್ಷ/ಪದಾಧಿಕಾರಿಯಾಗಿ | ೦೦ | – | ೦೦ | – |
| ೪ | ಎಲ್ಲವೂ | ೦೬ | ೧೦.೦೦ | ೭ | ೮.೩೩ |
| | ಒಟ್ಟು | ೬೦ | ೧೦೦ | ೬೦ | ೧೦೦ |

ಮೂಲ: ಸಂಶೋಧನಾ ಕ್ಷೇತ್ರ ಕಾರ್ಯಾಧಾರಿತ ಮಾಹಿತಿ

ಬಜಪೆ ವ್ಯವಸಾಯ ಬ್ಯಾಂಕಿನ ಶೇಕಡಾ ೯೦ರಷ್ಟು ಫಲಾನುಭವಿಗಳು ಬ್ಯಾಂಕಿನ ಪ್ರಾಥಮಿಕ ಸದಸ್ಯತ್ವವನ್ನು ಪಡೆದುಕೊಂಡು, ಅದು ಕಾಲದಿಂದ ಕಾಲಕ್ಕೆ ಅನುಷ್ಠಾನಗೊಳಿಸುವ ಯೋಜನೆಗಳ ಫಲಾನುಭವಿಗಳಾಗಿ ತಮ್ಮ ಅನುಭವವನ್ನು ಪಡೆದುಕೊಂಡಿರುವುದು ಎಂದು ತಿಳಿಸಿರುವುದನ್ನು ಕೋಷ್ಟಕ ೪.೧.೩ ದೃಢಪಡಿಸುತ್ತದೆ. ಶೇಕಡಾ ೯೨ರಷ್ಟು ಫಲಾನುಭವಿಗಳು ಸಾಮಾನ್ಯ ಸದಸ್ಯರಾಗಿ ತಮ್ಮ ಅನುಭವವನ್ನು ಪಡೆದುಕೊಂಡಿರುವುದು ಕಿನ್ನಿಗೋಳಿ ವ್ಯವಸಾಯ ಸಹಕಾರಿ ಬ್ಯಾಂಕಿನಿಂದ ತಾವು ಪಡೆದುಕೊಡ ಅನುಭವ ಎಂದು ನಮೂದಿಸಿರುವುದನ್ನು ಮೇಲಿನ ಕೋಷ್ಟಕವು ಪುಷ್ಟೀಕರಿಸುತ್ತದೆ. ಸದಸ್ಯತನದ ಅನುಭವವು ಸಹಕಾರಿ ತತ್ವವನ್ನು ತಿಳಿಯುವಲ್ಲಿ ಸದಸ್ಯರಿಗೆ ಅನುಕೂಲಕರವಾಗಿದೆ ಎಂಬುದು ಗಮನಾರ್ಹ ಅಂಶವಾಗಿದೆ.

**೪.೧.೪ ಕೃಷಿ ಸಹಕಾರಿ ಬ್ಯಾಂಕ್‌ನ ಚಟುವಟಿಕೆಗಳಲ್ಲಿ ಸದಸ್ಯರ/ಫಲಾನುಭವಿಗಳ ಭಾಗವಹಿಸುವಿಕೆಯ ವಿವರ**

ಸಹಕಾರ ಸಂಸ್ಥೆಯು ಜನತೆಯ ಒಕ್ಕೂಟವಾಗಿದೆ. ವ್ಯಕ್ತಿಯ ಸ್ವಸಾಮರ್ಥ್ಯವನ್ನು ಬೆಳೆಸಲು ಇದು ಸಹಾಯಕವಾಗಿದೆ. ಬ್ಯಾಂಕಿನ ಕಾರ್ಯ ನೀತಿ ರೂಪಿಸುವಲ್ಲಿ ಹಾಗೂ ತೀರ್ಮಾನಗಳನ್ನು ಕೈಗೊಳ್ಳುವಲ್ಲಿ ಸದಸ್ಯರ ಸಕ್ರಿಯ ಭಾಗವಹಿಸುವಿಕೆಯು ಪ್ರಮುಖವಾಗಿದೆ. ಸದಸ್ಯರ ನಿರಂತರ ಪಾಲ್ಗೊಳ್ಳುವಿಕೆಯು ಸಹಕಾರಿ ಬ್ಯಾಂಕಿನ ಸರ್ವತೋಮುಖ ಬೆಳವಣಿಗೆಗೆ ಅವಶ್ಯವಾಗಿದೆ.

ಕೋಷ್ಟಕ ೪.೧.೪ ಕೃಸ.ಬ್ಯಾಂ.ನಚಟುವಟಿಕೆಗಳಲ್ಲಿ ಭಾಗವಹಿಸುವಿಕೆ

| ಕ್ರಮ ಸಂಖ್ಯೆ | ಭಾಗವಹಿಸುವಿಕೆ ವಿವರ | ಬಜಪೆ ವ್ಯವಸಾಯ ಸಹಕಾರಿ ಬ್ಯಾಂಕ್ | | ಕಿನ್ನಿಗೋಳಿ ವ್ಯವಸಾಯ ಸಹಕಾರಿ ಬ್ಯಾಂಕ್ | |
|---|---|---|---|---|---|
| | | ಸಂಖ್ಯೆ | ಶೇಕಡಾವಾರು ಪ್ರಮಾಣ | ಸಂಖ್ಯೆ | ಶೇಕಡಾವಾರು ಪ್ರಮಾಣ |
| ೧ | ವಿರಳವಾಗಿ | ೧೨ | ೨೦.೦೦ | ೧೩ | ೨೧.೬೭ |
| ೨ | ನಿರಂತರವಾಗಿ ಮತ್ತು ಸಕ್ರಿಯವಾಗಿ | ೪೫ | ೭೫.೦೦ | ೩೮ | ೬೩.೩೩ |
| ೩ | ಧೋರಣೆಗಳ ರೂಪೀಕರಣದಲ್ಲಿ ನಿರ್ಣಾಯಕ ಪಾತ್ರ | ೦೩ | ೫.೦೦ | ೦೯ | ೧೫ |
| | ಒಟ್ಟು | ೬೦ | ೧೦೦ | ೬೦ | ೧೦೦ |

ಮೂಲ: ಸಂಶೋಧನಾ ಕ್ಷೇತ್ರ ಕಾರ್ಯಾಧಾರಿತ ಮಾಹಿತಿ

ಶೇಕಡಾ ೭೫ರಷ್ಟು ಫಲಾನುಭವಿಗಳು ಬಜಪೆ ವ್ಯವಸಾಯ ಬ್ಯಾಂಕಿನ ಕಾರ್ಯಚಟುವಟಿಕೆಗಳಲ್ಲಿ ನಿರಂತರವಾಗಿ ಮತ್ತು ಸಕ್ರಿಯವಾಗಿ ಭಾಗವಹಿಸುತ್ತಿರುವುದು ಮೇಲಿನ ಕೋಷ್ಟಕದಿಂದ ತಿಳಿದು ಬರುತ್ತದೆ. ಬ್ಯಾಂಕಿನ ಸರ್ವತೋಮುಖ ಬೆಳವಣಿಗೆಗೆ ಸದಸ್ಯರ ಸಕ್ರಿಯ ಪಾಲ್ಗೊಳ್ಳುವಿಕೆಯು ಅವಶ್ಯವಾಗಿದೆ. ಕಿನ್ನಿಗೋಳಿ ವ್ಯವಸಾಯ ಬ್ಯಾಂಕಿನ ಶೇಕಡಾ ೬೩ರಷ್ಟು ಫಲಾನುಭವಿಗಳು ಬ್ಯಾಂಕಿನ ಕಾರ್ಯಚಟುವಟಿಕೆಗಳಲ್ಲಿ ತಮ್ಮನ್ನು ನಿರಂತರವಾಗಿ ಮತ್ತು ಸಕ್ರಿಯವಾಗಿ ತೊಡಗಿಸಿಕೊಂಡಿರುವುದು ಅಧ್ಯಯನದಿಂದ ಅಭಿವ್ಯಕ್ತಗೊಂಡಿದೆ. ಸದಸ್ಯರ ಸಕ್ರಿಯ ಪಾಲ್ಗೊಳ್ಳುವಿಕೆಯು ಬ್ಯಾಂಕಿನ ಪ್ರಗತಿಯಲ್ಲಿ ಪಾತ್ರವಹಿಸುವ ಪ್ರಮುಖ ಅಂಶವಾಗಿದೆ.

**೪.೧.೫ ಸದಸ್ಯರ/ಫಲಾನುಭವಿಗಳು ವೈಯಕ್ತಿಕವಾಗಿ ಹೆಚ್ಚು ಮಹತ್ವ ನೀಡುವ ವಿಷಯದ ವಿವರ**

ಸಹಕಾರವು ವ್ಯಕ್ತಿಯ ಆರ್ಥಿಕಾಭಿವೃದ್ಧಿಗೆ ಪೂರಕವಾಗಿದೆ. ಇದು ಆತನ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಅಭಿವೃದ್ಧಿಯನ್ನು ಸಾಧಿಸುವಲ್ಲಿ ಸಹಾಯಕವಾಗಿದೆ. ಕೃಷಿ ಸಹಕಾರಿ ಬ್ಯಾಂಕಿನಿಂದ ಸಾಲ ಪಡೆದು ರೈತರು ಕೃಷಿ ಚಟುವಟಿಕೆಗಳನ್ನು ನಡೆಸುತ್ತಾರೆ. ಕೃಷಿ ಅಭಿವೃದ್ಧಿಯ ಜೊತೆಯಲ್ಲಿ ತಮ್ಮ ಆರ್ಥಿಕಾಭಿವೃದ್ಧಿಯನ್ನು ಸಾಧಿಸುವಲ್ಲಿ ಈ ಸಹಕಾರಿ ಬ್ಯಾಂಕುಗಳು ಅವರಿಗೆ ಸಹಾಯಕವಾಗಿದೆ ಎಂಬುದನ್ನು ಅಧ್ಯಯನವು ಪುಷ್ಟೀಕರಿಸುತ್ತದೆ.

ಕೋಷ್ಟಕ ೪.೧.೫ ವೈಯಕ್ತಿಕವಾಗಿ ಹೆಚ್ಚು ಮಹತ್ವ ನೀಡುವ ವಿಷಯ

| ಕ್ರಮ ಸಂಖ್ಯೆ | ವೈಯಕ್ತಿಕವಾಗಿ ಹೆಚ್ಚು ಮಹತ್ವ ನೀಡುವ ವಿಷಯ | ಬಜಪೆ ವ್ಯವಸಾಯ ಸಹಕಾರಿ ಬ್ಯಾಂಕ್ | | ಕ್ಕಿನ್ನಿಗೋಳಿ ವ್ಯವಸಾಯ ಸಹಕಾರಿ ಬ್ಯಾಂಕ್ | |
|---|---|---|---|---|---|
| | | ಸಂಖ್ಯೆ | ಶೇಕಡಾವಾರು ಪ್ರಮಾಣ | ಸಂಖ್ಯೆ | ಶೇಕಡಾವಾರು ಪ್ರಮಾಣ |
| ೧ | ಸಾಲ ಪಡೆಯುವುದು | ೩೨ | ೫೩.೩೩ | ೪೮ | ೮೦.೦೦ |
| ೨ | ಠೇವಣಿನೀಡುವುದು | ೧೮ | ೩೦.೦೦ | ೦೮ | ೧೩.೩೩ |
| ೩ | ಸಹಕಾರಿತತ್ವದ ಪ್ರಚಾರ | ೧೦ | ೧೬.೬೭ | ೦೪ | ೬.೬೭ |
| | ಒಟ್ಟು | ೬೦ | ೧೦೦ | ೬೦ | ೧೦೦ |

ಮೂಲ: ಸಂಶೋಧನಾ ಕ್ಷೇತ್ರ ಕಾರ್ಯಾಧಾರಿತ ಮಾಹಿತಿ

ಶೇಕಡಾ ೫೩ರಷ್ಟು ಫಲಾನುಭವಿಗಳು ವೈಯಕ್ತಿಕವಾಗಿ ಹೆಚ್ಚು ಮಹತ್ವ ನೀಡುವ ವಿಷಯ ಸಾಲಪಡೆಯುವುದು, ಶೇಕಡಾ ೩೦ರಷ್ಟು ಫಲಾನುಭವಿಗಳು ಠೇವಣಿ ನೀಡುವುದು ಮತ್ತು ಶೇಕಡಾ ೧೬ರಷ್ಟು ಫಲಾನುಭವಿಗಳು ಸಹಕಾರಿ ತತ್ವದ ಪ್ರಚಾರ ಮಾಡುವುದು ಎಂದು ಬಜಪೆ ವ್ಯವಸಾಯ ಬ್ಯಾಂಕಿನಲ್ಲಿ ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ಅಭಿಪ್ರಾಯಿಸಿರುವುದು ಮೇಲಿನ ಕೋಷ್ಟಕದಿಂದ ತಿಳಿದು ಬರುತ್ತದೆ. ಕಿನ್ನಿಗೋಳಿ ವ್ಯವಸಾಯ ಬ್ಯಾಂಕಿನ ಶೇಕಡಾ ೮೦ರಷ್ಟು ಫಲಾನುಭವಿಗಳು ವೈಯಕ್ತಿಕವಾಗಿ ಹೆಚ್ಚು ಮಹತ್ವ ನೀಡುವ ವಿಷಯ ಸಾಲಪಡೆಯುವುದು, ಶೇಕಡಾ ೧೩ರಷ್ಟು ಫಲಾನುಭವಿಗಳು ಠೇವಣಿನೀಡುವುದು ಮತ್ತು ಶೇಕಡಾ ೭ರಷ್ಟು ಫಲಾನುಭವಿಗಳು ಸಹಕಾರಿ ತತ್ವದ ಪ್ರಚಾರ ಮಾಡುವುದಾಗಿದೆ ಎಂದು ತಿಳಿಸಿರುವುದು ಮೇಲಿನ ಕೋಷ್ಟಕದಿಂದ ಸ್ಪಷ್ಟವಾಗುತ್ತದೆ.

ಎರಡೂ ಬ್ಯಾಂಕಿನ ಹೆಚ್ಚಿನ ಸದಸ್ಯರು ಬ್ಯಾಂಕು ನೀಡುವ ಎಲ್ಲಾ ರೀತಿಯ ಸಾಲ ಸೌಲಭ್ಯಗಳನ್ನು ಪಡೆಯುತ್ತಿರುವುದು ಗಮನಾರ್ಹ ಸಂಗತಿ. ಬ್ಯಾಂಕಿನ ಪ್ರಗತಿಯಲ್ಲಿ ಇದು ಪೂರಕವಾದ ಅಂಶವಾಗಿದೆ.

### ೪.೨ ಸದಸ್ಯರ/ಫಲಾನುಭವಿಗಳ ಪೂರಕ ಮಾಹಿತಿಗಳು

ಆಯ್ದ ಕೃಷಿ ಸಹಕಾರಿ ಬ್ಯಾಂಕುಗಳ ಸದಸ್ಯರ/ಫಲಾನುಭವಿಗಳಲ್ಲಿ ಕೃಷಿ ಸಹಕಾರಿ ಬ್ಯಾಂಕಿಗೆ ಸಂಬಂಧಪಟ್ಟಂತೆ ಪೂರಕ ಮಾಹಿತಿಗಳನ್ನು ಪ್ರಶ್ನಾವಳಿಯ ಮೂಲಕ ಕೇಳಲಾಯಿತು. ಮಾಹಿತಿದಾರರಿಗೆ ಅವರು ಸದಸ್ಯರಾಗಿರುವ ವ್ಯವಸಾಯ ಸಹಕಾರಿ ಬ್ಯಾಂಕುಗಳ ಬಗೆಗಿನ

ಮೂಹಿತಿಗಳಾದ ಬ್ಯಾಂಕಿನ ಸ್ವಂತ ಕಟ್ಟಡದ, ಬ್ಯಾಂಕು ಹೊಂದಿರುವ ಹೆಚ್ಚುವರಿ ಶಾಖೆಗಳು, ಚುನಾವಣೆಗಳು, ಲೆಕ್ಕಪತ್ರಗಳು ಮತ್ತು ಲಾಭಾಂಶಗಳ ಬಗ್ಗೆ ಮಾಹಿತಿ ಇದೆಯೇ? ಎಂದು ಪ್ರಶ್ನಿಸಲಾಯಿತು.ಮಾಹಿತಿದಾರರು ನೀಡಿದ ಉತ್ತರವನ್ನು ಈ ಕೆಳಗಿನ ಕೋಷ್ಟಕಗಳಲ್ಲಿ ವಿಶ್ಲೇಷಿಸಲಾಗಿದೆ.

### ೪.೨.೧ ಸದಸ್ಯರಾಗಿರುವ ಕೃ.ಸ.ಬ್ಯಾಂ.ನ ಸ್ವಂತ ಕಟ್ಟಡದ ಬಗೆಗಿನ ಮಾಹಿತಿಯ ವಿವರ

ಸಹಕಾರಿ ಬ್ಯಾಂಕುಗಳ ಬೆಳವಣಿಗೆಗೆ ಮೂಲಭೂತ ಸೌಕರ್ಯಗಳು ಅತ್ಯಗತ್ಯ. ಬಹುತೇಕ ಕೃಷಿ ಸಹಕಾರಿ ಬ್ಯಾಂಕುಗಳು ಬಾಡಿಗೆ ಕಟ್ಟಡದಲ್ಲಿ ತನ್ನ ದಿನನಿತ್ಯದ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದೆ ಹಾಗೂ ಮೂಲಭೂತ ಸೌಕರ್ಯಗಳ ಕೊರತೆ ಅನುಭವಿಸುತ್ತಿದೆ. ಬ್ಯಾಂಕಿನ ಕಾರ್ಯ ವ್ಯಾಪ್ತಿಯ ಕ್ಷೇತ್ರೀಕರಣ ಮತ್ತು ಪ್ರಗತಿಗೆ ಸಕಾಲದಲ್ಲಿ ಸ್ವಂತ ಕಟ್ಟಡವನ್ನು ಹೊಂದುವುದು ಅಗತ್ಯ ಮತ್ತು ಅನಿವಾರ್ಯ ಕೂಡ.

ಕೋಷ್ಟಕ ೪.೨.೧ ಸದಸ್ಯರಾಗಿರುವ ಕೃ.ಸ.ಬ್ಯಾಂ.ಗೆ ಸ್ವಂತ ಕಟ್ಟಡದ ಬಗೆಗಿನ ಮಾಹಿತಿಯ ವಿವರ

| ಕ್ರಮ ಸಂಖ್ಯೆ | ಕಟ್ಟಡದ ವಿವರ | ಬಜಪೆ ವ್ಯವಸಾಯ ಸಹಕಾರಿ ಬ್ಯಾಂಕ್ | | ಕ್ಕಿನ್ನಿಗೋಳಿ ವ್ಯವಸಾಯ ಸಹಕಾರಿ ಬ್ಯಾಂಕ್ | |
|---|---|---|---|---|---|
| | | ಸಂಖ್ಯೆ | ಶೇಕಡಾವಾರು ಪ್ರಮಾಣ | ಸಂಖ್ಯೆ | ಶೇಕಡಾವಾರು ಪ್ರಮಾಣ |
| ೧ | ಇದೆ | ೬೦ | ೧೦೦ | ೬೦ | ೧೦೦ |
| ೨ | ಇಲ್ಲ | ೦೦ | – | ೦೦ | – |
| | **ಒಟ್ಟು** | **೬೦** | **೧೦೦** | **೬೦** | **೧೦೦** |

ಮೂಲ: ಸಂಶೋಧನಾ ಕ್ಷೇತ್ರ ಕಾರ್ಯಾಧಾರಿತ ಮಾಹಿತಿ

ಅಧ್ಯಯನಕ್ಕೆ ಆಯ್ದುಕೊಂಡ ಎರಡೂ ಬ್ಯಾಂಕು ಸಕಾಲದಲ್ಲಿ ತನಗೆ ಬೇಕಾದ ಸ್ವಂತ ಕಟ್ಟಡವನ್ನು ಹೊಂದಿದ್ದು ಸ್ವತಂತ್ರವಾಗಿ ಬ್ಯಾಂಕಿನ ವಹಿವಾಟುಗಳನ್ನು ನಡೆಸಿಕೊಂಡು ಬರುತ್ತಿದೆ. ಬ್ಯಾಂಕಿನ ಸದಸ್ಯರಲ್ಲಿ ಈ ಬಗ್ಗೆ ಮಾಹಿತಿಯನ್ನು ಕೇಳಿದಾಗ ಎಲ್ಲಾ ಸದಸ್ಯರು ಈ ಬಗ್ಗೆ ತಮ್ಮ ಅರಿಯುವಿಕೆಯನ್ನು ವ್ಯಕ್ತಪಡಿಸಿದ್ದಾರೆ.

ಬಜಪೆ ವ್ಯವಸಾಯ ಸಹಕಾರಿ ಬ್ಯಾಂಕ್ ತನ್ನ ಸ್ವಂತ ಕೇಂದ್ರ ಕಛೇರಿ ಕಟ್ಟಡ ಮಾತ್ರವಲ್ಲದೆ ಬಜ್ಪೆ ಪಂಚಾಯತ್ ಬಳಿ ೧೨ ಸೆಂಟ್ಸ್ ಜಾಗ ಮತ್ತು ೧೦೦ಟನ್ ಸಾಮರ್ಥ್ಯದ ಗೋದಾಮು

ಹೊಂದಿರುತ್ತದೆ.ಎಕ್ಕಾರು ಶಾಖೆ ಕೂಡ ಸ್ವಂತ ಕಟ್ಟಡದಲ್ಲಿದ್ದು ಪೆರಾರದಲ್ಲಿ ಒಂದು ಎಕ್ರೆ ಜಮೀನು ಮತ್ತು ೫೦ಟನ್ ಸಾಮರ್ಥ್ಯದ ಗೋದಾಮನ್ನು ಹೊಂದಿರುತ್ತದೆ.

**೪.೨.೨ ಸದಸ್ಯರಾಗಿರುವ ಕೃಷಿ ಸಹಕಾರಿ ಬ್ಯಾಂಕ್‌ನ ಹೆಚ್ಚುವರಿ ಶಾಖೆಗಳ ಬಗೆಗಿನ ಮಾಹಿತಿಯ ವಿವರ**

ಸಹಕಾರಿ ವ್ಯವಸ್ಥೆಯು ಸಹಕಾರಿ ಆರ್ಥಿಕತೆಯಾಗಿದ್ದು ಇದು ಮುಖ್ಯವಾಗಿ ಇರಬೇಕಾದ ಸ್ವಸಹಾಯ ಹಾಗೂ ಪರಸ್ಪರ ಸಹಾಯವನ್ನು ಆಧರಿಸಿ ವ್ಯವಹರಿಸಲ್ಪಡುತ್ತದೆ. ಸಹಕಾರಿ ವ್ಯವಸ್ಥೆಯಲ್ಲಿ ನಿರ್ವಹಣೆಯು ವಿಕೇಂದ್ರೀಕೃತ ಮತ್ತು ಪ್ರಜಾಪ್ರಭುತ್ವ ಸ್ವರೂಪದ್ದಾಗಿದ್ದು ಇಲ್ಲಿ ಸದಸ್ಯರು ಪ್ರಜಾಸತ್ತಾತ್ಮಕ ವಿಧಿ ವಿಧಾನಗಳ ಮೂಲಕ ನಿರ್ವಹಣೆ ಮಾಡುತ್ತಾರೆ. ಬ್ಯಾಂಕು ಹೆಚ್ಚುವರಿ ಶಾಖೆಗಳನ್ನು ಹೊಂದುವುದು ಬ್ಯಾಂಕಿನ ಪ್ರಗತಿಯ ದ್ಯೋತಕವಾಗಿದೆ.

ಕೋಷ್ಟಕ ೪.೨.೨ ಸದಸ್ಯರಾಗಿರುವ ಕೃ.ಸ.ಬ್ಯಾಂ.ಗೆ ಹೆಚ್ಚುವರಿ ಶಾಖೆಗಳ ಬಗೆಗಿನ ಮಾಹಿತಿಯ ವಿವರ

| ಕ್ರಮ ಸಂಖ್ಯೆ | ಶಾಖೆಗಳ ವಿವರ | ಬಜಪೆ ವ್ಯವಸಾಯ ಸಹಕಾರಿ ಬ್ಯಾಂಕ್ | | ಕ್ಕಿನ್ನಿಗೋಳಿ ವ್ಯವಸಾಯ ಸಹಕಾರಿ ಬ್ಯಾಂಕ್ | |
|---|---|---|---|---|---|
| | | ಸಂಖ್ಯೆ | ಶೇಕಡಾವಾರು ಪ್ರಮಾಣ | ಸಂಖ್ಯೆ | ಶೇಕಡಾವಾರು ಪ್ರಮಾಣ |
| ೧ | ಇದೆ | ೬೦ | ೧೦೦ | ೬೦ | ೧೦೦ |
| ೨ | ಇಲ್ಲ | ೦೦ | – | ೦೦ | – |
| | **ಒಟ್ಟು** | **೬೦** | **೧೦೦** | **೬೦** | **೧೦೦** |

ಮೂಲ: ಸಂಶೋಧನಾ ಕ್ಷೇತ್ರ ಕಾರ್ಯಾಧಾರಿತ ಮಾಹಿತಿ

ಬಜಪೆ ವ್ಯವಸಾಯ ಸಹಕಾರಿ ಬ್ಯಾಂಕ್‌ಗೆ ಹೆಚ್ಚುವರಿ ಶಾಖೆಗಳು ಹೊಂದಿದೆ. ಬ್ಯಾಂಕಿನ ಕೇಂದ್ರ ಕಛೇರಿ ಬಜಪೆಯಲ್ಲಿದ್ದು, ಬ್ಯಾಂಕು ಜೋಕಟ್ಟೆ, ಎಕ್ಕಾರು, ಮತ್ತು ಕಿನ್ನಿಕಂಬಳದಲ್ಲಿ ಶಾಖೆಗಳನ್ನು ಹೊಂದಿರುವುದು ಬ್ಯಾಂಕಿನ ಎಲ್ಲಾ ಸದಸ್ಯರಿಗೆ ತಿಳಿದಿರುವುದು ಅಧ್ಯಯನದಿಂದ ತಿಳಿದು ಬರುತ್ತದೆ. ಕಿನ್ನಿಗೋಳಿ ವ್ಯವಸಾಯ ಸಹಕಾರಿ ಬ್ಯಾಂಕಿನ ಕೇಂದ್ರ ಕಛೇರಿ ಕಿನ್ನಿಗೋಳಿಯಲ್ಲಿದ್ದು, ದಾಮಸ್ಕಟ್ಟೆಯಲ್ಲಿ ಶಾಖೆಯನ್ನು ಹೊಂದಿದೆ ಮತ್ತು ಸದ್ಯದಲ್ಲೇ ಪಕ್ಷಿಕೆರೆಯಲ್ಲಿ ಹೊಸ ಶಾಖೆಯನ್ನು ತೆರೆಯಲು ಎಲ್ಲಾ ಸಿದ್ದತೆಗಳನ್ನು ಮಾಡಿಕೊಂಡಿದೆ. ಇದು ಬ್ಯಾಂಕು ಪ್ರಗತಿ ಪಥದಲ್ಲಿ ಸಾಗುತ್ತಿರುವುದರ ಸೂಚಕವಾಗಿದೆ.

### ೪.೨.೩ ಸದಸ್ಯರಾಗಿರುವ ಕೃ.ಸ.ಬ್ಯಾಂ.ಗೆ ಇತರ ಮೂಲಗಳಿಂದ ಪುನರ್ವಿತ್ತ(refinancing facility)ಸೌಲಭ್ಯ

ಸಹಕಾರಿ ಸಂಘಗಳ ಬೆಳವಣಿಗೆಗೆ ಸರ್ಕಾರದಿಂದ ದೊರಕುವ ಸಹಾಯಧನವು ಅತ್ಯವಶ್ಯವಾಗಿದೆ. ಕೃಷಿ ಸಹಕಾರಿ ಬ್ಯಾಂಕುಗಳಿಗೆ ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ, ರಿಸರ್ವ್ ಬ್ಯಾಂಕ್ ಹಾಗು ನಬಾರ್ಡ್‌ನಿಂದ ಪುನರ್ವಿತ್ತ ಸೌಲಭ್ಯಗಳು ದೊರಕುತ್ತದೆ. ಇದು ಬ್ಯಾಂಕಿನ ಪ್ರಗತಿಗೆ ಹಾಗೂ ಕೃಷಿ ಅಭಿವೃದ್ಧಿಗೆ ಪೂರಕವಾಗುವ ಅಂಶವಾಗಿದೆ.

ಕೋಷ್ಟಕ ೪.೨.೩ ಸದಸ್ಯರಾಗಿರುವ ಕೃ.ಸ.ಬ್ಯಾಂ.ಗೆ ಇತರ ಮೂಲಗಳಿಂದ ಪುನರ್ವಿತ್ತ ವಿವರ

| ಕ್ರಮ ಸಂಖ್ಯೆ | ಪುನರ್ವಿತ್ತ ವಿವರ | ಬಜಪೆ ವ್ಯವಸಾಯ ಸಹಕಾರಿ ಬ್ಯಾಂಕ್ | | ಕಿನ್ನಿಗೋಳಿ ವ್ಯವಸಾಯ ಸಹಕಾರಿ ಬ್ಯಾಂಕ್ | |
|---|---|---|---|---|---|
| | | ಸಂಖ್ಯೆ | ಶೇಕಡಾವಾರು ಪ್ರಮಾಣ | ಸಂಖ್ಯೆ | ಶೇಕಡಾವಾರು ಪ್ರಮಾಣ |
| ೧ | ಇದೆ | ೪೧ | ೬೮.೩೩ | ೫೨ | ೮೬.೬೭ |
| ೨ | ಇಲ್ಲ | ೧೯ | ೩೧.೬೭ | ೦೮ | ೧೩.೩೩ |
| | ಒಟ್ಟು | ೬೦ | ೧೦೦ | ೬೦ | ೧೦೦ |

ಮೂಲ: ಸಂಶೋಧನಾ ಕ್ಷೇತ್ರ ಕಾರ್ಯಾಧಾರಿತ ಮಾಹಿತಿ

ಶೇಕಡಾ ೬೮ರಷ್ಟು ಫಲಾನುಭವಿಗಳು ಈ ಸೌಲಭ್ಯಗಳು ಬಜಪೆ ವ್ಯವಸಾಯ ಬ್ಯಾಂಕ್‌ಗೆ ದೊರಕಿದೆ ಎಂದೂ, ಶೇಕಡಾ ೮೭ರಷ್ಟು ಫಲಾನುಭವಿಗಳು ಇಂತಹ ಸೌಲಭ್ಯಗಳು ಕಿನ್ನಿಗೋಳಿ ವ್ಯವಸಾಯ ಬ್ಯಾಂಕ್‌ಗೆ ದೊರಕಿದೆ ಎಂದು ನಮೂದಿಸಿರುವುದು ಕೋಷ್ಟಕ ೪.೨.೩ ರಿಂದ ಅಭಿವ್ಯಕ್ತಗೊಳ್ಳುತ್ತದೆ.

### ೪.೨.೪ ಸದಸ್ಯರಾಗಿರುವ ಕೃ.ಸ.ಬ್ಯಾಂ.ನಲ್ಲಿ ಸಕಾಲಕ್ಕೆ ಚುನಾವಣೆಗಳ ಬಗೆಗಿನ ಮಾಹಿತಿಯ ವಿವರ

ಸಹಕಾರಿ ಸಂಘಟನೆಯಲ್ಲಿ ಪ್ರಜಾಸತ್ತಾತ್ಮಕ ನಿಯಂತ್ರಣವಿರುತ್ತದೆ. ಪ್ರತಿಯೊಬ್ಬ ಸದಸ್ಯನಿಗೂ ಒಂದೇ ಒಂದು ಮತದ ಹಕ್ಕಿರುತ್ತದೆ.ಅಲ್ಲದೆ ಸಹಕಾರಿ ಸಂಸ್ಥೆಗಳು ಪ್ರಜಾಪ್ರಭುತ್ವದ ತಳಹದಿಯ ಮೇಲೆ ಸ್ಥಾಪಿತವಾದ ಸಂಸ್ಥೆಗಳಾಗಿದ್ದು ಅದು ಸದಸ್ಯರ ನಿಯಂತ್ರಣಕ್ಕೊಳಪಟ್ಟಿರುತ್ತದೆ.ಈ ಸಂಸ್ಥೆಗಳ ಚುನಾಯಿತ ಪ್ರತಿನಿಧಿಗಳು ಸದಸ್ಯರಿಗೆ ಜವಾಬ್ದಾರರಾಗಿರುತ್ತಾರೆ.

ಕೋಷ್ಟಕ ೪.೨.೪ ಸದಸ್ಯರಾಗಿರುವ ಕೃ.ಸ.ಬ್ಯಾಂ.ನಲ್ಲಿ ಸಕಾಲಕ್ಕೆ ಚುನಾವಣೆಗಳ ಬಗೆಗಿನ ಮಾಹಿತಿಯ ವಿವರ

| ಕ್ರಮ ಸಂಖ್ಯೆ | ಚುನಾವಣೆಗಳ ವಿವರ | ಬಜಪೆ ವ್ಯವಸಾಯ ಸಹಕಾರಿ ಬ್ಯಾಂಕ್ | | ಕ್ಕಿನ್ನಿಗೋಳಿ ವ್ಯವಸಾಯ ಸಹಕಾರಿ ಬ್ಯಾಂಕ್ | |
|---|---|---|---|---|---|
| | | ಸಂಖ್ಯೆ | ಶೇಕಡಾವಾರು ಪ್ರಮಾಣ | ಸಂಖ್ಯೆ | ಶೇಕಡಾವಾರು ಪ್ರಮಾಣ |
| ೧ | ಇದೆ | ೬೦ | ೧೦೦ | ೬೦ | ೧೦೦ |
| ೨ | ಇಲ್ಲ | ೦೦ | – | ೦೦ | – |
| | **ಒಟ್ಟು** | **೬೦** | **೧೦೦** | **೬೦** | **೧೦೦** |

ಮೂಲ: ಸಂಶೋಧನಾ ಕ್ಷೇತ್ರ ಕಾರ್ಯಾಧಾರಿತ ಮಾಹಿತಿ

ಸಹಕಾರಿ ಬ್ಯಾಂಕುಗಳು ಕಾಲ ಕಾಲಕ್ಕೆ ಚುನಾವಣೆಗಳನ್ನು ನಡೆಸುತ್ತದೆ ಹಾಗೂ ಈ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಸದಸ್ಯರಿಗೆ ನೀಡುತ್ತಿರುವುದು ಈ ಅಧ್ಯಯನದಿಂದ(ಕೋಷ್ಟಕ ೪.೨.೪) ತಿಳಿದು ಬರುತ್ತದೆ. ಬ್ಯಾಂಕಿನ ಸದಸ್ಯರು ಕಾರ್ಯ ನೀತಿಯನ್ನು ರಚಿಸುವಲ್ಲಿ ಮತ್ತು ಬ್ಯಾಂಕಿನ ಅಭಿವೃದ್ಧಿಯಲ್ಲಿ ಜವಾಬ್ದಾರಿಯುತವಾಗಿ ಪಾಲ್ಗೊಳ್ಳುತ್ತಿರುವುದು ಗಮನಿಸಬೇಕಾದ ಅಂಶವಾಗಿದೆ.

**೪.೨.೫ ಸದಸ್ಯರಾಗಿರುವ ಕೃ.ಸ.ಬ್ಯಾಂ.ನಲ್ಲಿ ಸಕಾಲಕ್ಕೆ ಲೆಕ್ಕಪತ್ರಗಳ ಮಂಡನೆ/ ಪರಿಶೋಧನೆ/ ಲಾಭಾಂಶ ವಿತರಣೆಯ ಮಾಹಿಯ ವಿವರ**

ಸಹಕಾರಿ ವ್ಯವಸ್ಥೆಯಲ್ಲಿ ಲಾಭ ಮತ್ತು ಉಳಿತಾಯವು ಸದಸ್ಯರಿಗೆ ಸೇರಿರುತ್ತದೆ. ಸಹಕಾರಿ ಬ್ಯಾಂಕ್ ಅಧಿಕೃತ ಲೆಕ್ಕ ಪರಿಶೋಧಕರಿಂದ ಸಕಾಲದಲ್ಲಿ ಲೆಕ್ಕ ಪರಿಶೋಧನೆ ಮಾಡಿಸಿ ವರದಿಯನ್ನು ಪಡೆಯಲಾಗುತ್ತದೆ. ಅಲ್ಲದೆ ಬ್ಯಾಂಕು ತನ್ನ ವರದಿಯನ್ನು ಎಲ್ಲಾ ಸದಸ್ಯರಿಗೂ ವರ್ಷದ ಕೊನೆಯಲ್ಲಿ ತಪ್ಪದೆ ಕಳುಹಿಸಿ ಕೊಡುತ್ತದೆ. ಇದರಿಂದಾಗಿ ಬ್ಯಾಂಕಿನ ಎಲ್ಲಾ ಸದಸ್ಯರಿಗೆ ಬ್ಯಾಂಕು ಪ್ರಗತಿ ಪಥದಲ್ಲಿ ಸಾಗಿತ್ತಿದೆಯೋ ಇಲ್ಲವೋ ಎಂದು ತಿಳಿಯಲು ಸಾಧ್ಯವಾಗುತ್ತದೆ.

ಕೋಷ್ಟಕ ೪.೨.೫ ಸದಸ್ಯರಾಗಿರುವ ಕೃ.ಸ.ಬ್ಯಾಂ.ನಲ್ಲಿ ಸಕಾಲಕ್ಕೆ ಲೆಕ್ಕಪತ್ರಗಳ ಮಂಡನೆ/ಪರಿಶೋಧನೆ/ಲಾಭಾಂಶ ವಿತರಣೆ

| ಕ್ರಮ ಸಂಖ್ಯೆ | ಲೆಕ್ಕಪತ್ರಗಳ ಮಂಡನೆ/ ಪರಿಶೋಧನೆ/ ಲಾಭಾಂಶ ವಿತರಣೆ ವಿವರ | ಬಜಪೆ ವ್ಯವಸಾಯ ಸಹಕಾರಿ ಬ್ಯಾಂಕ್ | | ಕಿನ್ನಿಗೋಳಿ ವ್ಯವಸಾಯ ಸಹಕಾರಿ ಬ್ಯಾಂಕ್ | |
|---|---|---|---|---|---|
| | | ಸಂಖ್ಯೆ | ಶೇಕಡಾವಾರು ಪ್ರಮಾಣ | ಸಂಖ್ಯೆ | ಶೇಕಡಾವಾರು ಪ್ರಮಾಣ |
| ೧ | ಇದೆ | ೬೦ | ೧೦೦ | ೬೦ | ೧೦೦ |
| ೨ | ಗೊತ್ತಿಲ್ಲ | ೦೦ | – | ೦೦ | – |
| | **ಒಟ್ಟು** | **೬೦** | **೧೦೦** | **೬೦** | **೧೦೦** |

ಮೂಲ: ಸಂಶೋಧನಾ ಕ್ಷೇತ್ರ ಕಾರ್ಯಾಧಾರಿತ ಮಾಹಿತಿ

ಕೃಷಿ ಸಹಕಾರಿ ಬ್ಯಾಂಕ್‌ನಲ್ಲಿ ಲೆಕ್ಕಪತ್ರಗಳ ಮಂಡನೆ/ಪರಿಶೋಧನೆ/ಲಾಭಾಂಶ ವಿತರಣೆ ವಿವರವನ್ನು ಗಮನಿಸಿದಾಗ ಬಜಪೆ ಹಾಗೂ ಕಿನ್ನಿಗೋಳಿ ಬ್ಯಾಂಕುಗಳೆರಡೂ ಈ ಬಗ್ಗೆ ತನ್ನ ಸದಸ್ಯರಿಗೆ ಸಂಪೂರ್ಣ ಮಾಹಿತಿಯನ್ನು ನೀಡುತ್ತಿರುವುದುತಿಳಿದು ಬರುತ್ತದೆ. ಬ್ಯಾಂಕಿನ ಕಾರ್ಯಚಟುವಟಿಕೆಗಳ ಬಗ್ಗೆ ತಿಳಿಯ ಪಡಿಸಲು ವರ್ಷದ ಕೊನೆಗೆ ತಪ್ಪದೆ ತನ್ನ ವಾರ್ಷಿಕ ವರದಿಯನ್ನು ಸದಸ್ಯರಿಗೆ ಕಳಹಿಸಿಕೊಡುತ್ತಿದೆ. ಅಧಿಕೃತ ಲೆಕ್ಕ ಪರಿಶೋಧಕರಿಂದ ಸಕಾಲದಲ್ಲಿ ಲೆಕ್ಕ ಪರಿಶೋಧನೆ ಮಾಡಿಸಿ ವರದಿಯನ್ನು ಪಡೆಯಲಾಗುತ್ತದೆ.

### ೪.೩ ಕೃಷಿ ಸಹಕಾರಿ ಬ್ಯಾಂಕ್‌ನ ಚಟುವಟಿಕೆಗಳು

ಕರ್ನಾಟಕದ ಗ್ರಾಮೀಣ ಅರ್ಥವ್ಯವಸ್ಥೆಯಲ್ಲಿ ಕೃಷಿಯು ಮಹತ್ತರ ಪಾತ್ರವಹಿಸುತ್ತದೆ. ಕೃಷಿ ಸಹಕಾರ ಸಂಘಗಳು ರೈತರಿಗೆ ಸಾಲ ಕೊಡುವುದು ಹಾಗೂ ಅವರಿಂದ ಸಾಲ ವಸೂಲಾತಿ ಮಾಡುವುದಲ್ಲದೆ ರೈತರಿಗೆ ಬೇಕಾದ ಬಿತ್ತನೆ ಬೀಜ, ಗೊಬ್ಬರ, ಕೀಟನಾಶಕ, ಔಷಧಿ, ಸಕ್ಕರೆ, ಸೀಮೆ ಎಣ್ಣೆ, ಆಹಾರಧಾನ್ಯಗಳನ್ನು ಒದಗಿಸುತ್ತಾ ಬಂದಿದೆ. ಕೃಷಿ ಸಹಕಾರಿ ಬ್ಯಾಂಕುಗಳು ವಿವಿಧ ರೀತಿಯ ಕೃಷಿ ಮತ್ತು ಗ್ರಾಮೀಣ ಅಭಿವೃಧ್ಧಿ ಸಾಲಗಳನ್ನು ನಿಡುತ್ತಿದೆ. ಇವು ಮುಖ್ಯವಾಗಿ ಬೆಳೆ ಸಾಲ, ಪಂಪ್ಸೆಟ್ ಸಾಲ ಹಾಗೂ ಟ್ರಾಕ್ಟರ್ ಸಾಲಗಳನ್ನೊಳಗೊಂಡಿದೆ. ಇದು ಕೃಷಿ ಮತ್ತು ಗ್ರಾಮೀಣ ಅಭಿವೃಧ್ಧಿಗೆ ಪೂರಕವಾಗಿದೆ.

### ೪.೩.೧.ಅ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಸಾಲದ ಅವಧಿಯ ವಿವರ

ಕೃಷಿಯು ಕರ್ನಾಟಕದ ಗ್ರಾಮೀಣ ಅರ್ಥವ್ಯವಸ್ಥೆಯಲ್ಲಿ ಮಹತ್ತರ ಪಾತ್ರವಹಿಸುತ್ತದೆ. ಗ್ರಾಮೀಣಾಭಿವೃದ್ಧಿಯಲ್ಲಿ ಕೃಷಿ ಮತ್ತು ರೈತರ ಪಾತ್ರವನ್ನು ವಿಶೇಷವಾಗಿ ಗುರುತಿಸಬಹುದು ಕೃಷಿ ಸಹಕಾರಿ ಬ್ಯಾಂಕುಗಳು ಅನೇಕ ರೀತಿಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಸಾಲಗಳನ್ನು ನೀಡುತ್ತಿದೆ. ಇದು ಅಲ್ಪಾವಧಿ, ಮಧ್ಯಾವಧಿ ಹಾಗೂ ದೀರ್ಘಾವಧಿ ಸಾಲಗಳನ್ನೊಳಗೊಂಡಿದೆ.

ಕೋಷ್ಟಕ೪.೩.೧.ಅ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಸಾಲದ ಅವಧಿ

| ಕ್ರಮ ಸಂಖ್ಯೆ | ಸಾಲದ ಅವಧಿ | ಬಜಪೆ ವ್ಯವಸಾಯ ಸಹಕಾರಿ ಬ್ಯಾಂಕ್ | | ಕಿನ್ನಿಗೋಳಿ ವ್ಯವಸಾಯ ಸಹಕಾರಿ ಬ್ಯಾಂಕ್ | |
|---|---|---|---|---|---|
| | | ಸಂಖ್ಯೆ | ಶೇಕಡಾವಾರು ಪ್ರಮಾಣ | ಸಂಖ್ಯೆ | ಶೇಕಡಾವಾರು ಪ್ರಮಾಣ |
| ೧ | ಅಲ್ಪಾವಧಿ | ೧೯ | ೩೧.೬೭ | ೩೩ | ೫೫.೦೦ |
| ೨ | ಮಧ್ಯಾವಧಿ | ೨೮ | ೪೬.೬೭ | ೨೭ | ೪೫.೦೦ |
| ೩ | ದೀರ್ಘಾವಧಿ | ೧೩ | ೨೧.೬೬ | ೦೦ | – |
| | ಒಟ್ಟು | ೬೦ | ೧೦೦ | ೬೦ | ೧೦೦ |

ಮೂಲ: ಸಂಶೋಧನಾ ಕ್ಷೇತ್ರ ಕಾರ್ಯಾಧಾರಿತ ಮಾಹಿತಿ

ಈ ಅಧ್ಯಯನದಿಂದ ತಿಳಿಯುವಂತೆ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಸಾಲ ಶೇಕಡಾ ೩೧ರಷ್ಟು ಫಲಾನುಭವಿಗಳು ಬ್ಯಾಂಕಿನಿಂದ ಅಲ್ಪಾವಧಿ ಸಾಲವನ್ನೂ, ಶೇಕಡಾ ೪೭ರಷ್ಟು ಫಲಾನುಭವಿಗಳು ಮಧ್ಯಾವಧಿ ಸಾಲವನ್ನೂ ಹಾಗೂ ಶೇಕಡಾ ೨೨ರಷ್ಟು ಫಲಾನುಭವಿಗಳು ದೀರ್ಘಾವಧಿ ಸಾಲವನ್ನು ಬಜಪೆ ವ್ಯವಸಾಯ ಸಹಕಾರಿ ಬ್ಯಾಂಕ್‌ನಿಂದ ಪಡೆದುಕೊಂಡಿದ್ದಾರೆ. ಕಿನ್ನಿಗೋಳಿ ವ್ಯವಸಾಯ ಬ್ಯಾಂಕಿನ ಶೇಕಡಾ ೫೫ರಷ್ಟು ಫಲಾನುಭವಿಗಳು ಬ್ಯಾಂಕಿನಿಂದ ಅಲ್ಪಾವಧಿ ಸಾಲವನ್ನೂ, ಶೇಕಡಾ ೪೫ರಷ್ಟು ಫಲಾನುಭವಿಗಳು ಮಧ್ಯಾವಧಿ ಸಾಲವನ್ನು ಪಡೆದುಕೊಂಡಿರುವುದನ್ನು ಮೇಲಿನ ಕೋಷ್ಟಕದಿಂದ ತಿಳಿಯಬಹುದಾಗಿದೆ. ಎರಡೂ ಬ್ಯಾಂಕಿನ ಹೆಚ್ಚಿನ ಫಲಾನುಭವಿಗಳು ತಮಗೆ ಅಗತ್ಯವಿರುವ ಬಂಡವಾಳವನ್ನು ಅಲ್ಪಾವಧಿ ಮತ್ತು ಮಧ್ಯಮಾವಧಿ ಸಾಲದ ರೂಪದಲ್ಲಿ ಪಡೆಯುತ್ತಿರುವುದನ್ನು ಕಾಣಬಹುದಾಗಿದೆ.

### ೪.೩.೧.ಆ.ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಸಾಲದ ಪ್ರಮಾಣದ ವಿವರ

ಕೃಷಿ ಸಹಕಾರಿ ಬ್ಯಾಂಕುಗಳು ರೈತರಿಗೆ ಅಗತ್ಯವಿರುವ ಅನೇಕ ರೀತಿಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಸಾಲಗಳನ್ನು ವಿವಿಧ ಪ್ರಮಾಣದಲ್ಲಿ ನೀಡುತ್ತಿದೆ. ಇದು ಸಣ್ಣ ಪ್ರಮಾಣ, ಮಧ್ಯಪ್ರಮಾಣ ಮತ್ತು ಹೆಚ್ಚು ಪ್ರಮಾಣವನ್ನೊಳಗೊಂಡಿದೆ.

ಕೋಷ್ಟಕ ೪.೩.೧.ಆ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಸಾಲದ ಪ್ರಮಾಣ

| ಕ್ರಮ ಸಂಖ್ಯೆ | ಸಾಲದ ಪ್ರಮಾಣ | ಬಜಪೆ ವ್ಯವಸಾಯ ಸಹಕಾರಿ ಬ್ಯಾಂಕ್ | | ಕ್ಕಿನ್ನಿಗೋಳಿ ವ್ಯವಸಾಯ ಸಹಕಾರಿ ಬ್ಯಾಂಕ್ | |
|---|---|---|---|---|---|
| | | ಸಂಖ್ಯೆ | ಶೇಕಡಾವಾರು ಪ್ರಮಾಣ | ಸಂಖ್ಯೆ | ಶೇಕಡಾವಾರು ಪ್ರಮಾಣ |
| ೧ | ಸಣ್ಣಪ್ರಮಾಣ | ೧೭ | ೨೮.೩೩ | ೩೮ | ೬೩.೩೩ |
| ೨ | ಮಧ್ಯಪ್ರಮಾಣ | ೩೩ | ೫೫.೦೦ | ೧೬ | ೨೬.೬೭ |
| ೩ | ಹೆಚ್ಚುಪ್ರಮಾಣ | ೧೦ | ೧೬.೬೭ | ೦೬ | ೧೦.೦೦ |
| | ಒಟ್ಟು | ೬೦ | ೧೦೦ | ೬೦ | ೧೦೦ |

ಮೂಲ: ಸಂಶೋಧನಾ ಕ್ಷೇತ್ರ ಕಾರ್ಯಾಧಾರಿತ ಮಾಹಿತಿ

ಶೇಕಡಾ ೨೮ರಷ್ಟು ಫಲಾನುಭವಿಗಳು ಬಜಪೆ ವ್ಯವಸಾಯ ಬ್ಯಾಂಕಿನಿಂದ ಸಣ್ಣ ಪ್ರಮಾಣದ ಸಾಲವನ್ನೂ, ಶೇಕಡಾ ೫೫ರಷ್ಟು ಫಲಾನುಭವಿಗಳು ಮಧ್ಯಮ ಪ್ರಮಾಣದ ಸಾಲವನ್ನೂ ಹಾಗೂ ಶೇಕಡಾ ೧೭ರಷ್ಟು ಫಲಾನುಭವಿಗಳು ಹೆಚ್ಚು ಪ್ರಮಾಣದ ಸಾಲವನ್ನು ಪಡೆದುಕೊಂಡಿರುವುದು ಮೇಲಿನ ಕೋಷ್ಟಕದಿಂದ ಕಂಡುಬರುತ್ತದೆ. ಇದರಿಂದ ಸಹಕಾರಿ ಬ್ಯಾಂಕುಗಳು ಸದಸ್ಯರ ಬೇಡಿಕೆಗೆ ಅನುಗುಣವಾಗಿ ಸಾಲ ಪ್ರಮಾಣವನ್ನು ನೀಡುತ್ತಿರುವುದನ್ನು ಕಾಣಬಹುದಾಗಿದೆ.

ಕಿನ್ನಿಗೋಳಿ ಬ್ಯಾಂಕಿನ ಶೇಕಡಾ ೬೩ರಷ್ಟು ಫಲಾನುಭವಿಗಳು ಸಣ್ಣಾ ಪ್ರಮಾಣದ ಸಾಲವನ್ನೂ, ಶೇಕಡಾ ೨೭ರಷ್ಟು ಫಲಾನುಭವಿಗಳು ಮಧ್ಯಮ ಪ್ರಮಾಣದ ಸಾಲವನ್ನೂ ಹಾಗೂ ಶೇಕಡಾ ೧೧ರಷ್ಟು ಫಲಾನುಭವಿಗಳು ಹೆಚ್ಚು ಪ್ರಮಾಣದ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಸಾಲವನ್ನು ಪಡೆದುಕೊಂಡಿರುವುದನ್ನು ಕಾಣಬಹುದಾಗಿದೆ. ಹೆಚ್ಚಿನ ಸದಸ್ಯರು ಸಣ್ಣ ಮತ್ತು ಮಧ್ಯಮ ಪ್ರಮಾಣದ ಸಾಲವನ್ನು ಪಡೆದುಕೊಂಡಿರವುದು ಗಮನಿಸಬೇಕಾದ ಅಂಶವಾಗಿದೆ.

### ೪.೩.೧.ಇ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಸಾಲದ ಉದ್ದೇಶದ ವಿವರ

ಇತ್ತೀಚೆಗೆ ಕೇವಲ ಒಂದೇ ಉದ್ದೇಶಕ್ಕೆ ಸಹಕಾರಿ ಬ್ಯಾಂಕುಗಳ ರಚನೆಯಾಗುವುದಿಲ್ಲ; ಯಾಕೆಂದರೆ, ಜನರು ಕೃಷಿಯ ಜೊತೆ ಇತರ ಅನೇಕ ಗ್ರಾಮೀಣ ಅಭಿವೃದ್ಧಿಯ ಕೆಲಸಗಳಲ್ಲೂ ತೊಡಗಿಕೊಂಡಿದ್ದು ಅದಕ್ಕಾಗಿ ಸಹಕಾರಿ ಬ್ಯಾಂಕುಗಳನ್ನು ಅವಲಂಬಿಸಿರುತ್ತಾರೆ. ಆ ಕಾರಣಕ್ಕಾಗಿಯೇ ವಿವಿಧೋದ್ದೇಶ ಸಹಕಾರಿ ಬ್ಯಾಂಕುಗಳು ರಚನೆಯಾಗುತ್ತಿದ್ದು ರೈತರಿಗೆ ಅಗತ್ಯವಿರುವ ಅನೇಕ ರೀತಿಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಸಾಲಗಳನ್ನು ನೀಡುತ್ತಿದೆ.

ಕೋಷ್ಟಕ ೪.೩.೧.ಇ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಸಾಲದ ಉದ್ದೇಶ

| ಕ್ರಮ ಸಂಖ್ಯೆ | ಸಾಲದ ಉದ್ದೇಶ | ಬಜಪೆ ವ್ಯವಸಾಯ ಸಹಕಾರಿ ಬ್ಯಾಂಕ್ | | ಕ್ಕಿನ್ನಿಗೋಳಿ ವ್ಯವಸಾಯ ಸಹಕಾರಿ ಬ್ಯಾಂಕ್ | |
|---|---|---|---|---|---|
| | | ಸಂಖ್ಯೆ | ಶೇಕಡಾವಾರು ಪ್ರಮಾಣ | ಸಂಖ್ಯೆ | ಶೇಕಡಾವಾರು ಪ್ರಮಾಣ |
| ೧ | ಏಕೋದ್ದೇಶ | ೧೪ | ೨೩.೩೩ | ೧೯ | ೩೧.೬೭ |
| ೨ | ವಿವಿಧೋದ್ದೇಶ | ೩೪ | ೫೬.೬೭ | ೩೧ | ೫೧.೬೭ |
| ೩ | ಎರಡೂ ('ಅ' ಮತ್ತು 'ಆ') | ೧೨ | ೨೦.೦೦ | ೧೦ | ೧೬.೬೬ |
| | ಒಟ್ಟು | ೬೦ | ೧೦೦ | ೬೦ | ೧೦೦ |

ಮೂಲ: ಸಂಶೋಧನಾ ಕ್ಷೇತ್ರ ಕಾರ್ಯಾಧಾರಿತ ಮಾಹಿತಿ

ಕೋಷ್ಟಕ ೪.೩.೧.ಇ ಯಲ್ಲಿ ಗಮನಿಸುವಂತೆ ಬಜಪೆ ವ್ಯವಸಾಯ ಬ್ಯಾಂಕಿನ ಶೇಕಡಾ ೫೭ ರಷ್ಟು ಫಲಾನುಭವಿಗಳು ಪಡೆದುಕೊಂಡ ಸಾಲವನ್ನು ವಿವಿಧ ಉದ್ದೇಶಗಳಿಗೆ ಬಳಸಿಕೊಂಡಿರುವುದು ಬೆಳಕಿಗೆ ಬರುತ್ತದೆ. ಕಿನ್ನಿಗೋಳಿ ವ್ಯವಸಾಯ ಬ್ಯಾಂಕಿನಲ್ಲಿ ಇದರ ಪ್ರಮಾಣ ಶೇಕಡಾ ೫೨ರಷ್ಟಿರುವುದನ್ನು ಅಧ್ಯಯನದಿಂದ ದೃಢಪಡುತ್ತದೆ. ರೈತರು ಕೃಷಿಯ ಜೊತೆಗೆ ಇತರ ಅನೇಕ ಗ್ರಾಮೀಣ ಅಭಿವೃದ್ಧಿಯ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದು ಅದಕ್ಕಾಗಿ ಸಹಕಾರಿ ಬ್ಯಾಂಕುಗಳನ್ನು ಅವಲಂಬಿಸಿರುತ್ತಾರೆ. ಈ ಅವಶ್ಯಕತೆಗಳನ್ನು ಪೂರೈಸಲು ಸಹಕಾರಿ ಬ್ಯಾಂಕುಗಳು ಇತರ ವಾಣಿಜ್ಯ ಬ್ಯಾಂಕುಗಳು ನೀಡುವ ಎಲ್ಲಾ ರೀತಿಯ ಸಾಲ ಸೌಲಭ್ಯಗಳನ್ನು ನೀಡುತ್ತಿದೆ. ಇದಕ್ಕಾಗಿಯೇ ವಿವಿಧೋದ್ದೇಶ ಸಹಕಾರಿ ಬ್ಯಾಂಕುಗಳ ರಚನೆಯಾಗುತ್ತಿದ್ದು ನಮ್ಮ ಅಧ್ಯಯನದ ಈ ಸಹಕಾರಿ ಬ್ಯಾಂಕುಗಳೂ ಸಹ ಆ ನಿಟ್ಟಿನಲ್ಲಿಯೇ ಕಾರ್ಯವೆಸಗುತ್ತಿರುವುದು ಅಧ್ಯಯನದಿಂದ ಕಂಡುಕೊಂಡ ಸಂಗತಿಯಾಗಿದೆ.

### ೪.೩.೨ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಸಾಲಕ್ಕೆ ಸಂಬಂಧಿಸಿರುವ ಯೋಜನೆ(ಸ್ಕೀಮ್)ಗಳ ವಿವರಗಳು

ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಸಾಲಕ್ಕೆ ಸಂಬಂಧಿಸಿದಂತೆ ಕೃಷಿ ಸಹಕಾರಿ ಬ್ಯಾಂಕುಗಳು ಹಲವು ರೀತಿಯ ಸಾಲ ಸೌಲಭ್ಯಗಳನ್ನು ಫಲಾನುಭವಿಗಳಿಗೆ ನೀಡುತ್ತಿದೆ. ಗ್ರಾಮೀಣ ಕ್ಷೇತ್ರದ ಪ್ರಧಾನ ಆರ್ಥಿಕ ಚಟುವಟಿಕೆಯಾದ ಕೃಷಿಗೆ ಹೊಸ-ಹೊಸ ಯೋಜನೆಗಳ ಮೂಲಕ ಸಾಲನೀಡಿಕೆಯು ಅಗತ್ಯವಾಗಿದ್ದು ಕೃಷಿ ಅಭಿವೃದ್ಧಿಯಲ್ಲಿ ಇದು ಪ್ರಧಾನ ಪಾತ್ರವಹಿಸುತ್ತದೆ.

ಕೋಷ್ಟಕ ೪.೩.೨ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಸಾಲಕ್ಕೆ ಸಂಬಂಧಿಸಿರುವ ಯೋಜನೆ

| ಕ್ರಮ ಸಂಖ್ಯೆ | ಯೋಜನೆಗಳ ವಿವರಗಳು | ಬಜಪೆ ವ್ಯವಸಾಯ ಸಹಕಾರಿ ಬ್ಯಾಂಕ್ | | ಕಿನ್ನಿಗೋಳಿ ವ್ಯವಸಾಯ ಸಹಕಾರಿ ಬ್ಯಾಂಕ್ | |
|---|---|---|---|---|---|
| | | ಸಂಖ್ಯೆ | ಶೇಕಡಾವಾರು ಪ್ರಮಾಣ | ಸಂಖ್ಯೆ | ಶೇಕಡಾವಾರು ಪ್ರಮಾಣ |
| ೧ | ಕೃಷಿ ಸಾಲ | ೩೯ | ೬೫.೦೦ | ೩೬ | ೬೦ |
| ೨ | ಇತರೆ ಸಾಲ | ೨೧ | ೩೫.೦೦ | ೨೪ | ೪೦ |
| | ಒಟ್ಟು | ೬೦ | ೧೦೦ | ೬೦ | ೧೦೦ |

ಮೂಲ: ಸಂಶೋಧನಾ ಕ್ಷೇತ್ರ ಕಾರ್ಯಾಧಾರಿತ ಮಾಹಿತಿ

ಬಜಪೆ ವ್ಯವಸಾಯ ಬ್ಯಾಂಕಿನ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಸಾಲಕ್ಕೆ ಸಂಬಂಧಿಸಿರುವ ಯೋಜನೆಯ ವಿವರದಿಂದ ತಿಳಿಯುವಂತೆ ಶೇಕಡಾ ೬೫ ಕೃಷಿ ಸಾಲವನ್ನೊಳಗೊಂಡಿದೆ. ಶೇಕಡಾ ೩೫ ಇತರ ಸಾಲವನ್ನೊಳಗೊಂಡಿದೆ. ಅಂದರೆ ಈ ಬ್ಯಾಂಕಿನಿಂದ ಫಲಾನುಭವಿಗಳು ಹೆಚ್ಚು ಕೃಷಿಸಾಲವನ್ನು ಪಡೆದುಕೊಳ್ಳುತ್ತಿದ್ದಾರೆ ಎಂಬುದನ್ನು ಅಧ್ಯಯನವು ಕಂಡುಕೊಂಡಿದೆ.ಸಹಕಾರಿ ಬ್ಯಾಂಕಿನಿಂದ ವಿವಿಧೋದ್ದೇಶಕ್ಕೆ ಸಾಲಸೌಕರ್ಯಗಳು ಲಭಿಸುತ್ತವೆಯಾದರೂ ಗ್ರಾಮೀಣ ಕ್ಷೇತ್ರದ ಪ್ರಧಾನ ಆರ್ಥಿಕ ಚಟುವಟಿಕೆಯಾದ ಕೃಷಿಗಾಗಿ ಹೊಸ-ಹೊಸ ಯೋಜನೆಗಳ ಮೂಲಕ ಸಾಲನೀಡಿಕೆ, ಜನರು ಅದರ ಫಲಾನುಭವಿಗಳಾಗುವುದು ಮತ್ತು ಅದರ ಮೂಲಕ ಜನರೂ/ಕೃಷಿಕ್ಷೇತ್ರವೂ ಬೆಳೆಯುವಂತಾಗುವುದು ಪರಸ್ಪರ ಪೂರಕವಾದ ವಿಷಯಗಳು.

ಕಿನ್ನಿಗೋಳಿ ವ್ಯವಸಾಯ ಬ್ಯಾಂಕಿನ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಸಾಲಕ್ಕೆ ಸಂಬಂಧಿಸಿರುವ ಯೋಜನೆಯ ವಿವರದಿಂದ ತಿಳಿಯುವಂತೆ ಶೇಕಡಾ ೬೦ ಕೃಷಿ ಸಾಲವನ್ನೂ, ಶೇಕಡಾ ೪೦ ಇತರ ಸಾಲವನ್ನೊಳಗೊಂಡಿದೆ.ಈ ವ್ಯವಸಾಯ ಸಹಕಾರಿ ಬ್ಯಾಂಕು ಕೂಡ ಕೃಷಿಗೆ ಬೇಕಾದ ಸಾಲ

ಸೌಲಭ್ಯಗಳನ್ನು ವಿವಿಧ ಯೋಜನೆಗಳ ಮೂಲಕ ನೀಡುತ್ತಿರುವುದು ಮತ್ತು ಫಲಾನುಭವಿಗಳು ಈ ಯೋಜನೆಗಳ ಸದುಪಯೋಗ ಪಡೆದುಕೊಳ್ಳುತ್ತಿರುವುದು ಮೇಲಿನ ಕೋಷ್ಟಕದಿಂದ ಅಭಿವ್ಯಕ್ತಗೊಳ್ಳುತ್ತದೆ.

**೪.೩.೩.ಅ. ಠೇವಣಿ ಸಂಚಯನದ ಅವಧಿಯ ವಿವರ**

ಯಾವುದೇ ಸಂಘ/ವ್ಯವಸ್ಥೆಗೆ ನಿದಿಷ್ಟವಾದ ಹಾಗೂ ಪರ್ಯಾಪ್ತವಾದ ಆರ್ಥಿಕ ಮೂಲಗಳಿರಬೇಕು. ಪಾಲು ಬಂಡವಾಳ ಅಥವಾ ಪುನರ್ವಿತ್ತ (Refinancing Facility) ವ್ಯವಸ್ಥೆಗಳಲ್ಲದೆ ಠೇವಣಿ ಸಂಚಯನವೂ ಒಂದು ಪ್ರಧಾನವಾದ ಆರ್ಥಿಕ ಮೂಲವಾಗಿರುತ್ತದೆ.

ಕೋಷ್ಟಕ ೪.೩.೩.ಅ ಠೇವಣಿ ಸಂಚಯನದ ಅವಧಿ

| ಕ್ರಮ ಸಂಖ್ಯೆ | ಠೇವಣಿ ಸಂಚಯನದ ಅವಧಿ | ಬಜಪೆ ವ್ಯವಸಾಯ ಸಹಕಾರಿ ಬ್ಯಾಂಕ್ | | ಕ್ನಿನ್ನಿಗೋಳಿ ವ್ಯವಸಾಯ ಸಹಕಾರಿ ಬ್ಯಾಂಕ್ | |
|---|---|---|---|---|---|
| | | ಸಂಖ್ಯೆ | ಶೇಕಡಾವಾರು ಪ್ರಮಾಣ | ಸಂಖ್ಯೆ | ಶೇಕಡಾವಾರು ಪ್ರಮಾಣ |
| ೧ | ಅಲ್ಪಾವಧಿ | ೧೬ | ೨೬.೬೭ | ೨೪ | ೪೦.೦೦ |
| ೨ | ಮಧ್ಯಾವಧಿ | ೦೦ | – | ೦೪ | ೬.೬೭ |
| ೩ | ದೀರ್ಘಾವಧಿ | ೪೪ | ೭೩.೩೩ | ೩೨ | ೫೩.೩೩ |
| | **ಒಟ್ಟು** | **೬೦** | **೧೦೦** | **೬೦** | **೧೦೦** |

ಮೂಲ: ಸಂಶೋಧನಾ ಕ್ಷೇತ್ರ ಕಾರ್ಯಾಧಾರಿತ ಮಾಹಿತಿ

ಠೇವಣಿ ಸಂಚಯನ ಕ್ಕೆ ಹೆಚ್ಚಿನ ಮಹತ್ವವನ್ನು ಕೊಡುವ ಮೂಲಕ ತಮ್ಮ ಆರ್ಥಿಕ ಮೂಲವನ್ನು ಬಲಪಡಿಸಿಕೊಂಡಿರುವ ಬಜಪೆ ವ್ಯವಸಾಯ ಬ್ಯಾಂಕು ತನ್ನ ಒಟ್ಟು ಠೇವಣಿಗಳಲ್ಲಿ ಶೇಕಡಾ ೭೩ ನ್ನು ದೀರ್ಘಾವಧಿ ಠೇವಣಿಯನ್ನಾಗಿ ಪಡೆದುಕೊಳ್ಳುತ್ತದೆ ಎನ್ನುವುದು ಗಮನಾರ್ಹ ಅಂಶ. ಕಿನ್ನಿಗೋಳಿ ವ್ಯವಸಾಯ ಸಹಕಾರಿ ಬ್ಯಾಂಕು ಠೇವಣಿ ಸಂಚಯನಕ್ಕೆ ಹೆಚ್ಚಿನ ಮಹತ್ವವನ್ನು ನೀಡಿ ತನ್ನ ಒಟ್ಟು ಠೇವಣಿಗಳಲ್ಲಿ ಶೇಕಡಾ ೫೩ರಷ್ಟನ್ನು ದೀರ್ಘಾವಧಿ ಠೇವಣಿಯನ್ನಾಗಿ ಪಡೆದುಕೊಂಡು ಆ ಮೂಲಕ ತನ್ನ ಆರ್ಥಿಕ ಮೂಲವನ್ನು ಬಲಪಡಿಸಿಕೊಂಡಿರುವುದು ಅಧ್ಯಯನದಿಂದ ಕಂಡುಕೊಳ್ಳಬಹುದಾಗಿದೆ.

**೪.೩.೩.ಆ *ಠೇವಣಿ ಸಂಚಯನ ಪ್ರಮಾಣದ ವಿವರ***

ಸಹಕಾರಿ ಬ್ಯಾಂಕುಗಳು ವಿವಿಧ ಠೇವಣಿ ಯೋಜನೆಗಳ ಮೂಲಕ ಸಾರ್ವಜನಿಕರಿಂದಲೂ, ಸದಸ್ಯರಿಂದಲೂ ಠೇವಣಿಗಳನ್ನು ಸಂಗ್ರಹಿಸುತ್ತದೆ. ಇದರಿಂದ ಜನರ ಉಳಿತಾಯ ಪ್ರವೃತ್ತಿಗೆ ಪ್ರೋತ್ಸಾಹ ಸಿಗುವುದಲ್ಲದೆ ಬ್ಯಾಂಕಿನ ಆರ್ಥಿಕ ಸಂಪನ್ಮೂಲದ ಸಂಚಯನ ಮತ್ತು ಕ್ರೋಡೀಕರಣವು ಸಾದ್ಯವಾಗುತ್ತದೆ.

ಕೋಷ್ಟಕ ೪.೩.೩.ಆ. ಠೇವಣಿ ಸಂಚಯನದ ಪ್ರಮಾಣ

| ಕ್ರಮ ಸಂಖ್ಯೆ | ಠೇವಣಿ ಸಂಚಯನದ ಪ್ರಮಾಣ | ಬಜಪೆ ವ್ಯವಸಾಯ ಸಹಕಾರಿ ಬ್ಯಾಂಕ್ | | ಕ್ಕಿನ್ನಿಗೋಳಿ ವ್ಯವಸಾಯ ಸಹಕಾರಿ ಬ್ಯಾಂಕ್ | |
|---|---|---|---|---|---|
| | | ಸಂಖ್ಯೆ | ಶೇಕಡಾವಾರು ಪ್ರಮಾಣ | ಸಂಖ್ಯೆ | ಶೇಕಡಾವಾರು ಪ್ರಮಾಣ |
| ೧ | ಸಣ್ಣಪ್ರಮಾಣ | ೧೩ | ೨೧.೬೭ | ೩೧ | ೫೧.೬೭ |
| ೨ | ಮಧ್ಯಮ ಪ್ರಮಾಣ | ೪೭ | ೭೮.೩೩ | ೨೯ | ೪೮.೩೩ |
| ೩ | ಹೆಚ್ಚುಪ್ರಮಾಣ | ೦೦ | – | ೦೦ | – |
| | **ಒಟ್ಟು** | **೬೦** | **೧೦೦** | **೬೦** | **೧೦೦** |

ಮೂಲ: ಸಂಶೋಧನಾ ಕ್ಷೇತ್ರ ಕಾರ್ಯಾಧಾರಿತ ಮಾಹಿತಿ

ಬಜಪೆ ವ್ಯವಸಾಯ ಬ್ಯಾಂಕು ವಿವಿಧ ಠೇವಣಿ ಯೋಜನೆಗಳ ಮೂಲಕ ಸದಸ್ಯರಿಂದಲೂ, ಸದಸ್ಯೇತರಿಂದಲೂ ಠೇವಣಿಗಳನ್ನು ಸಂಗ್ರಹಿಸುತ್ತದೆ. ಈ ಬ್ಯಾಂಕಿನಲ್ಲಿ ಶೇಕಡಾ ೭೮ರಷ್ಟು ಠೇವಣಿಗಳು ಮಧ್ಯಮ ಪ್ರಮಾಣದ ಠೇವಣಿಗಳಾಗಿರುವುದು ಮೇಲಿನ ಕೋಷ್ಟಕದಿಂದ ಕಂಡುಬರುತ್ತದೆ. ಇದು ಠೇವಣಿದಾರನ ಆರ್ಥಿಕ ಮಟ್ಟವನ್ನು ಸೂಚಿಸುವಂತಿದೆ.

ವಿವಿಧ ಠೇವಣಿಗಳನ್ನು ಸದಸ್ಯರಿಂದಲೂ, ಸದಸ್ಯೇತರಿಂದಲೂ ಸಂಗ್ರಹಿಸುವ ಕಿನ್ನಿಗೋಳಿ ವ್ಯವಸಾಯ ಸಹಕಾರಿ ಬ್ಯಾಂಕು ಜನರ ಉಳಿತಾಯ ಪ್ರವೃತ್ತಿಗೆ ಪ್ರೋತ್ಸಾಹವನ್ನು ನೀಡಿದೆ. ಶೇಕಡಾ ೫೨ಷ್ಟು ಠೇವಣಿಗಳು ಸಣ್ಣ ಪ್ರಮಾಣದ್ದಾಗಿದ್ದು, ಶೇಕಡಾ ೪೨ರಷ್ಟು ಮಧ್ಯಮ ಪ್ರಮಾಣದ ಠೇವಣಿಗಳಾಗಿರುವುದು ಅಧ್ಯಯನದಿಂದ ಕಂಡು ಬರುತ್ತದೆ.

**೪.೩.೩. ಇ ಠೇವಣಿ ಸಂಚಯನದ ಮೂಲದ ವಿವರ**

ಠೇವಣಿ ಸಂಚಯನವು ಸಹಕಾರಿ ಬ್ಯಾಂಕಿನ ಒಂದು ಪ್ರಧಾನವಾದ ಆರ್ಥಿಕ ಮೂಲವಾಗಿದೆ. ಇದು ಸದಸ್ಯರಿಂದಲೂ, ಸಾರ್ವಜನಿಕರಿಂದಲೂ ಠೇವಣಿಯನ್ನು ಸಂಗ್ರಹಿಸುತ್ತದೆ. ಸಹಕಾರ

ಸಂಘವು ಪ್ರಜಾಸತ್ತಾತ್ಮಕವಾಗಿದ್ದು ಅದು ಸದಸ್ಯರ ನಿಯಂತ್ರಣಕ್ಕೊಳಪಟ್ಟಿದೆ. ಇದರಿಂದ ಸದಸ್ಯರು ನೇರ ಮತ್ತು ನಿರಂತರ ನಿಯಂತ್ರಣವನ್ನು ಉಳಿಸಿಕೊಳ್ಳಲು ಮತ್ತು ತಮ್ಮ ಹಣವನ್ನು ಉತ್ಪಾದಕ ರೀತಿಯಲ್ಲಿ ಬಳಸಿಕೊಳ್ಳುವಂತೆ ಮಾಡಬಹುದಾಗಿದೆ.

ಕೋಷ್ಟಕ ೪.೩.೩.ಇ ಠೇವಣಿ ಸಂಚಯನದ ಮೂಲ

| ಕ್ರಮ ಸಂಖ್ಯೆ | ಠೇವಣಿ ಸಂಚಯನದ ಮೂಲ | ಬಜಪೆ ವ್ಯವಸಾಯ ಸಹಕಾರಿ ಬ್ಯಾಂಕ್ | | ಕ್ಕಿನ್ನಿಗೋಳಿ ವ್ಯವಸಾಯ ಸಹಕಾರಿ ಬ್ಯಾಂಕ್ | |
|---|---|---|---|---|---|
| | | ಸಂಖ್ಯೆ | ಶೇಕಡಾವಾರು ಪ್ರಮಾಣ | ಸಂಖ್ಯೆ | ಶೇಕಡಾವಾರು ಪ್ರಮಾಣ |
| ೧ | ಸದಸ್ಯರಿಂದ | ೩೪ | ೫೬.೬೭ | ೩೩ | ೫೫.೦೦ |
| ೨ | ಸದಸ್ಯೇತರರಿಂದ | ೧೨ | ೨೦.೦೦ | ೧೨ | ೨೦.೦೦ |
| ೩ | 'ಅ' ಮತ್ತು 'ಆ'- ಇಬ್ಬರಿಂದ | ೧೪ | ೨೩.೩೩ | ೧೫ | ೨೫.೦೦ |
| | ಒಟ್ಟು | ೬೦ | ೧೦೦ | ೬೦ | ೧೦೦ |

ಮೂಲ: ಸಂಶೋಧನಾ ಕ್ಷೇತ್ರ ಕಾರ್ಯಾಧಾರಿತ ಮಾಹಿತಿ

ಕೋಷ್ಟಕ ೪.೩.೩.ಇ ನಿಂದ ತಿಳಿಯುವಂತೆ ಬಜಪೆ ವ್ಯವಸಾಯ ಬ್ಯಾಂಕಿನ ಠೇವಣಿ ಸಂಚಯನದ ಮೂಲವು ಶೇಕಡಾ ೫೭ರಷ್ಟು ಸದಸ್ಯರಿಂದಲೂ, ಶೇಕಡಾ ೨೦ ರಷ್ಟು ಸದಸ್ಯೇತರಿಂದಲೂ ಮತ್ತು ಶೇಕಡಾ ೨೩ ರಷ್ಟು ಈ ಎರಡೂ ಮೂಲದಿಂದಾಗಿದೆ. ಠೇವಣಿ ಸಂಚಯನಕ್ಕಾಗಿ ಬ್ಯಾಂಕು ತನ್ನ ಸದಸ್ಯರನ್ನೇ ಹೆಚ್ಚಾಗಿ ಅವಲಂಬಿಸಿರುವುದರಿಂದ ಸದಸ್ಯರ ಠೇವಣಿ ಸಂಗ್ರಹದ ಪ್ರಯತ್ನವು ಬ್ಯಾಂಕಿನ ಆರ್ಥಿಕ ಭದ್ರತೆಯಲ್ಲಿ ಪ್ರಧಾನ ಪಾತ್ರವನ್ನು ವಹಿಸುತ್ತದೆ ಎಂಬುದು ಸ್ಪಷ್ಟವಾಗುತ್ತದೆ. ಅಷ್ಟು ಮಾತ್ರವಲ್ಲದೆ ತಮ್ಮದೇ ಠೇವಣಿಯ ಹಣದ ಭದ್ರತೆಗಾಗಿ ಮತ್ತು ಅದರ ಉತ್ಪಾದಕ ರೀತಿಯ ಉಪಯೋಗಕ್ಕಾಗಿ ಸದಸ್ಯರು ನೇರ ಮತ್ತು ನಿರಂತರ ನಿಯಂತ್ರಣವನ್ನು ಉಳಿಸಿಕೊಳ್ಳು ವುದು ಸಾಧ್ಯವಾಗುತ್ತದೆ.

ಕಿನ್ನಿಗೋಳಿ ವ್ಯವಸಾಯ ಬ್ಯಾಂಕಿನ ಠೇವಣಿ ಸಂಚಯನದ ಮೂಲವು ಶೇಕಡಾ ೫೫ರಷ್ಟು ಸದಸ್ಯರಿಂದಲೂ, ಶೇಕಡಾ ೨೦ ರಷ್ಟು ಸದಸ್ಯೇತರಿಂದಲೂ ಮತ್ತು ಶೇಕಡಾ ೨೫ ರಷ್ಟು ಈ ಎರಡೂ ಮೂಲದಿಂದಾಗಿದೆ ಎಂದು ಮೇಲಿನ ಕೋಷ್ಟಕದಿಂದ ಕಂಡುಕೊಳ್ಳಬಹುದು. ಠೇವಣಿ ಸಂಚಯನಕ್ಕಾಗಿ ಈ ಬ್ಯಾಂಕು ಕೂಡ ತನ್ನ ಸದಸ್ಯರನ್ನೇ ಹೆಚ್ಚಾಗಿ ಅವಲಂಭಿಸಿರುವುದು ಅಧ್ಯಯನದಿಂದ ತಿಳಿದುಬರುತ್ತದೆ.

### ೪.೩.೪ ಠೇವಣಿ ಸಂಚಯನಕ್ಕೆ ಸಂಬಂಧಿಸಿರುವ ಯೋಜನೆ(ಸ್ಕೀಮ್)ಗಳ ವಿವರಗಳು

ಠೇವಣಿ ಸಂಚಯನಕ್ಕೆ ಸಂಬಂಧಿಸಿದಂತೆ ಕೃಷಿ ಸಹಕಾರಿ ಬ್ಯಾಂಕು ಹಲವು ಯೋಜನೆಗಳನ್ನು ಹೊಂದಿದೆ. ಉಳಿತಾಯ ಖಾತೆ, ನಿರಖು ಠೇವಣಿ, ಚಾಲ್ತಿ ಖಾತೆಗಳಲ್ಲದೆ ಪಿಗ್ಮಿ, ಬಾಗ್ಯ ನಿಧಿ, ರೈತ ವಿಕಾಸ ನಗದು ಪತ್ರಗಳಂತಹ ಹಲವು ಯೋಜನೆಗಳು ಸದಸ್ಯರ ಮತ್ತು ಸದಸ್ಯೇತರರ ಉಳಿತಾಯ ಪ್ರವೃತ್ತಿಯನ್ನು ಹೆಚ್ಚಿಸುವಲ್ಲಿ ನೆರವಾಗುತ್ತಿದೆ.

ಕೋಷ್ಟಕ ೪.೩.೪ ಠೇವಣಿ ಸಂಚಯನಕ್ಕೆ ಸಂಬಂಧಿಸಿರುವ ಯೋಜನೆಯ ವಿವರಗಳು

| ಕ್ರಮ ಸಂಖ್ಯೆ | ಯೋಜನೆಗಳ ವಿವರಗಳು | ಬಜಪೆ ವ್ಯವಸಾಯ ಸಹಕಾರಿ ಬ್ಯಾಂಕ್ | | ಕ್ಕಿನ್ನಿಗೋಳಿ ವ್ಯವಸಾಯ ಸಹಕಾರಿ ಬ್ಯಾಂಕ್ | |
|---|---|---|---|---|---|
| | | ಸಂಖ್ಯೆ | ಶೇಕಡಾವಾರು ಪ್ರಮಾಣ | ಸಂಖ್ಯೆ | ಶೇಕಡಾವಾರು ಪ್ರಮಾಣ |
| ೧ | ಪಿಗ್ಮಿ/ ನಿರಖು ಠೇವಣಿ | ೩೯ | ೬೫ | ೪೭ | ೭೮.೩೩ |
| ೨ | ಬಾಗ್ಯನಿಧಿ ಯೋಜನೆ/ ರೈತ ವಿಕಾಸ ನಗದು ಪತ್ರ | ೨೧ | ೩೫ | ೧೩ | ೨೧.೬೭ |
| | **ಒಟ್ಟು** | ೬೦ | ೧೦೦ | ೬೦ | ೧೦೦ |

ಮೂಲ: ಸಂಶೋಧನಾ ಕ್ಷೇತ್ರ ಕಾರ್ಯಾಧಾರಿತ ಮಾಹಿತಿ

ಠೇವಣಿ ಸಂಚಯನಕ್ಕೆ ಸಂಬಂಧಿಸಿದಂತೆ ಬಜಪೆ ವ್ಯವಸಾಯ ಸಹಕಾರಿ ಬ್ಯಾಂಕು ಹಲವು ಯೋಜನೆಗಳನ್ನು ಹೊಂದಿದೆ. ಈ ಬ್ಯಾಂಕಿನ ಠೇವಣಿ ಸಂಚಯನದ ಯೋಜನೆಯಲ್ಲಿ ಶೇಕಡಾ ೬೫ರಷ್ಟು ಪಿಗ್ಮಿಯಿಂದಲೂ ಮತ್ತು ಶೇಕಡಾ ೩೫ರಷ್ಟು ಭಾಗ್ಯನಿಧಿ ಯೋಜನೆಯಿಂದಲೂ ಆಗಿದೆ. ಇದರಿಂದ ಬ್ಯಾಂಕಿನ ಹೆಚ್ಚಿನ ಫಲಾನುಭವಿಗಳುತಮ್ಮನ್ನು ಸಣ್ಣ ಉಳಿತಾಯದಲ್ಲಿ ತೊಡಗಿಸಿರುವುದು ಕಂಡುಬರುತ್ತದೆ.ಇದು ಸದಸ್ಯರ ಉಳಿತಾಯ ಪ್ರವೃತ್ತಿಯನ್ನು ಹೆಚ್ಚಿಸುತ್ತದೆ. ಉಳಿತಾಯ ಸಣ್ಣದಾದರೂ ಹೆಚ್ಚಿನ ಸಂಖ್ಯೆಯ ಸದಸ್ಯರು ಉಳಿತಾಯ ಮಾಡುವುದರಿಂದ ಬ್ಯಾಂಕಿನ ಉಳಿತಾಯ ಮೂಲದ ಆರ್ಥಿಕತೆಯ ತಳಹದಿ ವಿಸ್ತಾರಗೊಂಡಿರುವುದು ಒಳ್ಳೆಯ ಬೆಳವಣಿಗೆ.

ಕಿನ್ನಿಗೋಳಿ ವ್ಯವಸಾಯ ಬ್ಯಾಂಕು ಸಹ ಠೇವಣಿ ಸಂಚಯನಕ್ಕೆ ಸಂಬಂಧಿಸಿದಂತೆ ಹಲವು ಯೋಜನೆಗಳನ್ನು ಹೊಂದಿದೆ. ಈ ಬ್ಯಾಂಕಿನ ಶೇಕಡಾ ೭೮ರಷ್ಟು ನಿರಖು ಠೇವಣಿಯಿಂದಲೂ ಮತ್ತು ಶೇಕಡಾ ೨೧ರಷ್ಟು ರೈತ ವಿಕಾಸ ನಗದು ಪತ್ರ ಯೋಜನೆಯಿಂದಲೂ ಆಗಿದೆ. ಬ್ಯಾಂಕಿನ ಹೆಚ್ಚಿನ ಫಲಾನುಭವಿಗಳು ತಮ್ಮಲ್ಲಿ ಉಳಿತಾಯ ಪ್ರವೃತ್ತಿಯನ್ನು ಹೆಚ್ಚಿಸಿಕೊಂಡಿರುವುದನ್ನು ಮೇಲಿನ ಕೋಷ್ಟಕದಿಂದ ತಿಳಿಯಬಹುದಾಗಿದೆ. ಇದು ಸದಸ್ಯರ ಉಳಿತಾಯ ಪ್ರವೃತ್ತಿಯನ್ನು ಹೆಚ್ಚಿಸುವಲ್ಲಿ ಸಹಕಾರಿಯಾಗಿದೆ.

### ೪.೩.೫ ಆಡಳಿತಾತ್ಮಕ ವ್ಯವಸ್ಥೆ

ಬದಲಾಗುತ್ತಿರುವ ಆರ್ಥಿಕ ವ್ಯವಸ್ಥೆಯಲ್ಲಿ ಬ್ಯಾಂಕು ನಿರಂತರವಾಗಿ ಹೊಸ ಹೊಸ ಸವಾಲುಗಳನ್ನು ಎದುರಿಸ ಬೇಕಾಗುತ್ತದೆ. ಇತರ ವಾಣಿಜ್ಯ ಬ್ಯಾಂಕುಗಳೊಡನೆ ಪೈಪೋಟಿ ನಡೆಸಬೇಕಾಗುತ್ತದೆ. ಈ ಬದಲಾವಣೆಗಳಿಗೆ ಹೊಂದಿಕೊಳ್ಳುತ್ತಾ ಕಾನೂನು ಪ್ರಕ್ರಿಯೆ, ತಂತ್ರಜ್ಞಾನದ ಉಪಯೋಗದಂತಹ ಸಂಕೀರ್ಣ ವಿಷಯಗಳನ್ನು ಮತ್ತು ತನ್ನ ದೈನಂದಿನ ಕಾರ್ಯ ಚಟುವಟಿಕೆಗಳನ್ನು ಸಮರ್ಥವಾಗಿ ನಿಭಾಯಿಸಲು ಬ್ಯಾಂಕು ಒಳ್ಳೆಯ ಆಡಳಿತ ವ್ಯವಸ್ಥೆಯನ್ನು ಹೊದಿರಬೇಕಾಗುತ್ತದೆ. ಬ್ಯಾಂಕಿನ ಆಡಳಿತಾತ್ಮಕ ವಿಷಯಗಳ ಬಗ್ಗೆ ಸದಸ್ಯರ ಅಭಿಪ್ರಾಯವನ್ನು ತಿಳಿಯುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

#### ೪.೩.೫.ಅ. ಸದಸ್ಯರ ಸಂಖ್ಯೆಯ ಬಗೆಗಿನ ಅಭಿಪ್ರಾಯದ ವಿವರ

ಸಹಕಾರಿ ಸಂಘಗಳು ಸಹಕಾರಿ ತತ್ವದ ಆಧಾರದ ಮೇಲೆ ಉಗಮವಾಗಿದೆ. ಇಲ್ಲಿ ಬ್ಯಾಂಕಿನ ಪ್ರತಿಯೊಬ್ಬ ಸದಸ್ಯನಿಗೂ ಬ್ಯಾಂಕಿನ ಆಡಳಿತಾತ್ಮಕ ವ್ಯವಸ್ಥೆಗಳ ಮಾಹಿತಿ ಇರುವುದು ಅವಶ್ಯಕವೆನಿಸುತ್ತದೆ. ಸದಸ್ಯರ ಸಂಖ್ಯೆಯ ಬಗ್ಗೆ ಮಾಹಿತಿದಾರರು ನೀಡಿದ ಅಭಿಪ್ರಾಯವನ್ನು ಈ ಕೆಳಗಿನ ಕೋಷ್ಟಕದಲ್ಲಿ ಅಭಿವ್ಯಕ್ತಗೊಳಿಸಲಾಗಿದೆ.

*ಕೋಷ್ಟಕ ೪.೩.೫.ಅ* ಸದಸ್ಯರ ಸಂಖ್ಯೆಯ ಬಗೆಗಿನ ಅಭಿಪ್ರಾಯದ ವಿವರ

| ಕ್ರಮ ಸಂಖ್ಯೆ | ಸದಸ್ಯರ ಸಂಖ್ಯೆ | ಬಜಪೆ ವ್ಯವಸಾಯ ಸಹಕಾರಿ ಬ್ಯಾಂಕ್ | | ಕ್ಕಿನ್ನಿಗೋಳಿ ವ್ಯವಸಾಯ ಸಹಕಾರಿ ಬ್ಯಾಂಕ್ | |
|---|---|---|---|---|---|
| | | ಸಂಖ್ಯೆ | ಶೇಕಡಾವಾರು ಪ್ರಮಾಣ | ಸಂಖ್ಯೆ | ಶೇಕಡಾವಾರು ಪ್ರಮಾಣ |
| ೧ | ಉತ್ತಮ | ೫೩ | ೮೬.೬೭ | ೪೯ | ೮೧.೬೬ |
| ೨ | ತೃಪ್ತಿಕರ | ೭ | ೧೩.೩೩ | ೧೧ | ೧೮.೩೩ |
| ೩ | ಅಪರ್ಯಾಪ್ತ | ೦೦ | – | ೦೦ | – |
| | ಒಟ್ಟು | ೬೦ | ೧೦೦ | ೬೦ | ೧೦೦ |

ಮೂಲ: ಸಂಶೋಧನಾ ಕ್ಷೇತ್ರ ಕಾರ್ಯಾಧಾರಿತ ಮಾಹಿತಿ

ಬಜಪೆ ವ್ಯವಸಾಯ ಬ್ಯಾಂಕಿನ ಆಡಳಿತಾತ್ಮಕ ವ್ಯವಸ್ಥೆಯು ಉತ್ತಮವಾಗಿದೆ ಎಂಬುದು ಅಧ್ಯಯನದಿಂದ ತಿಳಿದು ಬರುತ್ತದೆ. ಮೇಲಿನ ಕೋಷ್ಟಕದ ಪ್ರಕಾರ ಶೇಕಡಾ ೮೮ರಷ್ಟು ಫಲಾನುಭವಿಗಳು ಬ್ಯಾಂಕಿನ ಸದಸ್ಯರ ಸಂಖ್ಯೆಯು ಉತ್ತಮವಾಗಿದೆ ಎಂದೂ, ಶೇಕಡಾ ೧೨ರಷ್ಟು ಫಲಾನುಭವಿಗಳು ಸದಸ್ಯರ ಸಂಖ್ಯೆಯು ತೃಪ್ತಿಕರವಾಗಿದೆ ಎಂದೂ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಇದರಿಂದ ಬ್ಯಾಂಕಿನ ಸದಸ್ಯರ ಸಂಖ್ಯೆಯಲ್ಲಿ ಹೆಚ್ಚಳವಾಗುತ್ತಿದ್ದು, ಹೆಚ್ಚಿನ ಸದಸ್ಯರು ಬ್ಯಾಂಕಿನ ಹಲವು ಯೋಜನೆಗಳ ಸದುಪಯೋಗ ಪಡೆದುಕೊಳ್ಳುತ್ತಿರುವುದನ್ನು ಕಾಣಬಹುದಾಗಿದೆ.ಇದು ಬ್ಯಾಂಕಿನ ಪ್ರಗತಿಯ ದ್ಯೋತಕವಾಗಿದೆ.

ಕಿನ್ನಿಗೋಳಿ ಬ್ಯಾಂಕಿನ ಆಡಳಿತಾತ್ಮಕ ವ್ಯವಸ್ಥೆಯ ಬಗ್ಗೆ ಸದಸ್ಯರ ಅಭಿಪ್ರಾಯ ಸಂಗ್ರಹಿಸಿದಾಗ ಹೆಚ್ಚಿನ ಸದಸ್ಯರು ಉತ್ತಮವಾಗಿದೆ ಎಂಬ ತಮ್ಮ ಅಭಿಮತವನ್ನು ನೀಡಿದ್ದಾರೆ.ಶೇಕಡಾ ೮೨ ರಷ್ಟು ಫಲಾನುಭವಿಗಳು ಬ್ಯಾಂಕಿನ ಸದಸ್ಯರ ಸಂಖ್ಯೆಯು ಉತ್ತಮವಾಗಿದೆ ಪ್ರತಿ ವರ್ಷವು ಈ ಸಂಖ್ಯೆಯಲ್ಲಿ ಹೆಚ್ಚಳವನ್ನು ಕಾಣುತ್ತಿದ್ದೇವೆ ಎಂದು ಅಭಿಪ್ರಾಯಪಟ್ಟಿದ್ದಾರೆ.ಬ್ಯಾಂಕಿನ ಸದಸ್ಯರ ಸಂಖ್ಯೆಯಲ್ಲಿನ ಹೆಚ್ಚಳವು ಬ್ಯಾಂಕಿನ ಪ್ರಗತಿಯ ಸೂಚಕವಾಗಿದೆ.

### ೪.೩.೫.೮ ನಿರ್ದೇಶಕ ಮಂಡಳಿಯ ಬಗ್ಗೆ ಸದಸ್ಯರ ಅಭಿಪ್ರಾಯಗಳ ವಿವರ

ಇತ್ತೀಚೆಗೆ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಪೈಪೋಟಿ ಹೆಚ್ಚಿದ್ದು ಸಹಕಾರ ಸಂಸ್ಥೆಗಳು ಉಳಿಯಬೇಕಾದರೆ ತಮ್ಮ ಕಾರ್ಯ ವೈಖರಿಯನ್ನು ಉತ್ತಮ ಪಡಿಸಿಕೊಳ್ಳಲೇಬೇಕಾದ ಅನಿವಾರ್ಯತೆ ಇದೆ. ಬದಲಾಗುತ್ತಿರುವ ಆರ್ಥಿಕ ಸನ್ನಿವೇಶಕ್ಕೆ ಹೊಂದಿಕೊಳ್ಳಬೇಕಾಗುತ್ತದೆ. ಈ ಬ್ಯಾಂಕುಗಳು ಸಂಸ್ಥೆಗಳ ನಿರ್ವಹಣೆ ಮತ್ತು ಮೇಲ್ವಿಚಾರಣೆಯಲ್ಲಿ ಸೂಕ್ತ ಮಾರ್ಪಾಟಿನ ಅವಶ್ಯಕತೆ ಇದ್ದು, ಏಕಮುಖವಾದ ವ್ಯವಸ್ಥೆ ರೂಪುಗೊಳ್ಳುವುದು ಅವಶ್ಯವಾಗಿದೆ ಮತ್ತು ಈ ನಿಟ್ಟಿನಲ್ಲಿ ಬ್ಯಾಂಕಿನ ಆಡಳಿತ ವ್ಯವಸ್ಥೆಯಲ್ಲಿ ಸೂಕ್ತ ಬದಲಾವಣೆಗಳನ್ನು ಮಾಡಿ ವೃತ್ತಿಪರತೆಗೆ ಆದ್ಯತೆ ನೀಡಬೇಕಾಗಿದೆ. ಸಂಸ್ಥೆಗಳ ನಿಯಂತ್ರಣ ಮತ್ತು ಮೇಲ್ವಿಚಾರಣ ವ್ಯವಸ್ಥೆಯಲ್ಲಿ ಸಹಕಾರಿ ಬ್ಯಾಂಕುಗಳು ಇತರ ವಾಣಿಜ್ಯ ಬ್ಯಾಂಕು ಅಥವಾ ಹಣಕಾಸು ಸಂಸ್ಥೆಗಳ ಜೊತೆಯಲ್ಲಿ ನೇರವಾಗಿ ಸ್ಪರ್ಧಿಸದಿದ್ದರೂ ಸಾರ್ವಜನಿಕವಾಗಿ ತನ್ನ ಸಾಮರ್ಥ್ಯ ಮತ್ತು ಕಾರ್ಯಕ್ಷಮತೆಯನ್ನು ಸಾಬೀತು ಪಡಿಸಿಕೊಳ್ಳುವ ಅಗತ್ಯವಿದೆ; ಮತ್ತು ಈ ಉದ್ದೇಶಕ್ಕಾಗಿ ಸಮರ್ಥ ಆಡಳಿತ ವ್ಯವಸ್ಥೆಯನ್ನು ಹೊಂದಿರಬೇಕಾಗುತ್ತದೆ. ಕ್ರೀಯಾಶೀಲ ಸದಸ್ಯರು, ಅವರು ಆಯ್ಕೆ ಮಾಡುವ ನಿರ್ದೇಶಕ ಮಂಡಳಿ ಮತ್ತು ಹಾಗೆ ರೂಪುಗೊಳ್ಳುವ ಆಡಳಿತ ವ್ಯವಸ್ಥೆ ಬ್ಯಾಂಕಿನ ಎಲ್ಲಾ ಚಟುವಟಿಕೆಗಳ ಯಶಸ್ಸಿನಲ್ಲಿ ಪ್ರಧಾನ ಪಾತ್ರವಹಿಸುತ್ತದೆ.

ಕೋಷ್ಟಕ ೪.೩.೫.ಆ ನಿರ್ದೇಶಕ ಮಂಡಳಿ ಬಗ್ಗೆ ಸದಸ್ಯರ ಅಭಿಪ್ರಾಯಗಳ ವಿವರ

| ಕ್ರಮ ಸಂಖ್ಯೆ | ನಿರ್ದೇಶಕ ಮಂಡಳಿ | ಬಜಪೆ ವ್ಯವಸಾಯ ಸಹಕಾರಿ ಬ್ಯಾಂಕ್ | | ಕ್ಕಿನ್ನಿಗೋಳಿ ವ್ಯವಸಾಯ ಸಹಕಾರಿ ಬ್ಯಾಂಕ್ | |
|---|---|---|---|---|---|
| | | ಸಂಖ್ಯೆ | ಶೇಕಡಾವಾರು ಪ್ರಮಾಣ | ಸಂಖ್ಯೆ | ಶೇಕಡಾವಾರು ಪ್ರಮಾಣ |
| ೧ | ಉತ್ತಮ | ೪೮ | ೮೦.೦೦ | ೪೫ | ೭೫.೦೦ |
| ೨ | ತೃಪ್ತಿಕರ | ೧೨ | ೨೦.೦೦ | ೧೫ | ೨೫.೦೦ |
| ೩ | ಅಪರ್ಯಾಪ್ತ | ೦೦ | – | ೦೦ | – |
| | ಒಟ್ಟು | ೬೦ | ೧೦೦ | ೬೦ | ೧೦೦ |

ಮೂಲ: ಸಂಶೋಧನಾ ಕ್ಷೇತ್ರ ಕಾರ್ಯಾಧಾರಿತ ಮಾಹಿತಿ

ಶೇಕಡಾ ೮೦ ರಷ್ಟು ಫಲಾನುಭವಿಗಳು ಬಜಪೆ ವ್ಯವಸಾಯ ಬ್ಯಾಂಕಿನ ನಿರ್ದೇಶಕ ಮಂಡಳಿ ಉತ್ತಮವಾಗಿದೆ ಹಾಗೂ ಶೇಕಡಾ ೨೦ರಷ್ಟು ಫಲಾನುಭವಿಗಳು ನಿರ್ದೇಶಕ ಮಂಡಳಿ ತೃಪ್ತಿಕರವಾಗಿದೆ ಎಂದೂ ನಮೂದಿಸಿರುವುದು ಈ ಮೇಲಿನ ಕೋಷ್ಟಕದಿಂದ ಅಭಿವ್ಯಕ್ತಗೊಂಡಿದೆ. ಶೈಕ್ಷಣಿಕವಾಗಿಯೂ ವ್ಯವಹಾರಿಕವಾಗಿಯೂ ಅನುಭವ ಹೊಂದಿರುವ ಬ್ಯಾಂಕಿನ ಸದಸ್ಯರು ಒಳ್ಳೆಯ ಆಡಳಿತ ಮಂಡಳಿಯನ್ನು ಅಯ್ಕೆ ಮಾಡುವುದು ಸಾದ್ಯವಾಗುತ್ತದೆ. ಉತ್ತಮ ಆಡಳಿತ ಬ್ಯಾಂಕಿನ ಬೆಳವಣಿಗೆಗೆ ಪೂರಕವಾದ ಅಂಶವೆಂಬುದನ್ನು ಅಧ್ಯಯನವು ದೃಢಪಡಿಸುತ್ತದೆ.

ಕಿನ್ನಿಗೋಳಿ ವ್ಯವಸಾಯ ಬ್ಯಾಂಕಿನ ಶೇಕಡಾ ೭೫ ರಷ್ಟು ಫಲಾನುಭವಿಗಳು ನಿರ್ದೇಶಕ ಮಂಡಳಿ ಉತ್ತಮವಾಗಿದೆ ಮತ್ತು ಶೇಕಡಾ ೨೫ ರಷ್ಟು ಫಲಾನುಭವಿಗಳುನಿರ್ದೇಶಕ ಮಂಡಳಿ ತೃಪ್ತಿಕರವಾಗಿದೆ ಎಂಬ ಅಭಿಪ್ರಾಯ ತಿಳಿಸಿರುವುದನ್ನು ಮೇಲಿನ ಕೋಷ್ಟಕದಿಂದ ತಿಳಿಯಬಹುದಾಗಿದೆ. ಸಹಕಾರಿ ಬ್ಯಾಂಕಿನ ನಿರ್ವಹಣೆಯಲ್ಲಿ ಸದಸ್ಯರು ನಿರ್ಣಾಯಕ ಪಾತ್ರವಹಿಸುತ್ತಾರೆ. ಒಳ್ಳೆಯ ಆಡಳಿತ ಮಂಡಳಿಯನ್ನು ಆಯ್ಕೆ ಮಾಡುವಲ್ಲಿ ಇವರ ಪಾತ್ರವು ಪ್ರಮುಖವಾಗಿದೆ. ಅಧ್ಯಯನಕ್ಕೆ ಆಯ್ದಕೊಂಡ ಈ ಬ್ಯಾಂಕಿನಲ್ಲಿ ಒಳ್ಳೆಯ ನಿರ್ದೇಶಕ ಮಂಡಳಿಯಿದೆ ಎನ್ನುವುದು ಗಮನಾರ್ಹ ಅಂಶ.

**೪.೩.೫.ಇ ಲಾಭಾಂಶದ ಬಗೆಗಿನ ಸದಸ್ಯರ ಅಭಿಪ್ರಾಯದ ವಿವರ**

ಸಹಕಾರಿ ವ್ಯವಸ್ಥೆಯಲ್ಲಿ ಲಾಭ ಮತ್ತು ಉಳಿತಾಯವು ಸದಸ್ಯರಿಗೆ ಸೇರುತ್ತದೆ. ಸಾಮಾಜಿಕ ಹೊಣೆಗಾರಿಕೆಯ ಅಥವಾ ಜನಪರ ಕಾಳಜಿಯ ಯವುದೇ ಸಂಸ್ಥೆಯಾಗಿರಲಿ ಆರ್ಥಿಕ

ಲಾಭವೆನ್ನುವುದು ಅನಿವಾರ್ಯವೂ ಅಲ್ಲ ಮತ್ತು ಆ ಸಂಸ್ಥೆಯ ಯಶಸ್ಸಿನ ಪರಿಪೂರ್ಣವಾದ ಮಾನದಂಡವೂ ಅಲ್ಲ. ಇಂತಹ ಹೊಣೆಗಾರಿಕೆಯನ್ನು ನಿಭಾಯಿಸುತ್ತಾ ಸಹಕಾರಿ ಬ್ಯಾಕೊಂದು ಆರ್ಥಿಕ ಲಾಭಾಂಶವನ್ನು ನಿರಂತರವಾಗಿ ಗಳಿಸಿಕೊಳ್ಳುವುದಕ್ಕೆ ಸಾದ್ಯವಾಗುತ್ತದೆ ಎಂದರೆ ಸಾಮಾಜಿಕವಲಯದಲ್ಲೂ ಅರ್ಥಿಕ ಕ್ಷೇತ್ರದಲ್ಲೂ ಆ ಬ್ಯಾಂಕಿನ ಪ್ರಗತಿ ಶ್ರೇಷ್ಠವಾಗಿದೆ ಎಂದರ್ಥ. ಲಾಭಾಂಶದ ಬಗ್ಗೆ ಮಾಹಿತಿದಾರರು ನೀಡಿದ ಅಭಿಪ್ರಾಯವನ್ನು ಈ ಕೆಳಗಿನ ಕೋಷ್ಟಕದಲ್ಲಿ ಅಭಿವ್ಯಕ್ತಗೊಳಿಸಲಾಗಿದೆ.

ಕೋಷ್ಟಕ ೪.೩.೫.೩ ಲಾಭಾಂಶ ಬಗೆಗಿನಸದಸ್ಯರ ಅಭಿಪ್ರಾಯದ ವಿವರ

| ಕ್ರಮ ಸಂಖ್ಯೆ | ಲಾಭಾಂಶ | ಬಜಪೆ ವ್ಯವಸಾಯ ಸಹಕಾರಿ ಬ್ಯಾಂಕ್ | | ಕ್ಕಿನ್ನಿಗೋಳಿ ವ್ಯವಸಾಯ ಸಹಕಾರಿ ಬ್ಯಾಂಕ್ | |
|---|---|---|---|---|---|
| | | ಸಂಖ್ಯೆ | ಶೇಕಡಾವಾರು ಪ್ರಮಾಣ | ಸಂಖ್ಯೆ | ಶೇಕಡಾವಾರು ಪ್ರಮಾಣ |
| ೧ | ಉತ್ತಮ | ೫೪ | ೯೦.೦೦ | ೪೭ | ೭೮.೩೩ |
| ೨ | ತೃಪ್ತಿಕರ | ೦೬ | ೧೦.೦೦ | ೧೩ | ೨೧.೬೭ |
| ೩ | ಅಪರ್ಯಾಪ್ತ | ೦೦ | – | ೦೦ | – |
| | ಒಟ್ಟು | ೬೦ | ೧೦೦ | ೬೦ | ೧೦೦ |

ಮೂಲ: ಸಂಶೋಧನಾ ಕ್ಷೇತ್ರ ಕಾರ್ಯಾಧಾರಿತ ಮಾಹಿತಿ

ಬಜಪೆ ವ್ಯವಸಾಯ ಸಹಕಾರಿ ಬ್ಯಾಂಕಿನ ಲಾಭಾಂಶದ ಬಗ್ಗೆ ಸದಸ್ಯರ ಅಭಿಪ್ರಾಯವನ್ನು ಕೇಳಿದಾಗ ಶೇಕಡಾ ೯೦ರಷ್ಟು ಫಲಾನುಭವಿಗಳು ಲಾಭಾಂಶವು ಉತ್ತಮವಾಗಿದೆ ಎಂದೂ, ಶೇಕಡಾ೧೦ರಷ್ಟು ಫಲಾನುಭವಿಗಳು ಲಾಭಾಂಶವು ತೃಪ್ತಿಕರವಾಗಿದೆ ಎಂದೂ ತಿಳಿಸಿರುವುದು ಈ ಮೇಲಿನ ಕೋಷ್ಟಕದಿಂದ ಕಂಡುಬರುತ್ತದೆ.

ಶೇಕಡಾ ೭೮ರಷ್ಟು ಫಲಾನುಭವಿಗಳು ಕಿನ್ನಿಗೋಳಿ ವ್ಯವಸಾಯ ಬ್ಯಾಂಕಿನ ಲಾಭಾಂಶವು ಉತ್ತಮವಾಗಿದೆಯೆಂದೂ, ಶೇಕಡಾ೨೨ರಷ್ಟು ಫಲಾನುಭವಿಗಳು ಲಾಭಾಂಶವು ತೃಪ್ತಿಕರವಾಗಿದಯೆಂದು ತಮ್ಮ ಅಭಿಪ್ರಾಯದಲ್ಲಿ ನಮೂದಿಸಿರುವುದು ಅಧ್ಯಯನದಿಂದ ಕಂಡುಕೊಳ್ಳಬಹುದಾಗಿದೆ. ಈ ಎರಡೂ ವ್ಯವಸಾಯ ಬ್ಯಾಂಕುಗಳು ನೀಡುವ ಲಾಭಾಂಶದ ಬಗ್ಗೆ ಸದಸ್ಯರಿಗೆ ಒಳ್ಳೆಯ ಅಭಿಪ್ರಾಯವಿರುವುದು ಒಳ್ಳೆಯ ಬೆಳವಣಿಗೆಯಾಗಿದೆ.

### ೪.೩.೫.ಈ ಸರಕಾರದ ಹಸ್ತಕ್ಷೇಪದ ಬಗ್ಗೆ ಸದಸ್ಯರ ಅಭಿಪ್ರಾಯದ ವಿವರ

ಸಹಕಾರದ ಬೆಳವಣಿಗೆಯಲ್ಲಿ ಸರ್ಕಾರದ ಪಾಲು ಕೂಡ ಇದೆ. ಕಾನೂನು ನಿರೂಪಿಸುವುದು ಮತ್ತು ಆಡಳಿತಾತ್ಮಕವಾದ ನಿಯಂತ್ರಣದ ಮೂಲಕ ಬ್ಯಾಂಕಿಗೆ ಅಗತ್ಯ ನಿರ್ದೇಶನಗಳನ್ನು ನೀಡುವುದು ಸರ್ಕಾರದ ಹಸ್ತಕ್ಷೇಪವೆ ಆಗಿದ್ದರೂ ಅದು ಅಗತ್ಯ ಮತ್ತು ಅನಿವಾರ್ಯ. ಇದರಿಂದ ಜನರ ವಿಶ್ವಾಸವು ಹೆಚ್ಚಾಗುತ್ತದೆ ಮತ್ತು ಈ ವಿಧವಾದ ಹಸ್ತಕ್ಷೇಪ ಸಾರ್ವಜನಿಕವಲಯದಲ್ಲಿ ಈಗಾಗಲೆ ಸ್ವೀಕೃತವಾಗಿದೆ ಆದರೆ ರಾಜಕೀಯ ಪ್ರೇರಿತ ಹಸ್ತಕ್ಷೇಪವನ್ನು ಬ್ಯಾಂಕಿನ ಸದಸ್ಯರು ಬಯಸುವುದಿಲ್ಲ. ರಾಜಕೀಯ ಪ್ರೇರಿತ ಹಸ್ತಕ್ಷೇಪಗಳು ಎಲ್ಲಾ ಕ್ಷೇತ್ರದಲ್ಲೂ ಕಂಡುಬರುತ್ತದೆ. ಇದು ಖೇದಕರ ಸಂಗತಿ.

ಕೋಷ್ಟಕ ೪.೩.೫.ಈ. ಸರಕಾರದ ಹಸ್ತಕ್ಷೇಪದ ಬಗ್ಗೆ ಸದಸ್ಯರ ಅಭಿಪ್ರಾಯದ ವಿವರ

| ಕ್ರಮ ಸಂಖ್ಯೆ | ಸರಕಾರದ ಹಸ್ತಕ್ಷೇಪ | ಬಜಪೆ ವ್ಯವಸಾಯ ಸಹಕಾರಿ ಬ್ಯಾಂಕ್ | | ಕಿನ್ನಿಗೋಳಿ ವ್ಯವಸಾಯ ಸಹಕಾರಿ ಬ್ಯಾಂಕ್ | |
|---|---|---|---|---|---|
| | | ಸಂಖ್ಯೆ | ಶೇಕಡಾವಾರು ಪ್ರಮಾಣ | ಸಂಖ್ಯೆ | ಶೇಕಡಾವಾರು ಪ್ರಮಾಣ |
| ೧ | ಅತೀ ಹೆಚ್ಚು | ೧೨ | ೨೦.೦೦ | ೧೫ | ೨೫.೦೦ |
| ೨ | ಸಾಮಾನ್ಯ | ೨೯ | ೪೮.೩೩ | ೩೪ | ೫೬.೬೭ |
| ೩ | ನಗಣ್ಯ | ೧೯ | ೩೧.೬೭ | ೧೧ | ೧೮.೩೩ |
| | ಒಟ್ಟು | ೬೦ | ೧೦೦ | ೬೦ | ೧೦೦ |

ಮೂಲ: ಸಂಶೋಧನಾ ಕ್ಷೇತ್ರ ಕಾರ್ಯಾಧಾರಿತ ಮಾಹಿತಿ

ಬಜಪೆ ವ್ಯವಸಾಯ ಸಹಕಾರಿ ಬ್ಯಾಂಕಿನ ಕಾರ್ಯ ಚಟುವಟಿಕೆಯಲ್ಲಿ ಸರ್ಕಾರದ ಹಸ್ತಕ್ಷೇಪ ಸಾಮಾನ್ಯವಾಗಿದೆ ಎಂದು ಶೇಕಡಾ ೪೮ರಷ್ಟು ಫಲಾನುಭವಿಗಳು ಮತ್ತು ಶೇಕಡಾ ೩೨ರಷ್ಟು ಫಲಾನುಭವಿಗಳು ಸರ್ಕಾರದ ಹಸ್ತಕ್ಷೇಪದಲ್ಲಿ ವಿಶೇಷವೇನೂ ಇಲ್ಲ ಎಂದು ಅಭಿಪ್ರಾಯ ವ್ಯಕ್ತಪಡಿಸಿರುವುದು ಕೋಷ್ಟಕ ೪.೩.೫.ಈ ನಿಂದ ದೃಢಪಡುತ್ತದೆ.

ಕಿನ್ನಿಗೋಳಿ ವ್ಯವಸಾಯ ಬ್ಯಾಂಕಿನ ಕಾರ್ಯ ಚಟುವಟಿಕೆಯಲ್ಲಿ ಸರಕಾರದ ಹಸ್ತಕ್ಷೇಪ ಸಾಮಾನ್ಯವಾಗಿದೆಯೆಂದು ಶೇಕಡಾ ೫೭ರಷ್ಟು ಫಲಾನುಭವಿಗಳು ಹಾಗು ಶೇಕಡಾ೧೮ರಷ್ಟು ಫಲಾನುಭವಿಗಳು ಸರ್ಕಾರದ ಹಸ್ತಕ್ಷೇಪದಲ್ಲಿ ವಿಶೇಷವೇನು ಇಲ್ಲವೆಂದು ತಮ್ಮ ಅಭಿಪ್ರಾಯದಲ್ಲಿ ನಮೂದಿಸಿರುವುದು ಮೇಲಿನ ಕೋಷ್ಟಕದಿಂದ ಅಭಿವ್ಯಕ್ತಗೊಳ್ಳುತ್ತದೆ.

## ೪.೪ ಕೃಷಿ ಸಹಕಾರಿ ಬ್ಯಾಂಕ್‌ನ ಚಟುವಟಿಕೆಗಳು ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಯ ಮೇಲೆ ಬೀರುತ್ತಿರುವ ಪ್ರಭಾವ

ಸಹಕಾರಿ ಬ್ಯಾಂಕಿನ ಪಾಲ್ಗೊಳ್ಳುವಿಕೆಯಿಂದ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಕ್ಷೇತ್ರದಲ್ಲಿ ಆಗುತ್ತಿರುವ ಬದಲಾವಣೆ ಮತ್ತು ಪರಿಣಾಮಗಳನ್ನು ಕರಾರುವಕ್ಕಾಗಿ ಲೆಕ್ಕಮಾಡಿ ತಿಳಿಸುವುದಕ್ಕೆ (Quantification) ಅನೇಕ ಇತಿಮಿತಿಗಳಿದೆ. ಕಾರಣ–ಪರಿಣಾಮಗಳ ನಿಖರವಾದ ಅಧ್ಯಯನವು ಕಷ್ಟ. ಆದರೂ ಬ್ಯಾಂಕಿನ ನಿರಂತರವಾಗಿ ವಿಸ್ತಾರಗೊಳ್ಳುತ್ತಿರುವ ಚಟುವಟಿಕೆಗಳು ಮತ್ತು ಅದೇ ಅವಧಿಯಲ್ಲಿ ಆ ಬ್ಯಾಂಕಿನ ವ್ಯಾಪ್ತಿಯಲ್ಲಿ ಕಂಡುಬರುವ ಕೃಷಿ ಮತ್ತು ಗ್ರಾಮೀಣ ಕೆಲಸ ಕಾರ್ಯಗಳಲ್ಲಿನ ಬದಲಾವಣೆಗಳು ಕೆಲವು ಸೂಚಕಗಳ(Indicator)ಮೂಲಕ ನಮಗೆ ಗೋಚರವಾಗುತ್ತದೆ. ಬ್ಯಾಂಕು ಒದಗಿಸುವ ಸಾಲ ಸೌಲಭ್ಯಗಳು, ಅದರಿಂದ ನಿರ್ದಿಷ್ಟ ಬೆಳೆಗಳಲ್ಲಿ ಗುರುತಿಸಬಹುದಾದ ಉತ್ಪಾದಕತೆ–ಉತ್ಪನ್ನಗಳ ಆಧಿಕ್ಯ, ಮಾರುಕಟ್ಟೆಯ ಪ್ರಗತಿಗಳೆಲ್ಲಾ ಈ ರೀತಿಯ ಸೂಚಕಗಳಾಗಿವೆ. ಕೃಷಿಕರ ಕ್ಷೆಮಾಭಿವೃದ್ಧಿಯಲ್ಲಿ ಸಾರ್ಥಕ ಸೇವೆಯನ್ನು ಬ್ಯಾಂಕು ಸಲ್ಲಿಸುತ್ತಿದ್ದು ಪ್ರಮುಖ ಬೆಳೆಗಳಾದ ಭತ್ತ, ತೆಂಗು, ಕಬ್ಬು, ಅಡಿಕೆ ಮುಂತಾದ ಬೆಳೆಗಳನ್ನು ಬೆಳೆಸಲು ಅಲ್ಪಾವಧಿ ಸಾಲವನ್ನು ನೀಡುತ್ತಿದೆ. ಸರಕಾರದ ಪ್ರಾಯೋಜಿತ ಕಾರ್ಯಕ್ರಮಗಳಾದ ಬಯೋಗ್ಯಾಸ್ ಐ.ಆರ್.ಡಿ.ಪಿ. ನೂರು ಬಾವಿ ಯೋಜನೆ ಮುಂತಾದ ಹಲವು ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವಲ್ಲಿ ಬ್ಯಾಂಕು ಮಹತ್ವದ ಪಾತ್ರವಹಿಸುತ್ತಿದ್ದು ಈ ಮೂಲಕ ಗ್ರಾಮೀಣ ಅಬಿವೃದ್ಧಿಗೆ ಮಹತ್ವದ ಕೊಡುಗೆಯನ್ನು ನೀಡುತ್ತಿದೆ. ಗ್ರಾಮೀಣ ರೈತರಿಗೆ ಪಂಪ್ಸೆಟ್, ಪವರ್‌ಟಿಲ್ಲರ್, ಹೈನುಗಾರಿಕೆ, ಕೋಳಿ ಸಾಕಣೆ, ಕೆರೆ ರಿಪೇರಿ, ಭೂ ಅಭಿವೃದ್ಧಿ, ಕೃಷಿ ಕ್ಷೇತ್ರ, ಗೃಹ ನಿರ್ಮಾಣ ಇವುಗಳಿಗೆ ಮಧ್ಯಾವಧಿ ಹಾಗೂ ದೀರ್ಘಾವಧಿ ಸಾಲಗಳನ್ನು ನೀಡುವುದರೊಂದಿಗೆ ಆರ್ಥಿಕ ಸ್ವಾವಲಂಬಿಗಳಾಗಲು ಸಹಕಾರಿ ಬ್ಯಾಂಕು ನೆರವಾಗುತ್ತಿದೆ. ಈ ರೀತಿಯಾಗಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಯಲ್ಲಿ ಕೃಷಿ ಬ್ಯಾಂಕುಗಳು ಪ್ರಮುಖ ಪಾತ್ರವಹಿಸುತ್ತದೆ.

### ೪.೪.೧. ಅ ಕೃಷಿಯಲ್ಲಿನ ಪ್ರಗತಿಯ ವಿವರ

ಕೃಷಿಕರ ಕ್ಷೇಮಾಭಿವೃದ್ಧಿಯಲ್ಲಿ ಸಹಕಾರ ಸಂಸ್ಥೆಗಳು ಸಾರ್ಥಕ ಸೇವೆಯನ್ನು ಸಲ್ಲಿಸುತ್ತಿದೆ. ಕೃಷಿಕರಿಗೆ ಬೇಕಾದ ಸಾಲ ಸೌಲಭ್ಯಗಳನ್ನು ನೀಡುವಲ್ಲಿ ಕೃಷಿ ಸಹಕಾರಿ ಬ್ಯಾಂಕುಗಳು ಯಶಸ್ವಿಯಾಗಿದೆ. ಹಲವು ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವಲ್ಲಿ ಈ ಬ್ಯಾಂಕುಗಳು ಮಹತ್ವದ ಪಾತ್ರವಹಿಸುತ್ತಿದ್ದು ಈ ಮೂಲಕ ಗ್ರಾಮೀಣ ಅಬಿವೃದ್ಧಿಗೆ ತನ್ನದೇ ಆದ

ಕೊಡುಗೆಯನ್ನು ನೀಡುತ್ತಿದೆ. ಗ್ರಾಮೀಣ ರೈತರಿಗೆ ಕೃಷಿ ಅಬಿವೃದ್ಧಿಗೊಳಿಸಲು ಬೇಕಾದ ಅಲ್ಪಾವಧಿ, ಮಧ್ಯಾವಧಿ ಹಾಗೂ ದೀರ್ಘಾವಧಿ ಸಾಲಗಳನ್ನು ನೀಡುವುದರೊಂದಿಗೆ ಸದಸ್ಯರು ಆರ್ಥಿಕ ಸ್ವಾವಲಂಬಿಗಳಾಗಲು ಸಹಕಾರಿ ಬ್ಯಾಂಕುಗಳು ನೆರವನ್ನು ಚಾಚುತ್ತಿವೆ. ಹೀಗೆ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಯಲ್ಲಿ ಕೃಷಿ ಬ್ಯಾಂಕುಗಳು ಪ್ರಮುಖ ಪಾತ್ರವಹಿಸುತ್ತವೆ. ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ಕೃಷಿಯಲ್ಲಿನ ಪ್ರಗತಿಯ ಬಗ್ಗೆ ಕೇಳಲಾದ ಪ್ರಶ್ನೆಗೆ ಮಾಹಿತಿದಾರರು ನೀಡಿದ ಅಭಿಪ್ರಾಯವನ್ನು ಈ ಕೆಳಗಿನ ಕೋಷ್ಟಕದಲ್ಲಿ ಅಭಿವ್ಯಕ್ತಗೊಳಿಸಲಾಗಿದೆ.

ಕೋಷ್ಟಕ ೪.೪.೧.ಅ ಕೃಷಿಯಲ್ಲಿನ ಪ್ರಗತಿ ವಿವರ

| ಕ್ರಮ ಸಂಖ್ಯೆ | ಕೃಷಿಯಲ್ಲಿನ ಪ್ರಗತಿ | ಬಜಪೆ ವ್ಯವಸಾಯ ಸಹಕಾರಿ ಬ್ಯಾಂಕ್ | | ಕಿನ್ನಿಗೋಳಿ ವ್ಯವಸಾಯ ಸಹಕಾರಿ ಬ್ಯಾಂಕ್ | |
|---|---|---|---|---|---|
| | | ಸಂಖ್ಯೆ | ಶೇಕಡಾವಾರು ಪ್ರಮಾಣ | ಸಂಖ್ಯೆ | ಶೇಕಡಾವಾರು ಪ್ರಮಾಣ |
| ೧ | ಗಣನೀಯ ಪ್ರಗತಿ | ೪೧ | ೬೮.೩೩ | ೩೧ | ೫೧.೬೭ |
| ೨ | ಸಾಮಾನ್ಯ ಪ್ರಗತಿ | ೧೬ | ೨೬.೬೭ | ೧೮ | ೩೦.೦೦ |
| ೩ | ವಿಶೇಷವೇನೂ ಇಲ್ಲ | ೦೩ | ೫.೦೦ | ೧೧ | ೧೮.೩೩ |
| | ಒಟ್ಟು | ೬೦ | ೧೦೦ | ೬೦ | ೧೦೦ |

ಮೂಲ: ಸಂಶೋಧನಾ ಕ್ಷೇತ್ರ ಕಾರ್ಯಾಧಾರಿತ ಮಾಹಿತಿ

ಬಜಪೆ ವ್ಯವಸಾಯ ಬ್ಯಾಂಕಿನಲ್ಲಿ ಶೇಕಡಾ ೬೮ರಷ್ಟು ಫಲಾನುಭವಿಗಳು ಕೃಷಿಯಲ್ಲಿ ಗಣನೀಯ ಪ್ರಗತಿಯಾಗಿದೆಯೆಂದೂ, ಶೇಕಡಾ ೨೭ರಷ್ಟು ಫಲಾನುಭವಿಗಳು ಕೃಷಿಯಲ್ಲಿ ಸಾಮಾನ್ಯ ಪ್ರಗತಿಯಾಗಿದೆಯೆಂದೂ ಮತ್ತು ಶೇಕಡಾ ೫ರಷ್ಟು ಫಲಾನುಭವಿಗಳು ಕೃಷಿಯಲ್ಲಿನ ಪ್ರಗತಿಯಲ್ಲಿ ಅಷ್ಟೇನು ವಿಶೇಷವಿಲ್ಲವೆಂಬ ಅಭಿಪ್ರಾಯವನ್ನು ನಮೂದಿಸಿರುವುದು ಅಧ್ಯಯನದಿಂದ ತಿಳಿದುಬಂದಿದೆ. ಹೆಚ್ಚಿನ ಸದಸ್ಯರು ಕೃಷಿಯಲ್ಲಿ ಗಣನೀಯ ಪ್ರಗತಿಯಾಗಿದೆ ಎಂದಿರುವುದು ಒಳ್ಳೆಯ ಬೆಳವಣಿಗೆ.

ಕಿನ್ನಿಗೋಳಿ ವ್ಯವಸಾಯ ಬ್ಯಾಂಕಿನಲ್ಲಿ ಶೇಕಡಾ ೫೨ರಷ್ಟು ಫಲಾನುಭವಿಗಳು ಕೃಷಿಯಲ್ಲಿ ಗಣನೀಯ ಪ್ರಗತಿಯಾಗಿದೆಯೆಂದೂ, ಶೇಕಡಾ ೩೦ರಷ್ಟು ಫಲಾನುಭವಿಗಳು ಕೃಷಿಯಲ್ಲಿ ಸಾಮಾನ್ಯ ಪ್ರಗತಿಯಾಗಿದೆಯೆಂದೂ ಮತ್ತು ಶೇಕಡಾ ೧೮ರಷ್ಟು ಫಲಾನುಭವಿಗಳು ಕೃಷಿಯಲ್ಲಿನ ಪ್ರಗತಿಯಲ್ಲಿ ಅಷ್ಟೇನು ವಿಶೇಷವಿಲ್ಲವೆಂದು ತಮ್ಮ ಅಭಿಪ್ರಾಯವನ್ನು ಅಭಿವ್ಯಕ್ತಗೊಳಿಸಿದ್ದಾರೆ.ಈ ವ್ಯವಸಾಯ ಬ್ಯಾಂಕು ತನ್ನ ವ್ಯಾಪ್ತಿಯಲ್ಲಿ ಬರುವ ಕೃಷಿಕರಿಗೆ ಅನೇಕ ರೀತಿಯ ಸಾಲ

ಸೌಲಭ್ಯಗಳನ್ನು ನೀಡುತ್ತಿದೆ. ಇದರ ಸಂಪೂರ್ಣ ಪ್ರಯೋಜನವನ್ನು ಕೃಷಿಕರು ಪಡೆದುಕೊಳ್ಳುತ್ತಿದ್ದಾರೆ ಮತ್ತು ಕೃಷಿಯಲ್ಲಿ ಗಣನೀಯ ಪ್ರಗತಿಯಾಗಿದೆ ಎಂದಿರುವುದು ಗಮನಾರ್ಹ ಅಂಶ.

### ೪.೪.೧.ಆ ಸದಸ್ಯರಲ್ಲಿ ಉಳಿತಾಯ ಪ್ರವೃತಿ ವಿವರ

ಉಳಿತಾಯವು ಜನರ ಸಂಪನ್ಮೂಲಗಳ ಹೆಚ್ಚಳಕ್ಕೆ ಕಾರಣವಾಗಿದೆ.ಇದು ಆಬಿವೃದ್ಧಿಗೆ ಪೂರಕವಾಗಿರುವ ಸಂಗತಿಯಾಗಿದೆ. ಕೃಷಿ ಸಹಕಾರಿ ಬ್ಯಾಂಕುಗಳು ರೈತರ ಹುಟ್ಟುವಳಿಗೆ ಯೋಗ್ಯವಾದ ಪ್ರತಿಫಲವನ್ನು ದೊರಕಿಸಿ ಕೊಡುವಲ್ಲಿ ನೆರವಾಗುತ್ತದೆ ಮತ್ತು ತನ್ಮೂಲಕ ಸದಸ್ಯರಲ್ಲಿ ಉಳಿತಾಯ ಪ್ರವೃತ್ತಿಯನ್ನು ಹೆಚ್ಚಿಸುತ್ತದೆ.

ಕೋಷ್ಟಕ ೪.೪.೧.ಆ ಸದಸ್ಯರಲ್ಲಿ ಉಳಿತಾಯ ಪ್ರವೃತಿ ವಿವರ

| ಕ್ರಮ ಸಂಖ್ಯೆ | ಸದಸ್ಯರಲ್ಲಿ ಉಳಿತಾಯ ಪ್ರವೃತ್ತಿ | ಬಜಪೆ ವ್ಯವಸಾಯ ಸಹಕಾರಿ ಬ್ಯಾಂಕ್ | | ಕ್ಕಿನ್ನಿಗೋಳಿ ವ್ಯವಸಾಯ ಸಹಕಾರಿ ಬ್ಯಾಂಕ್ | |
|---|---|---|---|---|---|
| | | ಸಂಖ್ಯೆ | ಶೇಕಡಾವಾರು ಪ್ರಮಾಣ | ಸಂಖ್ಯೆ | ಶೇಕಡಾವಾರು ಪ್ರಮಾಣ |
| ೧ | ಗಣನೀಯವಾಗಿ ವೃದ್ಧಿಸಿದೆ | ೪೮ | ೮೦.೦೦ | ೩೯ | ೬೫.೦೦ |
| ೨ | ಸಾಮಾನ್ಯವಾಗಿ ವೃದ್ಧಿಸಿದೆ | ೧೨ | ೨೦.೦೦ | ೧೪ | ೨೩.೩೩ |
| ೩ | ವಿಶೇಷವೇನೂ ಇಲ್ಲ | ೦೦ | – | ೦೭ | ೧೧.೬೭ |
| | ಒಟ್ಟು | ೬೦ | ೧೦೦ | **೬೦** | **೧೦೦** |

ಮೂಲ: ಸಂಶೋಧನಾ ಕ್ಷೇತ್ರ ಕಾರ್ಯಾಧಾರಿತ ಮಾಹಿತಿ

ಅಧ್ಯಯನದಲ್ಲಿ ಕಂಡು ಬರುವಂತೆ ಶೇಕಡಾ ೮೦ರಷ್ಟು ಫಲಾನುಭವಿಗಳು ಬಜಪೆ ವ್ಯವಸಾಯ ಬ್ಯಾಂಕಿನಿಂದಾಗಿ ತಮ್ಮಲ್ಲಿ ಉಳಿತಾಯವು ಗಣನೀಯವಾಗಿ ವೃದ್ಧಿಸಿದೆಯೆಂದೂ ಮತ್ತು ಶೇಕಡಾ ೨೦ರಷ್ಟು ಫಲಾನುಭವಿಗಳು ಸಾಮಾನ್ಯವಾಗಿ ವೃದ್ಧಿಸಿದೆ ಎಂದು ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ತಿಳಿಸಿರುವುದು ಮೇಲಿನ ಕೋಷ್ಟಕದಿಂದ ಸ್ಪಷ್ಟವಾಗುತ್ತದೆ. ಹೆಚ್ಚಿನ ಸದಸ್ಯರಯ ತಮ್ಮಲ್ಲಿನ ಉಳಿತಾಯ ಪ್ರವೃತ್ತಿಯು ಹೆಚ್ಚಳವಾಗಿದೆ ಎಂದಿರುವುದು ಒಳ್ಳೆಯ ಬೆಳವಣಿಗೆ. ಬ್ಯಾಂಕು ಕಡಿಮೆ ಆದಾಯವುಳ್ಳ ಜನರ ಸಂಪನ್ಮೂಲಗಳ ಹೆಚ್ಚಳಕ್ಕೆ ಕಾರಣವಾಗಿರುವುದು ಮಹತ್ವದ ಸಂಗತಿ.

ಅಧ್ಯಯನದಲ್ಲಿ ಕಂಡು ಬರುವಂತೆ ಶೇಕಡಾ ೬೫ರಷ್ಟು ಫಲಾನುಭವಿಗಳು ಕಿನ್ನಿಗೋಳಿ ವ್ಯವಸಾಯ ಬ್ಯಾಂಕಿನಿಂದಾಗಿ ತಮ್ಮಲ್ಲಿ ಉಳಿತಾಯವು ಗಣನೀಯವಾಗಿ ವೃದ್ಧಿಸಿದೆಯೆಂದೂ,

ಶೇಕಡಾ ೨೩ರಷ್ಟು ಫಲಾನುಭವಿಗಳು ಸಾಮಾನ್ಯವಾಗಿ ವೃದ್ಧಿಸಿದೆಯೆಂದೂ ಮತ್ತು ಶೇಕಡಾ ೧೨ರಷ್ಟು ಫಲಾನುಭವಿಗಳು ಉಳಿತಾಯ ವೃದ್ಧಿಯಲ್ಲಿ ವಿಶೇಷತೆಯೇನೂ ಇಲ್ಲವೆಂದಿರುವುದು ಮೇಲಿನ ಕೋಷ್ಟಕದಿಂದ ತಿಳಿಯಬಹುದಾಗಿದೆ. ಈ ಬ್ಯಾಂಕು ತನ್ನ ಸದಸ್ಯರ ಗಳಿಕೆಯಲ್ಲಿನ ಹೆಚ್ಚಳಕ್ಕೆ ಕಾರಣವಾಗಿರುವುದು ಗಮನಾರ್ಹ ಅಂಶ.

### ೪.೪.೧. ಇ ಸಹಕಾರ ತತ್ವದತಿಳುವಳಿಕೆಯ ವಿವರ

ಗ್ರಾಮಗಳ ಸಮಗ್ರ ಅಭಿವೃದ್ಧಿಯಿಂದಲೇ ದೇಶದ ಪ್ರಗತಿ ಇದು ಸ್ವತಂತ್ರ್ಯಾಪೂರ್ವದ ಮತ್ತು ಸ್ವತಂತ್ರ್ಯಾನಂತರದ ರಾಷ್ಟ್ರನಾಯಕರ ನಿಲುವು.ಈ ತತ್ವವನ್ನಾಧರಿಸಿ ಆರ್ಥಿಕಾಭಿವೃದ್ಧಿಯ ಹೊಂಗಸನ್ನು ಹೊತ್ತು "ತಾನು ಎಲ್ಲರಿಗಾಗಿ ಎಲ್ಲರೂ ತನಗಾಗಿ" ಎಂಬ ಧ್ಯೇಯವಾಕ್ಯದೊಂದಿಗೆ ಸಂಘಟಿತವಾದ ಸಹಕಾರ ಕ್ಷೇತ್ರದ ಬಲವರ್ಧನೆಗೆ ಪ್ರಜ್ಞಾವಂತ ಯುವ ಶಕ್ತಿ ಮುಂದಾಗುವುದರ ಜೊತೆಗೆ ಗ್ರಾಮೀಣ ಪ್ರದೇಶದಲ್ಲಿ ಸಹಕಾರ ತತ್ವ ಪಸರಿಸಲು ಮುಂದಾಗಬೇಕು. ಈ ಮೂಲಕ ಸಹಕಾರ ತತ್ವದ ಜ್ಞಾನ ಹೆಚ್ಚಿಸಿಕೊಳ್ಳಲು ಸಾಧ್ಯವಾಗಿದೆ.

ಕೋಷ್ಟಕ ೪.೪.೧.ಇ ಸಹಕಾರ ತತ್ವದತಿಳುವಳಿಕೆ ಬಗ್ಗೆ ಅಭಿಪ್ರಾಯದ ವಿವರ

| ಕ್ರಮ ಸಂಖ್ಯೆ | ಸಹಕಾರ ತತ್ವದತಿಳುವಳಿಕೆ | ಬಜಪೆ ವ್ಯವಸಾಯ ಸಹಕಾರಿ ಬ್ಯಾಂಕ್ | | ಕ್ಕಿನ್ನಿಗೋಳಿ ವ್ಯವಸಾಯ ಸಹಕಾರಿ ಬ್ಯಾಂಕ್ | |
|---|---|---|---|---|---|
| | | ಸಂಖ್ಯೆ | ಶೇಕಡಾವಾರು ಪ್ರಮಾಣ | ಸಂಖ್ಯೆ | ಶೇಕಡಾವಾರು ಪ್ರಮಾಣ |
| ೧ | ಗಣನೀಯವಾಗಿ ವೃದ್ಧಿಸಿದೆ | ೩೯ | ೬೫.೦೦ | ೪೧ | ೬೮.೩೩ |
| ೨ | ಸಾಮಾನ್ಯವಾಗಿ ವೃದ್ಧಿಸಿದೆ | ೧೫ | ೨೫.೦೦ | ೧೩ | ೨೧.೬೭ |
| ೩ | ವಿಶೇಷವೇನೂ ಇಲ್ಲ | ೦೬ | ೧೦.೦೦ | ೦೬ | ೧೦.೦೦ |
| | ಒಟ್ಟು | ೬೦ | ೧೦೦ | ೬೦ | ೧೦೦ |

ಮೂಲ: ಸಂಶೋಧನಾ ಕ್ಷೇತ್ರ ಕಾರ್ಯಾಧಾರಿತ ಮಾಹಿತಿ

ಶೇಕಡಾ ೬೫ರಷ್ಟು ಫಲಾನುಭವಿಗಳು ಬಜಪೆ ವ್ಯವಸಾಯ ಬ್ಯಾಂಕ್‌ನಿಂದಾಗಿ ತಮ್ಮಲ್ಲಿ ಸಹಕಾರ ತತ್ವದ ತಿಳುವಳಿಕೆಯು ಗಣನೀಯವಾಗಿ ವೃದ್ಧಿಸಿದೆ ಎಂದಿರುವುದು ಕೋಷ್ಟಕ ೪.೪.೧.ಇ ನಿಂದ ದೃಢಪಡುತ್ತದೆ. ಸಹಕಾರ ಕ್ಷೇತ್ರ ಆರೋಗ್ಯಕರವಾಗಿ ಬೆಳೆಯಲು ಈ ಕ್ಷೇತ್ರದ ಸಂಪೂರ್ಣ ಮಾಹಿತಿ ತೀರಾ ಅವಶ್ಯ. ಇಂತಹ ಜ್ಞಾನದ ವೃದ್ಧಿ ಈ ಬ್ಯಾಂಕಿನಿಂದಾಗಿದೆ ಎನ್ನುವುದು ಪ್ರಮುಖ ಸಂಗತಿಯಾಗಿದೆ.

ಕಿನ್ನಿಗೋಳಿ ವ್ಯವಸಾಯ ಬ್ಯಾಂಕ್‌ನ ಶೇಕಡಾ ೬೮ರಷ್ಟು ಫಲಾನುಭವಿಗಳು ಸಹಕಾರ ತತ್ವದ ತಿಳುವಳಿಕೆಯು ಗಣನೀಯವಾಗಿ ವೃದ್ಧಿಸಿದೆಯೆಂದೂ ಶೇಕಡಾ ೨೨ರಷ್ಟು ಫಲಾನುಭವಿಗಳು ಸಾಮಾನ್ಯವಾಗಿ ವೃದ್ಧಿಸಿದೆಯೆಂದೂ ಮತ್ತು ಶೇಕಡಾ ೧೦ರಷ್ಟು ಫಲಾನುಭವಿಗಳು ಸಹಕಾರ ತಿಳುವಳಿಕೆಯು ವಿಶೇಷವಾಗಿ ವೃದ್ಧಿಯಾಗಿಲ್ಲವೆಂದೂ ಅಭಿಪ್ರಾಯವನ್ನು ವ್ಯಕ್ತಗೊಳಿಸಿದ್ದಾರೆ. ಬ್ಯಾಂಕಿನ ಹೆಚ್ಚಿನ ಫಲಾನುಭವಿಗಳು ಸಹಕಾರ ತತ್ವದ ತಿಳುವಳಿಕೆಯ ವೃದ್ಧಿಯು ಈ ಬ್ಯಾಂಕಿನಿಂದಾಗಿದೆ ಎಂದಿರುವುದು ಗಮನಿಸುವ ಅಂಶವಾಗಿದೆ. ಇದರಿಂದ ಈ ವ್ಯವಸಾಯ ಬ್ಯಾಂಕು ಗ್ರಾಮೀಣ ಮಟ್ಟದಲ್ಲಿ ಸಹಕಾರ ತತ್ವವನ್ನು ಪಸರಿಸುವಲ್ಲಿ ಪ್ರಮುಖ ಪಾತ್ರವಹಿಸಿರುವುದು ಬೆಳಕಿಗೆ ಬರುತ್ತದೆ.

**೪.೪.೧. ಈ ಸಮಾಜ ಸಂಪರ್ಕದಲ್ಲಿ ವೃದ್ಧಿ**

ಸಹಕಾರ ತತ್ವದ ಧ್ಯೇಯವಾದ “ಸಮ ಪಾಲು ಸಹ ಬಾಳು” ಎನ್ನುವ ವಾಕ್ಯದಲ್ಲಿಯೇ ಸಾಮಾಜಿಕ ಸಂಪರ್ಕದ ಪರಿಕಲ್ಪನೆ ಅಡಗಿದೆ. ಸದಸ್ಯರು ತಮ್ಮೊಳಗಿನ ಸಂಪರ್ಕ ಸಂಬಂಧಗಳನ್ನು ಸಮರ್ಪಕವಾಗಿ ರೂಪಿಸಿಕೊಳ್ಳವಲ್ಲಿಂದ ಸಮಾಜದ ಪ್ರಧಾನವಾಹಿನಿಯಲ್ಲಿ ತಾವಾಗಿಯೇ ಸೇರಲ್ಪಡುತ್ತಾರೆ. ಇದರಿಂದ ರೂಪುಗೊಳ್ಳಬಹುದಾದ ಉತ್ತಮ ಸಮಾಜ ಜೀವನಕ್ಕೆ ಸಹಕಾರಿ ಸಿದ್ಧಾಂತ ಪೂರಕವಾಗಿದೆ. ಪ್ರಜಾಸತ್ತಾತ್ಮಕ ತಳಹದಿಯ ಮೇಲೆ ನಿರ್ವಹಿಸಲ್ಪಟ್ಟ ಸಹಕಾರ ಸಂಘವು ಜನತೆಯ ಸೇವೆ ಮಾಡಲು ಮತ್ತು ಅವರ ಅಭಿವೃದ್ಧಿಗೆ ಸಾಧನವಾಗಿದೆ.ಇಂತಹ ಸಹಕಾರಿ ಬ್ಯಾಂಕುಗಳು ಜನರ ಸಂಪರ್ಕ ಸಾಧನವಾಗಿದೆ.

ಕೋಷ್ಟಕದ ೪.೪.೧.ಈ ಸಮಾಜ ಸಂಪರ್ಕದ ಬಗ್ಗೆ ಅಭಿಪ್ರಾಯದ ವಿವರ

| **ಕ್ರಮ ಸಂಖ್ಯೆ** | **ಸಮಾಜ ಸಂಪರ್ಕ** | **ಬಜಪೆ ವ್ಯವಸಾಯ ಸಹಕಾರಿ ಬ್ಯಾಂಕ್** | | **ಕ್ಕಿನ್ನಿಗೋಳಿ ವ್ಯವಸಾಯ ಸಹಕಾರಿ ಬ್ಯಾಂಕ್** | |
|---|---|---|---|---|---|
| | | **ಸಂಖ್ಯೆ** | **ಶೇಕಡಾವಾರು ಪ್ರಮಾಣ** | **ಸಂಖ್ಯೆ** | **ಶೇಕಡಾವಾರು ಪ್ರಮಾಣ** |
| ೧ | ಗಣನೀಯವಾಗಿ ವೃದ್ಧಿಸಿದೆ | ೩೩ | ೫೫.೦೦ | ೩೧ | ೫೧.೬೭ |
| ೨ | ಸಾಮಾನ್ಯವಾಗಿ ವೃದ್ಧಿಸಿದೆ | ೧೯ | ೩೧.೬೭ | ೧೯ | ೩೧.೬೬ |
| ೩ | ವಿಶೇಷವೇನೂ ಇಲ್ಲ | ೦೮ | ೧೩.೩೩ | ೧೦ | ೧೬.೬೭ |
| | ಒಟ್ಟು | ೬೦ | ೧೦೦ | ೬೦ | ೧೦೦ |

ಮೂಲ: ಸಂಶೋಧನಾ ಕ್ಷೇತ್ರ ಕಾರ್ಯಾಧಾರಿತ ಮಾಹಿತಿ

ಶೇಕಡಾ ೬೫ರಷ್ಟು ಫಲಾನುಭವಿಗಳು ಬಜಪೆ ವ್ಯವಸಾಯ ಬ್ಯಾಂಕಿನಿಂದಾಗಿ ಸಮಾಜ ಸಂಪರ್ಕ ಗಣನೀಯವಾಗಿ ವೃದ್ಧಿಸಿದೆಯೆಂದೂ, ಶೇಕಡಾ ೩೨ರಷ್ಟು ಫಲಾನುಭವಿಗಳು ಸಾಮಾನ್ಯವಾಗಿ ವೃದ್ಧಿಸಿದೆಯೆಂದೂ ಹಾಗೂ ಶೇಕಡಾ ೧೩ರಷ್ಟು ಫಲಾನುಭವಿಗಳು ಸಮಾಜ ಸಂಪರ್ಕ ವೃದ್ಧಿಯಲ್ಲಿ ವಿಶೇಷವೇನೂ ಇಲ್ಲವೆಂದು ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ಕೇಳಲಾದ ಪ್ರಶ್ನೆಗೆ ಉತ್ತರಿಸಿರುವುದನ್ನು ಕೋಷ್ಟಕ ೪.೧೬. ಈ ಯಲ್ಲಿ ಪ್ರಸ್ತುತಪಡಿಸಲಾಗಿದೆ. ಸಮಾಜ ಸಂಪರ್ಕದಲ್ಲಿನ ವೃದ್ಧಿಯು ಸದಸ್ಯರ ಬೆಳವಣಿಗೆಯಲ್ಲಿ ಪ್ರಭಾವ ಬೀರುವ ಪ್ರಮುಖ ಅಂಶವಾಗಿದೆ.

ಕಿನ್ನಿಗೋಳಿ ವ್ಯವಸಾಯ ಬ್ಯಾಂಕು ಸದಸ್ಯರ ಸಮಾಜ ಸಂಪರ್ಕವನ್ನು ಉತ್ತಮಪಡಿಸುವಲ್ಲಿ ಯಶಸ್ವಿಯಾಗಿರುವುದು ಅಧ್ಯಯನದಿಂದ ಕಂಡುಕೊಳ್ಳಬಹುದಾಗಿದೆ. ಶೇಕಡಾ ೫೨ರಷ್ಟು ಫಲಾನುಭವಿಗಳು ಸಮಾಜ ಸಂಪರ್ಕ ಗಣನೀಯವಾಗಿ ವೃದ್ಧಿಸಿದೆಯೆಂದು ಅಭಿವ್ಯಕ್ತಗೊಳಿಸಿರುವುದು ಇದನ್ನು ಪುಷ್ಟೀಕರಿಸುತ್ತದೆ.

ಎರಡೂ ಸಹಕಾರಿ ಬ್ಯಾಂಕುಗಳು ವಿವಿಧ ಯೋಜನೆಗಳ ಮೂಲಕ ಸದಸ್ಯರ ಸಮಾಜ ಸಂಪರ್ಕವನ್ನು ಉತ್ತಮಪಡಿಸಿ ಸದಸ್ಯರನ್ನು ಆರ್ಥಿಕ ಸದೃಢರನ್ನಾಗಿ ಮಾಡುವಲ್ಲಿ ಯಶಸ್ವಿಯಾಗಿ ಕಾರ್ಯನೀತಿಗಳನ್ನು ರೂಪಿಸುತ್ತಿರುವುದು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

### ೪.೪.೨ ಕೃಷಿ ಬ್ಯಾಂಕಿನ ಚಟುವಟಿಕೆಗಳು ಇನ್ನಷ್ಟು ಪರಿಣಾಮಕಾರಿಯಾಗಲು ಸದಸ್ಯರು ನೀಡಿದ ಸಲಹೆಗಳು

ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ಮಾಹಿತಿದಾರರಲ್ಲಿ ಕೃಷಿ ಬ್ಯಾಂಕಿನ ಚಟುವಟಿಕೆಗಳು ಇನ್ನಷ್ಟು ಪರಿಣಾಮಕಾರಿಯಾಗಲು ಸಲಹೆಗಳೇನಾದರೂ ಇದೆಯೇ ಎಂದು ಕೇಳಿದಾಗ ಅವರು ಈ ಕೆಳಗಿನ ಅಭಿಪ್ರಾಯವನ್ನು ನೀಡಿದ್ದಾರೆ.

೧. ಕೃಷಿ ಸಹಕಾರಿ ಬ್ಯಾಂಕುಗಳು ಹಲವು ಯೋಜನೆಗಳನ್ನು ಹೊಂದಿದ್ದು ಕೃಷಿ ಅಭಿವೃದ್ಧಿಯಲ್ಲಿ ಪ್ರಧಾನ ಪಾತ್ರವಹಿಸುತ್ತದೆ. ಈ ಬ್ಯಾಂಕುಗಳ ಹಲವು ಯೋಜನೆಗಳ ಮಾಹಿತಿ ಸೂಕ್ತ ಫಲಾನುಭವಿಗಳಿಗೆ ತಲುಪುವಲ್ಲಿ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡರೆ ಅದು ಕೃಷಿಕರಿಗೆ ಇನ್ನಷ್ಟು ಅನುಕೂಲವಾಗಬಹುದು.
೨. ಕೃಷಿಕರ ಮಕ್ಕಳಿಗೆ ಶೈಕ್ಷಣಿಕ ಸಾಲಸೌಲಭ್ಯಗಳು ದೊರೆಯುವಂತಾಗಬೇಕು.
೩. ಸಕಾಲಿಕವಾಗಿ ಹಾಗೂ ಸಮರ್ಪಕವಾಗಿ ಸಾಲ ಮರುಪಾವತಿ ಮಾಡಿದವರಿಗೆ ಸೂಕ್ತ ಪ್ರೋತ್ಸಾಹ ನೀಡುವ ಯೋಜನೆಗಳನ್ನು ಅಳವಡಿಸಿಕೊಳ್ಳಬೇಕು.

## ೪.೫ ಕ್ಷೇತ್ರ ಕಾರ್ಯ– ಮಾಹಿತಿ ವಿಶ್ಲೇಷಣೆ

ನಮ್ಮ ಅಧ್ಯಯನದ ಈ ಅಧ್ಯಾಯವು ಪ್ರಧಾನವಾಗಿ ಕ್ಷೇತ್ರ ಕಾರ್ಯವನ್ನು ಅವಲಂಬಿಸಿರುತ್ತದೆ. ಫಲಾನುಭವಿಗಳು ಕೊಟ್ಟ ಮಾಹಿತಿಯನ್ನು ಸಮಗ್ರವಾಗಿ ವಿಶ್ಲೇಷಿಸಿದಾಗ ಎರಡೂ ಬ್ಯಾಂಕುಗಳ ಕಾರ್ಯ ಕ್ಷೇತ್ರದಲ್ಲಿ ಉಂಟಾದ ಬದಲಾವಣೆಯನ್ನು ತಿಳಿಯಲು ಸಾಧ್ಯವಾಗುತ್ತದೆ. ಸಹಕಾರ ತತ್ವದ ಅಡಿಯಲ್ಲಿ ಕಾರ್ಯ ನಿರ್ವಹಿಸುವ ಈ ಬ್ಯಾಂಕುಗಳು ತಮ್ಮ ಆರ್ಥಿಕ ಸಾಮಾಜಿಕ ಹೊಣೆಗಾರಿಕೆಯನ್ನು ಯಥಾ ಸಾಧ್ಯ ನಿಭಾಯಿಸುತ್ತಾ ಸದಸ್ಯರ ಆಶೋತ್ತರಗಳಿಗೆ ಸ್ಪಂದಿಸುತ್ತವೆ ಎಂಬುದಾಗಿ ಸ್ತೂಲವಾಗಿ ಹೇಳಬಹುದು. ನಮ್ಮ ಅಧ್ಯಯನದಲ್ಲಿ ತಿಳಿಯುವಂತೆ ಕಿನ್ನಿಗೋಳಿ ಮತ್ತು ಬಜ್ಪೆಯ ಕೃಷಿ ಸಹಕಾರಿ ಬ್ಯಾಂಕುಗಳಲ್ಲಿ ಅನೇಕ ಸಾಮ್ಯತೆಗಳಿದ್ದರೂ, ಬಜ್ಪೆ ಬ್ಯಾಂಕಿನ ಪ್ರಗತಿಯ ಗತಿ ಹೆಚ್ಚಿನದೆಂದು ತಿಳಿಯಬಹುದು. ಠೇವಣಿಗಳ ಸಂಚಯನ, ಸಾಲ ನೀಡಿಕೆ, ಲಾಭ ಗಳಿಕೆ ಮತ್ತು ಲಾಭಾಂಶ ವಿತರಣೆ ಯೋಜನೆಗಳ ರೂಪೀಕರಣ ಮತ್ತು ಅನುಷ್ಠಾನ ಎರಡೂ ಬ್ಯಾಂಕುಗಳಿಗೆ ಅನ್ವಯವಾಗುವ ಬ್ಯಾಂಕಿಗ್ ಪ್ರಗತಿಯ ಸೂಚಕವಾಗಿದ್ದರೂ ಇದೆಲ್ಲವೂ ಬಜ್ಪೆ ಬ್ಯಾಂಕಿನಲ್ಲಿ ಹೆಚ್ಚಿನ ಪ್ರಗತಿಯನ್ನು ಸಾಧಿಸಿರುವುದನ್ನು ಗಮನಿಸ ಬಹುದು. ಹಾಗೆಂದ ಮಾತ್ರಕ್ಕೆ ಕಿನ್ನಿಗೋಳಿ ಬ್ಯಾಂಕು ಕೂಡ ತನ್ನ ಪ್ರಗತಿಯ ಪ್ರಯತ್ನಗಳನ್ನು ನಿರಂತರವಾಗಿ ಮುಂದುವರಿಸುತ್ತಿರುವುದು, ಈ ಹಂತದಲ್ಲಿಯೂ ಶಾಖಾ ವಿಸ್ತರಣೆಯಲ್ಲಿ ತೊಡಗಿರುವುದು ಮತ್ತು ಸದಸ್ಯರಿಗೆ ಅನುಕೂಲಕರವಾದ ಯೋಜನೆಗಳನ್ನು ಮುಂದುವರಿಸುತ್ತಿರುವುದು ಸಹಕಾರ ಕ್ಷೇತ್ರದ ಆರೋಗ್ಯಕರ ಬೆಳವಣಿಗೆಯ ದ್ಯೋತಕವಾಗಿದೆ.

# ಅಧ್ಯಾಯ-೫

# ಅಧ್ಯಯನದ ಫಲಿತಗಳು

## ಅಧ್ಯಾಯ–೫

## ಅಧ್ಯಯನದ ಫಲಿತಗಳು

ಅಧ್ಯಯನದ ಕೊನೆಯ ಅಧ್ಯಾಯವಾಗಿರುವ ಈ ಅಧ್ಯಾಯದಲ್ಲಿ ಅಧ್ಯಯನದ ಫಲಿತಗಳನ್ನು ನೀಡಲಾಗಿದೆ. ಅಧ್ಯಯನದ ಫಲಿತಾಂಶ, ಸಲಹೆ ಸೂಚನೆಗಳು, ನೀತಿ ನಿರೂಪಣೆಯ ಮಹತ್ವ ಇನಷ್ಟು ಸಂಶೋಧನಾ ಸಾಧ್ಯತೆಗಳು ಮತ್ತು ಸಂಕ್ಷಿಪ್ತ ಉಪಸಂಹಾರವನ್ನು ನೀಡಲಾಗಿದೆ.

### ಅಧ್ಯಯನದ ಫಲಿತಾಂಶಗಳು

ಸಮಾಜದಲ್ಲಿನ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದ ಜನರ ಸಂಕಷ್ಟಗಳು ಇಂದಿನ ನಾಗರೀಕ ಸಮಾಜದ ಮುಂದಿರುವ ಅತಿ ದೊಡ್ಡ ಸವಾಲಾಗಿದೆ. ನಮ್ಮ ನಡುವೆ ಇರುವ ಇಂತಹ ಹಿಂದುಳಿದ ಜನರ ಕಷ್ಟ ಕಾರ್ಪಣ್ಯಗಳನ್ನು ಹೋಗಲಾಡಿಸಲು ಒಂದು ಸಂಘಟಿತ ಹೋರಾಟವನ್ನು ಮಾಡಬೇಕಿದೆ. ನಿರಂತರವಾದ ಸಹಕಾರಿ ವಲಯದ ಅಭಿವೃದ್ಧಿಗೆ ತೊಡಗಿಕೊಳ್ಳುವ ಮೂಲಕ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದ ಜನರಲ್ಲಿ ಶಕ್ತಿ ಮತ್ತು ಸಾಮರ್ಥ್ಯಗಳನ್ನು ಸೃಷ್ಟಿಸುವುದು ಇನ್ನಿತರೆ ಯಾವುದೇ ಸಂಘಟಿತ ಮಾರ್ಗಗಳಿಗಿಂತ ಹೆಚ್ಚು ಶಕ್ತಿಯುತವಾದ ಮತ್ತು ಸೂಕ್ತವಾದ ಮಾರ್ಗವಾಗಿರುತ್ತದೆ. ಪರಸ್ಪರ ಹೊಂದಾಣಿಕೆಯಿಂದ ಎಲ್ಲಾ ಜನರು ಸಹಕಾರ ರಂಗದಲ್ಲಿ ಭಾಗವಹಿಸಿದರೆ ಅದರಿಂದ ಹೆಚ್ಚು ಅನುಕೂಲವಾಗುತ್ತದೆ. ಮಾನವನ ಮೂಲಭೂತ ವರ್ತನೆಯಲ್ಲಿ ಸೇರಿಕೊಂಡಿರುವ ಸ್ವಯಂ ಮೌಲ್ಯವು ಸಹಕಾರಿ ತತ್ವದಲ್ಲಿ ಪ್ರಧಾನವಾಗಿರುವುದರಿಂದ ನಮ್ಮಂತಹ ರಾಷ್ಟ್ರಕ್ಕೆ ಅದರಲ್ಲೂ ಕರ್ನಾಟಕದಲ್ಲಿನ ಸಹಕಾರ ಕ್ಷೇತ್ರದ ನಿರ್ವಹಣೆಗೆ ಸೂಕ್ತವಾಗಿರುತ್ತದೆ. ಸಹಕಾರ ತಂತ್ರವು ವಿಶೇಷವಾಗಿ ಗ್ರಾಮೀಣ ಬಡಜನತೆಯಲ್ಲಿ ಹಣಕಾಸು ಸಾಮರ್ಥ್ಯವನ್ನು ಮತ್ತು ಆತ್ಮವಿಶ್ವಾಸವನ್ನು ತುಂಬುವಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತದೆ. ಈ ಮಹೋನ್ನತ ಉದ್ದೇಶವನ್ನು ಸಾಧಿಸುವುದಕ್ಕಾಗಿ ಸಹಸ್ರಾರು ಸಹಕಾರ ಸಂಘಗಳು ರಾಜ್ಯಾದ್ಯಂತ ನಿರಂತರವಾಗಿ ಕೆಲಸ ಮಾಡುತ್ತಿವೆ, ಹಾಗೂ ಅತ್ಯಂತ ಕ್ರಿಯಾಶೀಲವಾಗಿ ಕಾರ್ಯ ನಿರ್ವಹಿಸುತ್ತಿವೆ. ಈ ವಸ್ತುಸ್ಥಿತಿಯಲ್ಲಿ ಕೈಗೊಂಡ ನಮ್ಮ ಅಧ್ಯಯನವು ಗ್ರಂಥಗಳು, ಲೇಖನಗಳು, ವರದಿಗಳು ಮತ್ತು ಪೂರ್ವಾಧ್ಯಯನದ ಪರಾಮರ್ಶೆ ಹಾಗೂ ಅದರ ಆಧಾರದಲ್ಲಿ ಮಾಡಲಾದ ವಿಶ್ಲೇಷಣೆ ಮತ್ತು ಕ್ಷೇತ್ರಕಾರ್ಯಾಧಾರಿತ ಅಧ್ಯಯನವನ್ನೂ ಒಳಗೊಂಡಿರುತ್ತದೆ. ಆಯ್ದ ಅಧ್ಯಯನದ ವ್ಯಾಪ್ತಿ ಸೀಮಿತವಾಗಿದ್ದರೂ ಅಲ್ಲಿ ಒಳಗೊಂಡಿರಬೇಕಾದ ವಿಷಯಗಳು ಯಾವುದೆನ್ನುವುದು ಸ್ಪಷ್ಟವಿದ್ದ ಕಾರಣ ಕೆಲವು ನಿರ್ದಿಷ್ಟವಾದ ಮತ್ತು ನಿಖರವಾದ ಅಧ್ಯಯನ–ಫಲಿತಾಂಶಗಳನ್ನು ಪಡೆದುಕೊಳ್ಳುವುದಕ್ಕೆ ಸಾಧ್ಯವಾಯಿತು. ಅವುಗಳೆಂದರೆ–

❖ ದ.ಕ.ಜಿಲ್ಲೆ ಮತ್ತು ಮಂಗಳೂರು ತಾಲೂಕಿನಲ್ಲಿರುವ ಸಹಕಾರ ಕ್ಷೇತ್ರದ ಪ್ರಗತಿ ಮತ್ತು ಬೆಳವಣಿಗೆಯ ವಿಧಾನವನ್ನು ನಮ್ಮ ಅಧ್ಯಯನದ ಬ್ಯಾಂಕುಗಳಲ್ಲೂ ಗುರುತಿಸಬಹುದು

❖ ಅಧ್ಯಯನದ ಎರಡೂ ಬ್ಯಾಂಕುಗಳಲ್ಲಿ ನಿರಂತರ ಮತ್ತು ಸಂತುಲಿತ ಪ್ರಗತಿ ದಾಕಲಾಗಿದೆ; ಪ್ರಗತಿಯ ವೇಗ ಬಜ್ಪೆ ಬ್ಯಾಂಕಿನಲ್ಲಿ ಕಿನ್ನಿಗೋಳಿ ಬ್ಯಾಂಕಿಗಿಂತಲೂ ಅಧಿಕವಾಗಿರುತ್ತದೆ.

❖ ಸದಸ್ಯತನ, ಸಂಪನ್ಮೂಲ ಸಂಚಯನ, ಸಾಲ ನೀಡಿಕೆ, ಠೇವಣಿ ವಿಧಾನ, ಯೋಜನೆಗಳ ಅನುಷ್ಠಾನ ಮತ್ತು ಸದಸ್ಯರಿಗೆ ಅನುಕೂಲ ಕಲ್ಪಿಸುವ ಸಹಕಾರ ತತ್ವಾಧಾರಿತ ಚಟುವಟಿಕೆಗಳನ್ನು ಎರಡೂ ಬ್ಯಾಂಕುಗಳು ಸಕಾಲಿಕವಾಗಿ ಮತ್ತು ಸಮರ್ಪಕವಾಗಿ ರೂಪಿಸುತ್ತಿವೆ, ಕಾರ್ಯಗತಗೊಳಿಸುತ್ತಿವೆ.

❖ ಜನರ ಸಹಕಾರ ತತ್ವದ ತಿಳುವಳಿಕೆಯ ಪ್ರಮಾಣ, ಸಮಾಜ ಸಂಪರ್ಕ, ನಾಯಕತ್ವ ಮತ್ತು ಪೂರ್ವಗಾಮಿ ಮನಸ್ಥಿತಿಗೆ ಈ ಸಹಕಾರಿ ಬ್ಯಾಂಕುಗಳು ಉತ್ತಮ ವೇದಿಕೆಗಳಾಗಿವೆ.

❖ ಈ ಬ್ಯಾಂಕುಗಳ ಸಹಕಾರದಿಂದ ಕೃಷಿ ಮತ್ತು ಗ್ರಾಮೀಣಾಬಿವೃದ್ಧಿ ಸಾಧ್ಯವಾಗುವಂತೆ ಗ್ರಾಮೀಣ ಚಟುವಟಿಕೆಗಳ ಹೆಚ್ಚಳ ಬ್ಯಾಂಕಿಂಗ್ ಪ್ರಗತಿಗೂ ಪೂರಕವಾಗಿದೆ.

**ಸಲಹೆ, ನೀತಿ ನಿರೂಪಣೆ**

ಪ್ರಗತಿಯ ಪ್ರಮಾಣ ಎಷ್ಟಿದ್ದರೂ ಇನ್ನಷ್ಟನ್ನು ಸಾಧಿಸುವುದು ಸಾಧ್ಯ ಎಂಬುದನ್ನು ಮರೆಯಬಾರದು. ಪ್ರಗತಿಯ ಹೆಚ್ಚಳ, ಕ್ಷಿಪ್ರ ಪ್ರಗತಿ ಮತ್ತು ಗಳಿಸಿದ ಪ್ರಗತಿಯ ಕಾಯ್ದುಕೊಳ್ಳುವಿಕೆ ಸಹಕಾರಿ ಬ್ಯಾಂಕುಗಳ ಧೀರ್ಘಕಾಲಿಕವಾದ ಬೆಳವಣಿಗೆಯಲ್ಲಿ ಪ್ರಧಾನ ಅಂಶಗಳಾಗಿವೆ. ನಮ್ಮ ಅಧ್ಯಯನದ ಆಧಾರದಲ್ಲಿ ಕೆಳಗೆ ನೀಡಲಾದ ಕೆಲವು ಸಲಹೆ ಸೂಚನೆಗಳು ಮತ್ತು ಅದಕ್ಕೆ ಪೂರಕವಾದ ನೀತಿ ನಿರೂಪಣೆಗಳು ಈ ರೀತಿಯ ಪ್ರಗತಿಯ ಗಳಿಸುವಿಕೆಗೆ ಪೂರಕವಾಗಬಲ್ಲವು.

❖ ಶಾಖಾ ವಿಸ್ತರಣೆ, ಬ್ಯಾಂಕಿಂಗ್ ಚಟುವಟಿಕೆಗಳ ವ್ಯಾಪ್ತಿಯ ವಿಸ್ತಾರ–ವಿಕೇಂದ್ರೀಕರಣ.

❖ ವರ್ಷದ ನಿಗದಿತ ಅವಧಿಯಲ್ಲಿ ಠೇವಣಿ ಸಂಗ್ರಹ, ಸಂಪನ್ನಮೂಲ ಸಂಚಯನದ ಪ್ರಯತ್ನಗಳನ್ನು ಮುಂದುವರಿಸಿ ಇನ್ನಷ್ಟು ತೀವ್ರಗೊಳಿಸುವ ಯೋಜನೆಗಳ ರೂಪೀಕರಣ ಅನಷ್ಠಾನ

- ❖ ಸದಸ್ಯರಿಗೆ, ಆಡಳಿತ ನಡೆಸುವವರಿಗೆ ಆಧುನಿಕ ತಂತ್ರಜ್ಞಾನದ ತರಬೇತಿ, ಇದರ ಯಶಸ್ವೀ ಪ್ರಯೋಗದ ನಿರಂತರ ಪ್ರಯತ್ನ
- ❖ ಇತರ ಸಹಕಾರಿ ಸಂಘಟನೆಗಳ ಜೊತೆ ಸಂಬಂಧ–ಸಂಪರ್ಕ, ಅನುಭವ ವಿನಿಮಯದ ಸಕಾಲಿಕ ಪ್ರಕ್ರಿಯೆಗಳ ಮುಂದುವರಿಯುವಿಕೆ
- ❖ ಇದಕ್ಕೆ ಪೂರಕವಾಗುವ ಸಹಕಾರೀ ತತ್ವದ ಪ್ರಚಾರಕ್ಕೆ ಸರಕಾರದ ಧೋರಣೆಯಲ್ಲಿ ಅಗತ್ಯ ಬದಲಾವಣೆಗಳನ್ನು ತರುವುದು.

**ಭವಿಷ್ಯದ ಸಂಶೋಧನಾ ಸಾಧ್ಯತೆಗಳು**

ಯಾವಾಗಲೂ ಒಂದು ಅಧ್ಯಯನವೂ ಆಯ್ದ ವಿಷಯದ ಕುರಿತು ಹೊಸ ಬೆಳಕು ಚೆಲ್ಲುವಂತೆ ಮುಂದೆ ನಡೆಸಬಹುದಾದ ಇನ್ನಷ್ಟು ಅಧ್ಯಯನದ ಸಾಧ್ಯತೆಗಳನ್ನೂ ಪರೋಕ್ಷವಾಗಿ ತಿಳಿಸುತ್ತದೆ. ಸಂಶೋಧನಾತ್ಮಕ ಅಧ್ಯಯನವು ನಿರಂತರವಾಗಿರಬೇಕು ಮತ್ತು ಸಾಮಯಿಕವಾಗಿರಬೇಕು. ಈ ಹಿನ್ನಲೆಯಲ್ಲಿ ನಮ್ಮ ಅಧ್ಯಯನಕ್ಕೆ ಸಂಬಂಧಿಸಿದಂತೆ ಕೈಗೊಳ್ಳಬಹುದಾದ ಇನ್ನಷ್ಟು ಅಧ್ಯಯನದ ವಿಚಾರಗಳನ್ನು ಈ ಕೆಳಗಿನಂತೆ ಗುರುತಿಸಬಹುದು.

- ❖ ಇದೇ ಅಧ್ಯಯನವನ್ನು ಇನ್ನೂ ಹೆಚ್ಚಿನ ಸಮಯಾವಧಿಗೆ ಅನ್ವಯವಾಗುವಂತೆ ಕೈಗೊಂಡರೆ ಬ್ಯಾಂಕು ಮತ್ತು ಅದರ ಕಾರ್ಯಕ್ಷೇತ್ರದ ಇನ್ನೂ ಅನೇಕ ವಿಷಯಗಳನ್ನು ತಿಳಿದುಕೊಳ್ಳಬಹುದು.
- ❖ ಕೃಷಿ ಮತ್ತು ಗ್ರಾಮೀಣಾಬಿವೃದ್ಧಿ ಮಾತ್ರವಲ್ಲದೆ ಬ್ಯಾಂಕಿನ ಇತರ ಚಟುವಟಿಕೆಗಳ ಅಧ್ಯಯನ ನಡೆಸಿದಲ್ಲಿ ಸಹಕಾರ ಮತ್ತು ಪ್ರದೇಶಾಬಿವೃದ್ಧಿಯ ಸಂಬಂಧಗಳ ಅನೇಕ ಆಯಾಮಗಳನ್ನು ತಿಳಿದುಕೊಳ್ಳಬಹುದು ಮತ್ತು ಹೊಸ ಸಹಕಾರ ತತ್ವಾಧಾರಿತ ಅಭಿವೃದ್ಧಿ ಸಿದ್ದಾಂತವೊಂದನ್ನು ಪರೀಕ್ಷಾರ್ಥವಾಗಿ ರೂಪಿಸಿಕೊಳ್ಳಬಹುದು.
- ❖ ಇತರ ಪ್ರದೇಶದ ಸಹಕಾರಿ ಬ್ಯಾಂಕುಗಳ ನಿರ್ವಹಣೆಯ ಜೊತೆ ನಮ್ಮ ಅಧ್ಯಯನದ ಬ್ಯಾಂಕುಗಳ ನಿರ್ವಹಣೆಯನ್ನು ಹೋಲಿಕೆ ಮಾಡಿ ಅದರ ಆಧಾರದಿಂದ ಇಲ್ಲಿನ ಕುಂದುಕೊರತೆಗಳನ್ನು ಪತ್ತೆಹಚ್ಚಿ ಪರಿಹಾರೋಪಾಯಗಳನ್ನು ಗುರುತಿಸಿಕ್ಕೊಳ್ಳಬಹುದು.
- ❖ ಇಂತಹ ಸೂಕ್ಷ್ಮ ಹಾಗೂ ಪ್ರದೇಶಾಧಾರಿತ ಕ್ಷೇತ್ರಾಧ್ಯಯನ ಮುಂದೆ ವಿಸ್ತಾರವಾದ ಅಧ್ಯಯನಕ್ಕೆ ಮೂಲವಾಗಬೇಕು.

## ಉಪಸಂಹಾರ

"ಕೃಷಿ ವಿಧಾನ ಮತ್ತು ವ್ಯವಸ್ಥೆಯಲ್ಲಿ ಕೃಷಿ ಸಹಕಾರಿ ಬ್ಯಾಂಕುಗಳ ಪಾತ್ರ– ಮಂಗಳೂರಿನ ಆಯ್ದ ಬ್ಯಾಂಕುಗಳ ಒಂದು ಅಧ್ಯಯನ" ಎಂಬ ಈ ಅಧ್ಯಯನವು ಎರಡು ಬ್ಯಾಂಕುಗಳನ್ನು ಪ್ರತ್ಯಕ್ಷ್ಯವಾಗಿ ಕಂಡು ಅಲ್ಲಿನ ಸದಸ್ಯರನ್ನು ಫಲಾನುಭವಿಗಳನ್ನು ಮತ್ತು ಆಡಳಿತ ನಡೆಸುವವರನ್ನು ಸಂಪರ್ಕಿಸಿ, ಅವರಿಂದ ವಿಧಿಪೂರ್ವಕವಾಗಿ ಮಾಹಿತಿಯನ್ನು ಸಂಗ್ರಹಿಸಿ ಕೈಗಂಡ ಅಧ್ಯಯನವಾಗಿರುತ್ತದೆ. ಅನೇಕ ಇತಿ ಮಿತಿ,ಲೋಪದೋಷಗಳ ಹೊರತಾಗಿಯೂ ಇಲ್ಲಿ ನಡೆಸಿದ ಕ್ಷೇತ್ರಕಾರ್ಯ ಮತ್ತು ಪಡೆದ ಮಾಹಿತಿ ತನ್ನ ಪ್ರತ್ಯೇಕತೆಯನ್ನೂ, ಅನನ್ಯತೆಯನ್ನೂ ಉಳಿಸಿಕೊಳ್ಳುತ್ತದೆ. ಸದಸ್ಯರು ಸಮಾಜದ ಒಂದು ಭಾಗ, ಬ್ಯಾಂಕ್ ಆ ಸಮಾಜದ, ಅರ್ಥವ್ಯವಸ್ಥೆಯ ಒಂದು ಪ್ರಭಲವಾದ ಸಂಘಟನೆ. ಸದಸ್ಯರು ಮತ್ತು ಬ್ಯಾಂಕುಗಳು ಪರಸ್ಪರ ಅರಿತುಕೊಡು ವ್ವವಹರಿಸಿದರೆ ಪ್ರಗತಿ ಸಾಧ್ಯ; ಹಾಗೆ ಸಾಧಿಸಲ್ಪಡುವ ಪ್ರಾದೇಶಿಕ ಪ್ರಗತಿ ದೇಶಾಬಿವೃದ್ಧಿಗೆ ತನ್ನದ್ದಾದ ಕೊಡುಗೆಯನ್ನು ನೀಡುವಲ್ಲಿ ಸಫಲವಾಗುತ್ತದೆ.

# ಅನುಬಂಧಗಳು

## ಅನುಬಂಧ ೧ ಕೋಷ್ಟಕಗಳ ಪಟ್ಟಿ

| ಕ್ರಮ ಸಂಖ್ಯೆ | ಕೋಷ್ಟಕ | ವಿಷಯ |
|---|---|---|
| ೧ | ಕೋಷ್ಟಕ ೨.೧ | ಕರ್ನಾಟಕದಲ್ಲಿ ಸಹಕಾರ ಸಂಘಗಳ ಪ್ರಗತಿಯ ವಿವರ |
| ೨ | ಕೋಷ್ಟಕ ೩.೩.೧.ಅ | ಪಾಲು ಬಂಡವಾಳದ ವಿವರ |
| ೩ | ಕೋಷ್ಟಕ ೩.೩.೧.ಆ | ಸದಸ್ಯರ ವಿವರ |
| ೪ | ಕೋಷ್ಟಕ ೩.೩.೧.ಇ | ಠೇವಣಾತಿಯ ವಿವರ |
| ೫ | ಕೋಷ್ಟಕ ೩.೩.೧.ಈ | ದುಡಿಯುವ ಬಂಡವಾಳದ ವಿವರ |
| ೬ | ಕೋಷ್ಟಕ ೩.೩.೨.ಅ | ಸಾಲದ ವಿವರ |
| ೭ | ಕೋಷ್ಟಕ ೩.೩.೨.ಆ | ಸಾಲ ಮರುಪಾವತಿಯ ವಿವರ |
| ೮ | ಕೋಷ್ಟಕ ೩.೩.೩ | ಲಾಭದ ಮತ್ತು ಲಾಭಾಂಶದ ವಿವರ |
| ೦೯ | ಕೋಷ್ಟಕ ೪.೧.೧ | ಸದಸ್ಯತನದ ವರ್ಷವಾರು ವಿವರ |
| ೧೦ | ಕೋಷ್ಟಕ ೪.೧.೨ | ಸದಸ್ಯತನದ ಪ್ರಧಾನ ಉದ್ದೇಶದ ವಿವರ |
| ೧೧ | ಕೋಷ್ಟಕ ೪.೧.೩ | ಕೃಷಿ ಬ್ಯಾಂಕಿನಲ್ಲಿನ ಅನುಭವದ ವಿವರ |
| ೧೨ | ಕೋಷ್ಟಕ ೪.೧.೪ | ಕೃಷಿ ಬ್ಯಾಂಕಿನ ಚಟುವಟಿಕೆಗಳಲ್ಲಿನ ಭಾಗವಹಿಸುವಿಕೆಯ ವಿವರ |
| ೧೩ | ಕೋಷ್ಟಕ ೪.೧.೫ | ವೈಯಕ್ತಿಕವಾಗಿ ಹೆಚ್ಚು ಮಹತ್ವ ನೀಡುವ ವಿಷಯದ ವಿವರ |
| ೧೪ | ಕೋಷ್ಟಕ ೪.೨.೧ | ಸದಸ್ಯರಾಗಿರುವ ಕೃ.ಸ.ಬ್ಯಾಂ.ನ ಸ್ವಂತ ಕಟ್ಟಡದ ಬಗೆಗಿನ ಮಾಹಿತಿಯ ವಿವರ |
| ೧೫ | ಕೋಷ್ಟಕ ೪.೨.೨ | ಕೃಷಿ ಸಹಕಾರಿ .ಬ್ಯಾಂಕ್‌ನ ಹೆಚ್ಚುವರಿ ಶಾಖೆಯ ಬಗೆಗಿನ ಮಾಹಿತಿಯ ವಿವರ |
| ೧೬ | ಕೋಷ್ಟಕ ೪.೨.೩ | ಕೃ.ಸ.ಬ್ಯಾಂ.ಗೆ ಇತರ ಮೂಲಗಳಿಂದ ಪುನರ್ವಿತ್ತ ವಿವರ |
| ೧೭ | ಕೋಷ್ಟಕ ೪.೨.೪ | ಕೃಷಿ ಸಹಕಾರಿ ಬ್ಯಾಂಕ್‌ನ ಚುನಾವಣೆಗಳ ಬಗೆಗಿನ ಮಾಹಿತಿಯ ವಿವರ |
| ೧೮ | ಕೋಷ್ಟಕ ೪.೨.೫ | ಕೃ.ಸ.ಬ್ಯಾಂ.ನಲ್ಲಿ ಲೆಕ್ಕಪತ್ರಗಳ ಮಂಡನೆ/ ಪರಿಶೋಧನೆ/ ಲಾಭಾಂಶ ವಿತರಣೆಯ ಮಾಹಿತಿಯ ವಿವರ |
| ೧೯ | ಕೋಷ್ಟಕ ೪.೩.೧.ಅ | ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಸಾಲದ ಅವಧಿಯ ವಿವರ |
| ೨೦ | ಕೋಷ್ಟಕ ೪.೩.೧.ಆ | ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಸಾಲದ ಪ್ರಮಾಣದ ವಿವರ |
| ೨೧ | ಕೋಷ್ಟಕ ೪.೩.೧.ಇ | ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಸಾಲದ ಉದ್ದೇಶದ ವಿವರ |

| | | |
|---|---|---|
| ೨೨ | ಕೋಷ್ಟಕ ೪.೩.೨ | ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಸಾಲಕ್ಕೆ ಸಂಬಂಧಿಸಿರುವ ಯೋಜನೆಗಳ ವಿವರ |
| ೨೩ | ಕೋಷ್ಟಕ ೪.೩.೩.ಅ | *ಠೇವಣಿ ಸಂಚಯನದ* ಅವದಿ |
| ೨೪ | ಕೋಷ್ಟಕ ೪.೩.೩.ಆ. | *ಠೇವಣಿ ಸಂಚಯನದ* ಪ್ರಮಾಣ |
| ೨೫ | ಕೋಷ್ಟಕ ೪.೩.೩.ಇ. | *ಠೇವಣಿ ಸಂಚಯನದ ಮೂಲ* |
| ೨೬ | ಕೋಷ್ಟಕ ೪.೩.೪ | ಠೇವಣಿ ಸಂಚಯನಕ್ಕೆ ಸಂಬಂಧಿಸಿರುವ ಯೋಜನೆಯ ವಿವರಗಳು |
| ೨೭ | ಕೋಷ್ಟಕ ೪.೩.೫.ಅ | ಸದಸ್ಯರ ಸಂಖ್ಯೆಯ ವಿವರ |
| ೨೮ | ಕೋಷ್ಟಕ ೪.೩.೫.ಆ | ನಿರ್ದೇಶಕ ಮಂಡಳಿ ವಿವರ |
| ೨೯ | ಕೋಷ್ಟಕ ೪.೩.೫.ಇ | ಲಾಭಾಂಶದ ವಿವರ |
| ೩೦ | ಕೋಷ್ಟಕ ೪.೩.೫.ಈ | ಸರ್ಕಾರದ ಹಸ್ತಕ್ಷೇಪದ ವಿವರ |
| ೩೧ | ಕೋಷ್ಟಕ ೪.೪.೧.ಅ | ಕೃಷಿಯಲ್ಲಿನ ಪ್ರಗತಿಯ ವಿವರ |
| ೩೨ | ಕೋಷ್ಟಕ ೪.೪.೧.ಆ | ಸದಸ್ಯರಲ್ಲಿ ಉಳಿತಾಯ ಪ್ರವೃತ್ತಿ ವಿವರ |
| ೩೩ | ಕೋಷ್ಟಕ ೪.೪.೧.ಇ | ಸಹಕಾರ ತತ್ವದ ತಿಳುವಳಿಕೆ ವಿವರ |
| ೩೪ | ಕೋಷ್ಟಕ ೪.೪.೧.ಈ | ಸಮಾಜ ಸಂಪರ್ಕದ ವಿವರ |

# ಅನುಬಂಧ ೨ ಪ್ರಶ್ನಾವಳಿ(ಬ್ಯಾಂಕಿಗೆ)

## ಕೃಷಿ ವಿಧಾನ ಮತ್ತು ವ್ಯವಸ್ಥೆಯಲ್ಲಿ ಕೃಷಿಸಹಕಾರಿ ಬ್ಯಾಂಕುಗಳ ಪಾತ್ರ- ಮಂಗಳೂರಿನ ಆಯ್ದ ಬ್ಯಾಂಕುಗಳ ಒಂದು ಅಧ್ಯಯನ

೧. ಬ್ಯಾಂಕಿನ ಹೆಸರು, ವಿಳಾಸ ಮತ್ತು ನೋಂದಣಿ ಸಂಖ್ಯೆ:

೨. ಆರಂಭಿಕ ವಿವರಗಳು

| ಪ್ರಾರಂಭ ವರ್ಷ | ಪ್ರಾರಂಭದಲ್ಲಿ ಸದಸ್ಯರ ಸಂಖ್ಯೆ | ಪ್ರಾರಂಭದಲ್ಲಿ ಶೇರ್ ಕ್ಯಾಪಿಟಲ್ | ಪ್ರಾರಂಭದಲ್ಲಿ ಭೌಗೋಳಿಕ ವ್ಯಾಪ್ತಿ: | ಪ್ರಾರಂಭದಲ್ಲಿ ನೌಕರರ ಸಂಖ್ಯೆ: |
|---|---|---|---|---|
| | | | | |

೩. ಪಂಚವಾರ್ಷಿಕ ಪ್ರಗತಿ (೨೦೦೬-೦೭ರಿಂದ೨೦೧೦-೧೧) : ವಿತ್ತೀಯ ಸೂಚಕಗಳು-

| ಕ್ರಮ ಸಂಖ್ಯೆ | | ೨೦೦೬-೦೭ | ೨೦೦೭-೦೮ | ೨೦೦೮-೦೯ | ೨೦೦೯-೧೦ | ೨೦೧೦-೨೦೧೧ |
|---|---|---|---|---|---|---|
| ೧ | ಶೇರ್ ಕ್ಯಾಪಿಟಲ್ | | | | | |
| ೨ | ಠೇವಣಿ | | | | | |
| ೩ | ಸಾಲ ನೀಡಿಕೆ (disbursed) | | | | | |
| ೪ | ಸಾಲ (outstanding) | | | | | |
| ೫ | ಸಾಲ ಮರುಪಾವತಿ | | | | | |
| ೬ | ಸಾಲ-ಠೇವಣಿ ಅನುಪಾತ | | | | | |
| ೭ | ಲಾಭ | | | | | |
| ೮ | ಲಾಭಾಂಶ | | | | | |

೪. ಪಂಚವಾರ್ಷಿಕ ಪ್ರಗತಿ (೨೦೦೬-೦೭ರಿಂದ೨೦೧೦-೧೧) : ಕಾರ್ಯವ್ಯಾಪ್ತಿಯ ಸೂಚಕಗಳು-

| ಕ್ರಮ ಸಂಖ್ಯೆ | | ೨೦೦೬-೦೭ | ೨೦೦೭-೦೮ | ೨೦೦೮-೦೯ | ೨೦೦೯-೧೦ | ೨೦೧೦-೨೦೧೧ |
|---|---|---|---|---|---|---|
| ೧ | ಕಟ್ಟಡ/ಕಛೇರಿ/ ಸ್ಥಿರ ಸೊತ್ತುಗಳು | | | | | |
| ೨ | ಭೌಗೋಳಿಕ ವ್ಯಾಪ್ತಿ | | | | | |
| ೩ | ನೌಕರರ ಸಂಖ್ಯೆ | | | | | |
| ೪ | ಸದಸ್ಯರ ಸಂಖ್ಯೆ | | | | | |
| ೫ | ವಾರ್ಷಿಕ ಮೀಟಿಂಗುಗಳು | | | | | |
| ೬ | ನಿರ್ದೇಶಕರ ಸಂಖ್ಯೆ | | | | | |

೫. ಪಂಚವಾರ್ಷಿಕ ಪ್ರಗತಿ (೨೦೦೬-೦೭ರಿಂದ೨೦೧೦-೧೧) : ವಿಶೇಷ ಪ್ರಗತಿಯ ಸೂಚಕಗಳು-

| ಕ್ರಮ ಸಂಖ್ಯೆ | | ೨೦೦೬-೦೭ | ೨೦೦೭ -೦೮ | ೨೦೦೮-೦೯ | ೨೦೦೯-೧೦ | ೨೦೧೦-೨೦೧೧ |
|---|---|---|---|---|---|---|
| ೧ | ಠೇವಣಿ ಸಂಚಯನ ಸ್ಕೀಮ್ | | | | | |
| ೨ | ಸಾಲದ ಸ್ಕೀಮ್ | | | | | |
| ೩ | ಮಹಿಳೆಯರಿಗಾಗಿ ಸ್ಕೀಮ್ | | | | | |
| ೪ | ದುರ್ಬಲವರ್ಗದವ ರಿಗಾಗಿಸ್ಕೀಮ | | | | | |
| ೫ | ಸೇವಾ ಯೋಜನೆಗಳು | | | | | |
| ೬. | ಇತರ ಯೋಜನೆಗಳು | | | | | |

೬. ಪಂಚವಾರ್ಷಿಕ ಪ್ರಗತಿ (೨೦೦೬-೦೭ರಿಂದ೨೦೧೦-೧೧) : ವಿಶೇಷ ಸಾಧನೆಯ ಸೂಚಕಗಳು-

| ಕ್ರಮ ಸಂಖ್ಯೆ | | ೨೦೦೬-೦೭ | ೨೦೦೭-೦೮ | ೨೦೦೮-೦೯ | ೨೦೦೯-೧೦ | ೨೦೧೦-೨೦೧೧ |
|---|---|---|---|---|---|---|
| ೧ | ಆಡಿಟ್ ವರ್ಗೀಕರಣ | | | | | |
| ೨ | ಪ್ರಶಸ್ತಿ/ಬಹುಮಾನಗಳು | | | | | |
| ೩ | ಇತರ | | | | | |

೭. ಪಂಚವಾರ್ಷಿಕ ಪ್ರಗತಿ (೨೦೦೬-೦೭ರಿಂದ೨೦೧೦-೧೧) : ಕಾರ್ಯವಿಧಾನದ ಅವಲೋಕನ-(Evaluation of policy-related issues)

ಈ ಕೆಳಗಿನ ವಿಷಯಗಳಿಗೆ ಸಂಬಂಧಿಸಿದಂತೆ ಇರುವ ಸ್ಕೀಮ್, ಅವುಗಳ ರೂಪೀಕರಣದ ವಿವರಗಳು:
೧.ಠೇವಣಿ ಮತ್ತು ಬಂಡವಾಳ ಸಂಚಯನ
೨.ಸಾಲ ನೀಡಿಕೆ
೩.ಸಮಾಜ ಸೇವೆಯ ಯೋಜನೆಗಳು
೪.ಕಾರ್ಯಕ್ಷೇತ್ರದ ವಿಸ್ತಾರದ ಯೋಜನೆಗಳು
೫.ಇತರ

೮. ಪಂಚವಾರ್ಷಿಕ ಪ್ರಗತಿ (೨೦೦೬-೦೭ರಿಂದ೨೦೧೦-೧೧) : ಕಾರ್ಯವಿಧಾನದ ಅವಲೋಕನ-(Evaluation of operational Issues)

ಈ ಕೆಳಗಿನ ವಿಷಯಗಳಿಗೆ ಸಂಬಂಧಿಸಿದಂತೆ ಬ್ಯಾಂಕ್ ಅನುಸರಿಸುವ ಧೋರಣೆಯ ವಿವರಗಳು:
೧. ಠೇವಣಿ ನೀಡುವವರನ್ನು ಸಂಪರ್ಕಿಸುವುದು

೨. ಸಾಲ ಪಡೆಯುವವರನ್ನು ಆಯ್ಕೆ ಮಾಡುವುದು/ಅರ್ಹತೆಯ ಪರಿಶೀಲನೆ

೩. ಸಾಲ ಮರುಪಾವತಿಯ ವಿಧಾನ

೪. ಸಕಾಲಿಕವಾಗಿ ಅರ್ಹರು ಫಲಾನುಭವಿಗಳಾಗಿದ್ದಾರೆಯೇ ಎನ್ನುವುದನ್ನು ದೃಢೀಕರಿಸುವ ವಿಧಾನ

೫. ಇತರ

೯. ಪಂಚವಾರ್ಷಿಕ ಪ್ರಗತಿ (೨೦೦೬-೦೭ರಿಂದ೨೦೧೦-೧೧) : ಕಾರ್ಯಕ್ಷಮತೆಯ ಅವಲೋಕನ-(Performance Evaluation )

೧. ಬ್ಯಾಂಕ್ ತನ್ನ ಕಾರ್ಯವ್ಯಾಪ್ತಿಯ ಕ್ಷೇತ್ರದಲ್ಲಿ ಆಗಿರುವ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಯ ಅವಲೋಕನವನ್ನು ಹೇಗೆ ಮಾಡುತ್ತದೆ?

೨. ಪರಿಣಾಮಕಾರಿ ಹಣಕಾಸು ನಿರ್ವಹಣೆಗಾಗಿ ಬ್ಯಾಂಕ್ ಯಾವ ವಿಧಾನವನ್ನು ಅನುಸರಿಸುತ್ತದೆ?

೩. ಬ್ಯಾಂಕ್ ವ್ಯವಹಾರಗಳಲ್ಲಿ ಸದಸ್ಯರ ಸಕ್ರಿಯ ಭಾಗವಹಿಸುವಿಕೆಗೆ ಬ್ಯಾಂಕ್ ಯಾವ ರೀತಿಯ ಪ್ರಯತ್ನ ಮಾಡುತ್ತಿದೆ?

೪. ನಾಯಕತ್ವ ರೂಪೀಕರಣದಲ್ಲಿ ಬ್ಯಾಂಕ್‌ನ ಪಾತ್ರವೇನು?

೫. 'ಸ್ಪರ್ಧೆ'ಮತ್ತು 'ಸಹಕಾರ'ದ ಸಮನ್ವಯವನ್ನು ಹೇಗೆ ಸಾಧಿಸಲಾಗುತ್ತಿದೆ?

೧೦. ಪಂಚವಾರ್ಷಿಕ ಪ್ರಗತಿ (೨೦೦೬-೦೭ರಿಂದ೨೦೧೦-೧೧) : ಇತರ ವಿಷಯಗಳು

ಸ್ಥಳ : ಸಹಿ

ದಿನಾಂಕ:

## ಅನುಬಂಧ ೩ ಪ್ರಶ್ನಾವಳಿ(ಸದಸ್ಯರಿಗೆ)

## ಕೃಷಿ ವಿಧಾನ ಮತ್ತು ವ್ಯವಸ್ಥೆಯಲ್ಲಿ ಕೃಷಿಸಹಕಾರಿ ಬ್ಯಾಂಕುಗಳ ಪಾತ್ರ- ಮಂಗಳೂರಿನ ಆಯ್ದ ಬ್ಯಾಂಕುಗಳ ಒಂದು ಅಧ್ಯಯನ

**ಪ್ರಾಥಮಿಕ ವಿವರಗಳು–ಸದಸ್ಯರು/ಫಲಾನುಭವಿಗಳು**

**ಸದಸ್ಯರ ಹೆಸರು ಮತ್ತು ವಿಳಾಸ (ಐಚ್ಛಿಕ):**

೧. ನೀವು ಕೃ.ಸ.ಬ್ಯಾಂ.ನ ಸದಸ್ಯರಾದದ್ದು ಯಾವಾಗ?

೧.೨೦೦೧ರ ಮೊದಲು ☐

೨.೨೦೦೧ರ ನಂತರ,೨೦೦೫ರ ಮೊದಲು ☐

೩.೨೦೦೫ರ ನಂತರ ☐

೨. ನೀವು ಕೃ.ಸ.ಬ್ಯಾಂ.ನ ಸದಸ್ಯರಾಗಿರುವ ಪ್ರಧಾನ ಉದ್ದೇಶವೇನು?

೧. ಬ್ಯಾಂಕಿನ ಯೋಜನೆಗಳ ಫಲಾನುಭವಿಯಾಗುವುದು ☐

೨. ಮತಚಲಾಯಿಸುವುದು,ಸ್ಪರ್ಧಿಸುವುದು ☐

೩.ಸಮಾಜಸೇವೆ ☐

೪.ಎಲ್ಲವೂ ☐

೩. ಕೃ.ಸ.ಬ್ಯಾಂ.ನಲ್ಲಿ ತಮ್ಮ ಅನುಭವ ಯಾವ ರೀತಿಯದ್ದು?

೧.ಸಾಮಾನ್ಯ ಸದಸ್ಯನಾಗಿ ☐

೨. ನಿರ್ದೇಶಕನಾಗಿ ☐

೩.ಅಧ್ಯಕ್ಷ/ಪದಾಧಿಕಾರಿಯಾಗಿ ☐

೪.ಎಲ್ಲವೂ ☐

೪. ಕೃ.ಸ.ಬ್ಯಾಂ.ನಚಟುವಟಿಕೆಗಳಲ್ಲಿ ನಿಮ್ಮ ಭಾಗವಹಿಸುವಿಕೆ ಯಾವ ರೀತಿಯದ್ದು?

೧.ವಿರಳವಾಗಿ ☐

೨.ನಿರಂತರವಾಗಿ ಮತ್ತು ಸಕ್ರಿಯವಾಗಿ ☐

೩.ಧೋರಣೆಗಳ ರೂಪೀಕರಣದಲ್ಲಿ ನಿರ್ಣಾಯಕ ಪಾತ್ರ ☐

೫. ವೈಯಕ್ತಿಕವಾಗಿ ನೀವು ಹೆಚ್ಚು ಮಹತ್ವ ನೀಡುವ ವಿಷಯ ಯಾವುದು?

೧.ಸಾಲ ಪಡೆಯುವುದು ☐

೨.ಠೇವಣಿನೀಡುವುದು ☐

೩.ಸಹಕಾರಿತತ್ವದ ಪ್ರಚಾರ ☐

**ಪೂರಕಮಾಹಿತಿ –ಸದಸ್ಯರು/ಫಲಾನುಭವಿಗಳು (ನಿಮಗೆ ಗೊತ್ತಿದೆ/ಇಲ್ಲ ಎಂದು ತಿಳಿಸಿ)**

೬. ನೀವು ಸದಸ್ಯರಾಗಿರುವ ಕೃ.ಸ.ಬ್ಯಾಂ.ಗೆ ಸ್ವಂತ ಕಟ್ಟಡ ಇದೆ/ಇಲ್ಲ/ಗೊತ್ತಿಲ್ಲ

೭. ನೀವು ಸದಸ್ಯರಾಗಿರುವ ಕೃ.ಸ.ಬ್ಯಾಂ.ಗೆ ಹೆಚ್ಚುವರಿ ಶಾಖೆಗಳು ಇದೆ/ಇಲ್ಲ/ಗೊತ್ತಿಲ್ಲ

೮. ನೀವು ಸದಸ್ಯರಾಗಿರುವ ಕೃ.ಸ.ಬ್ಯಾಂ.ಗೆ ಇತರ ಮೂಲಗಳಿಂದ ಪುನರ್ವಿತ್ತ(refinancing facility) ಇದೆ/ಇಲ್ಲ/ಗೊತ್ತಿಲ್ಲ

೯. ನೀವು ಸದಸ್ಯರಾಗಿರುವ ಕೃ.ಸ.ಬ್ಯಾಂ.ನಲ್ಲಿ ಸಕಾಲಕ್ಕೆ ಚುನಾವಣೆಗಳು ಆಗುತ್ತಿವೆ/ಇಲ್ಲ/ಗೊತ್ತಿಲ್ಲ

೧೦. ನೀವು ಸದಸ್ಯರಾಗಿರುವ ಕೃ.ಸ.ಬ್ಯಾಂ.ನಲ್ಲಿ ಸಕಾಲಕ್ಕೆ ಲೆಕ್ಕಪತ್ರಗಳ ಮಂಡನೆ/ಪರಿಶೋಧನೆ/ಲಾಭಾಂಶ ವಿತರಣೆ ಇದೆ/ಇಲ್ಲ/ಗೊತ್ತಿಲ್ಲ

**ಕೃ.ಸ.ಬ್ಯಾಂ.ನಚಟುವಟಿಕೆಗಳು:**

೧೧. *ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಸಾಲ–*

ಅ. ಅಲ್ಪಾವಧಿ ☐ ಆ.ಮಧ್ಯಾವಧಿ ☐ ಇ. ದೀರ್ಘಾವಧಿ ☐

ಅ. ಸಣ್ಣಪ್ರಮಾಣ ☐ ಆ. ಮಧ್ಯಪ್ರಮಾಣ ☐ ಇ. ಹೆಚ್ಚುಪ್ರಮಾಣ ☐

ಅ. ಏಕೋದ್ದೇಶ ☐ ಆ. ವಿವಿಧೋದ್ದೇಶ ☐ ಇ. ಎರಡೂ (‘ಅ’ ಮತ್ತು ‘ಆ’) ☐

೧೨. ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಸಾಲಕ್ಕೆ ಸಂಬಂಧಿಸಿರುವ ಯೋಜನೆ(ಸ್ಕೀಮ್)ಗಳ ವಿವರಗಳು–

೧.

೨.

೩.

೪.

೧೩. *ಠೇವಣಿ ಸಂಚಯನ–*

ಅ. ಅಲ್ಪಾವಧಿ ☐ ಆ.ಮಧ್ಯಾವಧಿ ☐ ಇ. ದೀರ್ಘಾವಧಿ ☐

ಅ. ಸಣ್ಣಪ್ರಮಾಣ ☐ ಆ. ಮಧ್ಯಪ್ರಮಾಣ ☐ ಇ. ಹೆಚ್ಚುಪ್ರಮಾಣ ☐

ಅ. ಸದಸ್ಯರಿಂದ ☐ ಆ. ಸದಸ್ಯೇತರರಿಂದ ☐ ಇ. 'ಅ' ಮತ್ತು 'ಆ'–ಇಬ್ಬರಿಂದ ☐

೧೪. ಠೇವಣಿ ಸಂಚಯನಕ್ಕೆ ಸಂಬಂಧಿಸಿರುವ ಯೋಜನೆ(ಸ್ಕೀಮ್)ಗಳ ವಿವರಗಳು–

೧.

೨.

೩.

೪.

೧೫. *ಆಡಳಿತಾತ್ಮಕ ವ್ಯವಸ್ಥೆ–*

ಸದಸ್ಯರ ಸಂಖ್ಯೆ: ಅ. ಉತ್ತಮ ☐ ಆ.ತೃಪ್ತಿಕರ ☐ ಇ. ಅಪರ್ಯಾಪ್ತ ☐

ನಿರ್ದೇಶಕ ಮಂಡಳಿ: ಅ. ಉತ್ತಮ ☐ ಆ.ತೃಪ್ತಿಕರ ☐ ಇ. ಅಪರ್ಯಾಪ್ತ ☐

ಲಾಭಾಂಶ: ಅ. ಉತ್ತಮ ☐ ಆ.ತೃಪ್ತಿಕರ ☐ ಇ. ಅಪರ್ಯಾಪ್ತ ☐

ಸರಕಾರದ ಹಸ್ತಕ್ಷೇಪ ಅ.ಅತೀ ಹೆಚ್ಚು ☐ ಆ. ಸಾಮಾನ್ಯ ☐ ಇ, ನಗಣ್ಯ ☐

**ಕೃ.ಸ.ಬ್ಯಾಂ.ನಚಟುವಟಿಕೆಗಳು ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಯ ಮೇಲೆ ಬೀರುತ್ತಿರುವ ಪ್ರಭಾವ:**

೧. ಕೃಷಿಯಲ್ಲಿನ ಪ್ರಗತಿ–

ಅ. ಗಣನೀಯ ಪ್ರಗತಿ ☐

ಆ. ಸಾಮಾನ್ಯ ಪ್ರಗತಿ ☐

ಇ. ವಿಶೇಷವೇನೂ ಇಲ್ಲ ☐

೨. ಸದಸ್ಯರಲ್ಲಿ ಉಳಿತಾಯ ಪ್ರವೃತ್ತಿ:

ಅ. ಗಣನೀಯವಾಗಿ ವೃದ್ಧಿಸಿದೆ ☐

ಆ. ಸಾಮಾನ್ಯವಾಗಿ ವೃದ್ಧಿಸಿದೆ ☐

ಇ. ವಿಶೇಷವೇನೂ ಇಲ್ಲ ☐

೩. ಸಹಕಾರ ತತ್ವದ ತಿಳುವಳಿಕೆ:

ಅ. ಗಣನೀಯವಾಗಿ ವೃದ್ಧಿಸಿದೆ ☐

ಆ. ಸಾಮಾನ್ಯವಾಗಿ ವೃದ್ಧಿಸಿದೆ ☐

ಇ. ವಿಶೇಷವೇನೂ ಇಲ್ಲ ☐

೪. ಸಮಾಜ ಸಂಪರ್ಕ;

ಅ. ಗಣನೀಯವಾಗಿ ವೃದ್ಧಿಸಿದೆ ☐

ಆ. ಸಾಮಾನ್ಯವಾಗಿ ವೃದ್ಧಿಸಿದೆ ☐

ಇ. ವಿಶೇಷವೇನೂ ಇಲ್ಲ ☐

೧೭. ಕೃ.ಸ.ಬ್ಯಾಂಕಿನ ಚಟುವಟಿಕೆಗಳು ಇನ್ನಷ್ಟು ಪರಿಣಾಮಕಾರಿಯಾಗಲು ನೀವು ನೀಡಬಯಸುವ ಸಲಹೆಗಳು–

೧.

೨.

೩.

೪.


೧೮. ಇತರ ವಿಷಯಗಳು:

ಸ್ಥಳ: ಸಹಿ

ದಿನಾಂಕ:

## ಅನುಬಂಧ ೪ ನಕ್ಷೆಗಳು

### ದಕ್ಷಿಣ ಕನ್ನಡದ ನಕ್ಷೆ





# ಕರ್ನಾಟಕದ ನಕ್ಷೆ





# ಅನುಬಂಧ ೫ ಆಯ್ದ ಬ್ಯಾಂಕುಗಳ ಭಾವಚಿತ್ರಗಳು

## ಬಜಪೆ ವ್ಯವಸಾಯ ಸಹಕಾರಿ ಬ್ಯಾಂಕ್(ನಿ)



ಜೋಕಟ್ಟೆ ಶಾಖೆ



ಕಿನ್ನಿಕಂಬಳ ಶಾಖೆ



ಎಕ್ಕಾರು ಶಾಖೆ












# ಕಿನ್ನಿಗೋಳಿ ವ್ಯವಸಾಯ ಸೇವಾ ಸಹಕಾರಿ ಬ್ಯಾಂಕ್(ನಿ)



ದಾಮಾಸ್‌ಕಟ್ಟೆ ಶಾಖೆ







# ಪರಾಮರ್ಶನ ಗ್ರಂಥಗಳು


೧.ಅನುರಾಗ್ ಮಿಶ್ರ (೨೦೦೮), ಹಣಕಾಸು ಮತ್ತು ಸಾಮಾಜಿಕ ಭದ್ರತೆ, ಯೋಜನಾ ಸಮಾಚಾರ ಮತ್ತು ಪ್ರಚಾರ ಸಚಿವಾಲಯ, ಬೆಂಗಳೂರು, ಪು.೫.

೨.ಅನಂತ ರಾಮಯ್ಯ, ಎನ್, 'ಭಾರತದ ಗ್ರಾಮೀಣಾಭಿವೃದ್ಧಿ ಒಂದು ವಿಮರ್ಶೆ' ಅಂಬುಜ ಪ್ರಕಾಶನ, ಬೆಂಗಳೂರು,೧೯೯೩

೩.ಅಗರ್ವಾಲ್ ಆರ್.ಸಿ., ಬಿ. ಪ್ರಸಾದ್ ಆಂಡ್ ವಿ.ಪಿ.ಎಸ್. ಅರೋರ, ಪ್ರಾಬ್ಲಮ್ಸ್ ಆಂಡ್ ಪ್ರಾಸ್ಪೆಕ್ಟ್ಸ್ ಆಫ್ ಕೋ-ಅಪರೇಟಿವ್ ಕ್ರೆಡಿಟ್ ಅ ಕೇಸ್ ಸ್ಟಡೀ ಇಂಡಿಯನ್ ಕೋ-ಅಪರೇಟಿವ್ ರಿವ್ಯೂ, ೧೯೭೨.

೪.ಬಣಕಾರ್, ಬ.ಜಿ(೨೦೦೩), ಸಮಗ್ರ ನೋಟ ಸತ್ಯಾಶ್ರೀ ಪ್ರಿಂಟರ್ಸ್ ಪ್ರೈ.ಲಿ., ಬೆಂಗಳೂರು, ಪು.೩೨೦.

೫.ಬಸವಾ.ಕೆ.ಡಿ., ಹಣ ಮತ್ತು ಅಂತರಾಷ್ಟ್ರೀಯ ವ್ಯಾಪಾರ,ಆಕಳವಾಡಿ ಬುಕ್ ಹೌಸ್, ಧಾರವಾಡ, ೧೯೮೫.

೬.ಬೆಂಚನ್‌ಕರ್ ಪಿ.ವೈ., ಆಂಡ್ ಎಂ.ವಿ. ನಂಜೇಶ್ (೧೯೭೫), ಕೋ-ಆಪರೇಷನ್ ಆಂಡ್ ದ ಡೈನಮಿಕ್ ಆಫ್ ಚೇಂಜ್, ಸೋಮಯ್ಯ ಪಬ್ಲಿಕೇಷನ್ಸ್, ನ್ಯೂ-ಡೆಲ್ಲಿ, ಪು.ಸಂ ೨೫.

೭.ಬಾರ್ಗವ ವಿ.ಕೆ ಮತ್ತು ಶಾ ಎಸ್. ಎಲ್ 'ಕ್ರೆಡಿಟ್ ನೀಡ್ಸ್ ಆಫ್ ಚೇಜಿಂಗ್ ಅಗ್ರಿಕಲ್ಚರ್, ಆ ಪೊಟೆನ್ಸಿಯಲ್ ಏರಿಯಾ ಫಾರ್ ಕಮರ್ಷಿಯಲ್ ಬ್ಯಾಂಕ್ ಫಿನಾನ್ಸ್', ಇಂಡಿಯನ್ ಜರ್ನಲ್ ಆಫ್ ಅಗ್ರಿಕಲ್ಚರಲ್ ಇಕಾನಮಿಕ್ಸ್, ೧೯೬೮, ಪು.೩೮.

೮.ಚಿನ್ನಸ್ವಾಮಿ ಸೋಸಲ್ (೨೦೦೪), ನಮ್ಮ ಗ್ರಾಮಗಳು ಅಂದು ಇಂದು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೨೬.

೯.ಡಾ.ಸಿ.ಬಿ.ಮಮೊರಿಯ ಆಂಡ್ ಡಾ.ಆರ್.ಡಿ. ಸಕ್ಸೇನ, "ಕೊಆಪರೇಟಿವ್ ಇನ್ ಇಂಡಿಯಾ", ೧೯೭೩.

೧೦.ಡಾ.ಎಂ. ರಂಗಸ್ವಾಮಿ, 'ಸಹಕಾರಿ ಚಳವಳಿ ಮತ್ತು ಗ್ರಾಮೀಣಾಭಿವೃದ್ಧಿ ಹೆಜ್ಜೆಗಳು' ಚೈತ್ರ ಪ್ರಕಾಶನ, ಬೆಂಗಳೂರು, ೨೦೧೦.

೧೧.ಜಿ.ವಿ ಜೋಶಿ ಮತ್ತು ನೋಬರ್ಟ್ ಲೋಬೋ ೨೦೦೯ "ಕರಾವಳಿ ಕರ್ನಾಟಕದ ಅರ್ಥವ್ಯವಸ್ಥೆ ಹಿಂದಿನಿಂದ ಇಂದಿನವರೆಗೆ", ಮಂಗಳ ಪ್ರಕಾಶನ ಮಂಗಳೂರು.

೧೨. ಹಗ್ ಇ.ಎಂ.(೧೯೯೧), ದಿ ಕೋ-ಆಪರೇಟಿವ್ ಮೂಮೆಂಟ್ ಇನ್ ಇಂಡಿಯಾ, ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ಡೆಲ್ಲಿ.

೧೩.ಜಯ ಎಸ್ ಆನಂದ್,ಕೋ-ಅಪರೇಟಿವ್ ಅಗ್ರಿಕಲ್ಚರಲ್ ಆಂಡ್ ರೂರಲ್ ಡೆವಲಪ್‌ಮೆಂಟ್ ಬ್ಯಾಂಕ್ಸ್, ಅಟ್ಲಾಂಟಿಕ್ ಪಬ್ಲಿಷರ್ಸ್, ನ್ಯೂ ಡೆಲ್ಲಿ, ೧೯೯೯.

೧೪.ಕೃಷ್ಣಮೂರ್ತಿ ಎಚ್. ಆರ್ (೨೦೦೨) ಭಾರತದ ಆರ್ಥಿಕ ವ್ಯವಸ್ಥೆ, ಸ್ವಪ್ನ ಬುಕ್‌ಹೌಸ್, ಬೆಂಗಳೂರು. ಪು. ೨೬೨.

೧೫.ಮೆಮೊರಿಯಾ ಸಿ.ಬಿ. 'ರೂರಲ್ ಕ್ರೆಡಿಟ್ ಆಂಡ್ ಎಗ್ರಿಕಲ್ಚರ್ ಆಂಡ್ ಅಗ್ರಿಕಲ್ಚರಲ್ ಕೋ-ಆಪರೇಷನ್ ಇನ್ ಇಂಡಿಯಾ' ಕಿತಾಬ್ ಮಹಲ್ ಅಲಹಬಾದ್, ದೆಲ್ಲಿ, ಪಾಟ್ನ, ನಾಗಪುರ್ ಫಸ್ಟ್ ಎಡಿಷನ್ ೧೯೮೩.

೧೬.ಮಿಸ್ರ ಆಂಡ್ ಪುರಿ,"ಇಂಡಿಯನ್ ಇಕಾನಮಿ", ಹಿಮಾಲಯ ಪಬ್ಲಿಕೇಷನ್ ಹೌಸ್, ಬಾಂಬೆ, ೨೦೦೫.

೧೭.ಪಿ.ಎಫ್ ಲೂಯಿಸ್ ಸ್ಮಿತ್, "ದ ಎವ್ಲ್ಯೂಷನ್ ಆಫ್ ಅಗ್ರಿಕಲ್ಚರಲ್ ಕೋ-ಒಪರೇಷನ್", ಆಕ್ಸ್‌ಫರ್ಡ್;ಬಸಿಲ್ ಬ್ಲಾಕ್ವೆಲ್ ಪಬ್ಲಿಕೇಷನ್, ೧೯೬೧.

೧೮.ಪ್ರೊ.ಕೆ.ಭೈರಪ್ಪ, 'ಗ್ರಾಮೀಣ ಅಭಿವೃದ್ಧಿ ಮುತ್ತು ಸಹಕಾರ',ಚೇತನ ಬುಕ್ ಹೌಸ್, ಮೈಸೂರು, ೨೦೦೨.

೧೯.ಪುರಾಣಿಕ್ ಯು.ಆರ್.(೨೦೦೫), ಸಹಕಾರ ಚಳುವಳಿಗೆ ನೂರರ ಸಂಭ್ರಮ, ಪ್ರಜಾವಾಣಿ, ವಾಣಿಜ್ಯ ಪುರವಣಿ, ಮೇ೨೦೦೫.

೨೦.ರೇಣುಕಾರ್ಯ ಸಿ.ಕೆ. ಸಹಕಾರ ಚಳುವಳಿಯ ಹೊಸ ಆಯಾಮಗಳು ಸಹಕಾರ, ಕರ್ನಾಟಕ ರಾಜ್ಯ ಸಹಕಾರಿ ಮಹಾಮಂಡಳಿ, ಬೆಂಗಳೂರು.

೨೧.ಆರ್.ಬಿ. ತ್ಯಾಗಿ, ರೀಸೆಂಟ್ ಟ್ರೆಂಡ್ಸ್ ಇನ್ ದ ಕೋ-ಅಪರೇಟಿವ್ ಮೂವ್‌ಮೆಂಟ್ ಇನ್ ಇಂಡಿಯಾ, ಬಾಂಬೆ; ಏಷಿಯಾ ಪಬ್ಲಿಷಿಂಗ್ ಹೌಸ್,೧೯೬೮,ಪು.೧೮.

೨೨.ರುದ್ದರ್ ದತ್ ಆಂಡ್ ಕೆ.ಪಿ.ಎಮ್. ಸುಂದರಮ್, "ಇಂಡಿಯನ್ ಇಕಾನಮಿ", ಎಸ್ ಚಾಂದ್ ಆಂಡ್ ಕಂಪನಿ ೨೦೦೫

೨೩.ಸಕ್ಸೇನ ಕೆ.ಕೆ., ಎವ್ಲ್ಯೂಷನ್ ಅಫ್ ಕೊಪರೇಟಿವ್ ಥಾಟ್"-೧೯೭೪

೨೪.ಸ್ಯಾಂಡರ್ಸ್.ಹೆಚ್.ಸಿ.(೧೯೮೭), ಸಹಕಾರ ವಿಸ್ತರಣಾ ಸೇವೆ(ಅನುದಾನ:ರಾಮ ಮೂರ್ತಿ,ಹೆಚ್.ಎಸ್.), ಕೃಷಿ ವಿಶ್ವ ವಿದ್ಯಾಲಯ, ಬೆಂಗಳೂರು, ಪು.೧೮.

೨೫.ಶ್ರೀ ಎಸ್ ಕೆ ಹೆಗ್ಡೆ, “ಡೆವಲಪ್‌ಮೆಂಟಲ್ ರೋಲ್ ಆಫ್ ಅರ್‌ಬನ್ ಕೊ-ಅಪರೇಡಿವ್ ಬ್ಯಾಂಕ್ ವಿದ್ ಸ್ಪೆಷಲ್ ರೆಫರೆನ್ಸ್ ಟು ದ ಸಿರ್‌ಸಿ ಅರ್‌ಬನ್ ಕೊ-ಆಪರೇಟಿವ್ ಬ್ಯಾಂಕ್”-೨೦೦೭.

೨೬.ತಾಳ್ಮಕಿ,ಕೋ-ಅಪರೇಷನ್ ಇನ್ ಇಂಡಿಯ ಆಂಡ್ ಅಬ್ರಾಡ್, ಬೆಸೆಲ್ ಮಿಷನ್ ಪ್ರೆಸ್, ಮಂಗಳೂರು,೧೯೮೧.

೨೭.ತಾರಾಪೊರೆ ಎಸ್.ಎಸ್.ರೂರಲ್ ಬ್ಯಾಂಕಿಂಗ್ ಎಟ್ ಕ್ರಾಸ್ ರೋಡ್ಸ್, ಫಸ್ಟ್ ಸ್ಪೆಷಲ್ ಲೆಕ್ಚರ್ ಅಂಡರ್ ಸಿಂಡಿಕೇಟ್ ಬ್ಯಾಂಕ್ ಚ್ಯಾರ್ ಆನ್ ರೂರಲ್ ಬ್ಯಾಂಕ್, ಮ್ಯಾಂಗಲೂರ್ ಯೂನಿವರ್ಸಿಟಿ, ಸೆಪ್ಟೆಂಬರ್ ೧೯, ೧೯೯೪

೨೮.ಜಿ.ಓ.ಐ ಡಿಪಾರ್ಟ್‌ಮೆಂಟ್ ಆಫ್ ಕೋ-ಆಪರೇಟಿವ್, ರಿಪೋರ್ಟ್, ೧೯೭೨-೭೩, ಪು.ಸಂ. ೮೫.

೨೯.ಜಿ.ಓ.ಐ ಡಿಪಾರ್ಟ್‌ಮೆಂಟ್ ಆಫ್ ಕೋ-ಆಪರೇಟಿವ್, ರಿಪೋರ್ಟ್, ೧೯೭೨-೭೩, ಪು.ಸಂ. ೫, ಪು ೫೮೦.

೩೦.ಜಿ.ಓ.ಐ. ಡಿಪಾರ್ಟ್‌ಮೆಂಟ್ ಆಫ್ ಕೋ-ಆಪರೇಷನ್ ರಿಪೋರ್ಟ್ ೧೯೭೨-೭೩ ಪು೨೯

೩೧. ಜಿ.ಓ.ಐ. ಡಿಪಾರ್ಟ್‌ಮೆಂಟ್ ಆಫ್ ಕೋ-ಆಪರೇಷನ್ ರಿಪೋರ್ಟ್ ೧೯೭೨-೭೩ ಪು೩೦

೩೨. ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ, ಅಖಿಲ ಭಾರತ ಗ್ರಾಮೀಣ ಸಾಲ ಸಮೀಕ್ಷಾ ಸಮಿತಿ ವರದಿ, ಬಾಂಬೆ, ೧೯೫೪

೩೩. ರಿಸರ್ವ್ ಬ್ಯಾಂಖ್ ಆಫ್ ಇಂಡಿಯಾ, ಅಖಿಲ ಭಾರತ ಸಾಲ ಪುನರ್ ವಿಮರ್ಶನಾ ಸಮಿತಿ ವರದಿ, ಬಾಂಬೆ, ೧೯೬೯

೩೪. ಆರ್.ಬಿ.ಐ, ರಿಪೋರ್ಟ್ ಆಫ್ ದ ಕಮಿಟಿ ಟು ರಿವ್ಯೂ ಅರೇಂಜ್‌ಮೆಂಟ್ಸ್ ಫಾರ್ ಇನ್ಸಿಟಿಟ್ಯೂಷನಲ್ ಕ್ರೆಡಿಟ್ ಫಾರ್ ಅಗ್ರಿಕಲ್ಚರ್ ಆಂಡ್ ರೂರಲ್ ಡೆವೆಲಪ್‌ಮೆಂಟ್ಸ್ (CRAFICARD) ಬಾಂಬೆ, ೧೯೮೧, ಪು ೩೪೯ & ಪು ೩೬೨.

೩೫. ಆರ್.ಬಿ.ಐ, ರಿಪೋರ್ಟ್ ಆಫ್ ದ ಅಗ್ರಿಕಲ್ಚರ್ ಕ್ರೆಡಿಟ್ ರಿವ್ಯೂ ಕಮಿಟಿ (ACRC) ಬಾಂಬೆ, ೧೯೮೯.

೩೬.ಬಜ್ಪೆ ವ್ಯವಸಾಯ ಸೇವಾ ಸಹಕಾರಿ ಬ್ಯಾಂಕ್(ನಿ) ಸುವಣ್ ಮಹೋತ್ಸವದ ಸ್ನೇಹ ಬಂಧು ಸ್ಮರಣ ಸಂಚಿಕೆ,೨೦೦೬.

೩೭. ಬಜ್ಪೆ ವ್ಯವಸಾಯ ಸೇವಾ ಸಹಕಾರಿ ಬ್ಯಾಂಕ್‌ನ ವಾರ್ಷಿಕ ವರದಿ ೨೦೦೬-೨೦೦೭,೨೦೦೭-೨೦೦೮,೨೦೦೮-೨೦೦೯,೨೦೦೯-೨೦೧೦,೨೦೧೦-೨೦೧೧.

೩೮. ಕಿನ್ನಿಗೋಳಿ ವ್ಯವಸಾಯ ಸೇವಾ ಸಹಕಾರಿ ಬ್ಯಾಂಕ್‌ನ ವಾರ್ಷಿಕ ವರದಿ ೨೦೦೬-೨೦೦೭,೨೦೦೭-೨೦೦೮,೨೦೦೮-೨೦೦೯,೨೦೦೯-೨೦೧೦,೨೦೧೦-೨೦೧೧.

**ವೆಬ್ ಸೈಟ್‌ಗಳು**

http://india.gov.in-Govt of India

http://sahakaradarpana.kar.in-sahakaradarpana-Department of co-operation audit.

http://www.karnatakagov.in-Gov of Karnataka

www.google.com